ಶ್ರೀ

ಶ್ರೀಮತೇ ರಾಮಾನುಜಾಯ ನಮಃ

ವಿಶದವಾಕ್ ಶಿಖಾಮಣಿ

ಶ್ರೀ ಮಣವಾಳ ಮಾಮುನಿ

ವಿರಚಿತ

ಉಪದೇಶರತ್ತಿನಮಾಲೈ

ಶ್ರೀ ಮಣವಾಳ ಮಾಮುನಿಗಳ ಉಪದೇಶರತ್ತಿನಮಾಲೆಯ
ಮೂಲ, ಪಾಶುರಗಳಿಗೆ ಕನ್ನಡ ಭಾಷೆಯಲ್ಲಿ
ಪ್ರತಿಪದಾರ್ಥ, ಮತ್ತು ತಾತ್ಪರ್ಯ ವ್ಯಾಖ್ಯಾನಗಳೊಡನೆ

ಪ್ರಕಾಶಕರು :
ಶ್ರೀ ಮಂಡಯಂ ಅಣ್ಣಾದೊರೆ ಶ್ರೀನಿವಾಸೈಯ್ಯಂಗಾರ್
ಯದುಗಿರಿಯಮ್ಮ ಟ್ರಸ್ಟ್
ನಂ. 9, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟೆ
ಬೆಂಗಳೂರು-560 018

ಶ್ರೀಃ

ಶ್ರೀಮತೇ ರಾಮಾನುಜಾಯ ನಮಃ

ವಿಶದವಾಕ್ ಶಿಖಾಮಣಿ

ಶ್ರೀ ಮಣವಾಳ ಮಾಮುನಿ

ವಿರಚಿತ

ಉಪದೇಶರತ್ತಿನಮಾಲೈ

ಶ್ರೀ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ
ಜೀಯರ್ ಸ್ವಾಮಿಗಳವರಿಂದ ಅನುಗ್ರಹಿಸಲ್ಪಟ್ಟ
ಪ್ರತಿಪದಾರ್ಥ ಮತ್ತು ವ್ಯಾಖ್ಯಾನಗಳು

ಪ್ರಕಾಶಕರು :
ಶ್ರೀ ಮಂಡಯಂ ಆಜ್ಞಾಧೂರಿ ಶ್ರೀನಿವಾಸೈಯ್ಯಂಗಾರ್
ಯದುಗಿರಿಯಮ್ಮ ಟ್ರಸ್ಟ್
ನಂ. 9, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟೆ
ಬೆಂಗಳೂರು-560 018

ಪ್ರಥಮ ಮುದ್ರಣ: 1974
ದ್ವಿತೀಯ ಮುದ್ರಣ: 1993

ಬೆಲೆ: ಐದು ರೂಪಾಯಿ

All Rights reserved
ಎಲ್ಲಾ ಹಕ್ಕುಗಳನ್ನೂ ಕಾದಿರಿಸಲಾಗಿದೆ

ಮುದ್ರಕರು:
ಶ್ರೀರಾಮ ಪ್ರಿಂಟರ್ಸ್
ನಂ. 14, ಶಾಕಾಂಬರಿನಗರ ಮುಖ್ಯ ರಸ್ತೆ
ಜೆ. ಪಿ. ನಗರ, ಬೆಂಗಳೂರು-560 078

ವಿಜ್ಞಾಪನೆ

ಶ್ರೀರಂಗಂ, ತಿರುಮಲೈ (ತಿರುಪತಿ), ಕಾಂಚೀಪುರಂ (ಪೆರುಮಾಳ್ ಕೋಯಿಲ್), ಶ್ರೀ ಯದುಶೈಲಂ ಎಂಬ ನಾಲ್ಕು ಶ್ರೀವೈಷ್ಣವ ಕ್ಷೇತ್ರಗಳಲ್ಲಿ ತಿರುನಾರಾಯಣಪುರವು ದಕ್ಷಿಣ ಬದರಿಕಾಶ್ರಮವೆಂದು ಸುಪ್ರಸಿದ್ಧವಾಗಿರುವ ದಿವ್ಯ ಕ್ಷೇತ್ರ. ಈಗ್ಗೆ ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಶ್ರೀ ಭಗವದ್ರಾಮಾನುಜರು ತಮ್ಮ ದಕ್ಷಿಣ ದೇಶದ ಯಾತ್ರೆಯಲ್ಲಿ ತಮ್ಮ ಆಪ್ತ ಶಿಷ್ಯರೊಡನೆ ತಿರುನಾರಾಯಣಪುರಕ್ಕೆ ಬಿಜಯಮಾಡಿಸಿ, ಅಲ್ಲಿ ತಿರುನಾರಾಯಣ ಮೂರ್ತಿಯನ್ನು ಪುನರುಜ್ಜೀವನಗೊಳಿಸಿ ತಿರುನಾರಾಯಣನಿಗೂ, ಉತ್ಸವಮೂರ್ತಿ ಚೆಲ್ವಪಿಳ್ಳೆಗೂ ಒಂದು ದಿವ್ಯ ದೇವಾಲಯವನ್ನು ನಿರ್ಮಿಸಿದುದು ಚರಿತ್ರಾಂಶವಾಗಿದೆ. ಅನಂತರ ಶ್ರೀ ರಾಮಾನುಜರು ದೇವಸ್ಥಾನದ ನಿತ್ಯ ಕೈಂಕರ್ಯಕ್ಕೂ ಮತ್ತು ಪಾಂಚರಾತ್ರಾಗಮಶಾಸ್ತ್ರಕ್ಕನುಸಾರವಾಗಿ ನಡೆಯಬೇಕಾದ ನಿತ್ಯಾರಾಧನಕ್ರಮಕ್ಕೂ ಒಂದು ದಿವ್ಯಮಠವನ್ನು ಸ್ಥಾಪಿಸಿದರು. ಈ ರಾಮಾನುಜ ಮಠವೇ ಇಂದಿನ ಇತಿಹಾಸ ಸುಪ್ರಸಿದ್ಧವಾದ ಶ್ರೀ ಯದುಗಿರಿ ಯತಿರಾಜ ಮಠವೆಂದು ಶೋಭಿಸುತ್ತಿದೆ.

ಈ ಪವಿತ್ರ ಮಠದ ಗುರುಪರಂಪರೆಯಲ್ಲಿ ಆದಿಯಿಂದಲೂ ಗುರುಪೀಠವನ್ನು ಅಲಂಕರಿಸಿದ್ದ ಜೀಯರ್ ಸ್ವಾಮಿಗಳವರು ಪರಂಪರಾಗತವಾದ ಸತ್ಸಂಪ್ರದಾಯ ನಿಷ್ಠರಾಗಿಯೂ, ಸದಾಚಾರ ಸಂಪನ್ನರುಗಳಾಗಿಯೂ, ತತ್ತ್ವಜ್ಞಾನಿಗಳಾಗಿಯೂ, ವಿದ್ವದ್ವರೇಣ್ಯರಾಗಿಯೂ, ಶ್ರೀ ಯದುಗಿರಿ ತಿರುನಾರಾಯಣ ಚೆಲ್ವಪಿಳ್ಳೆಗಳ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ ಕೈಂಕರ್ಯ ಪರರಾಗಿಯೂ, ತ್ಯಾಗಿಗಳಾಗಿಯೂ ಇದ್ದುಕೊಂಡು, ತಮ್ಮ ಮೇಧಾಶಕ್ತಿಯಿಂದ ಶ್ರೀಮಠವನ್ನು ವಿಶಿಷ್ಟಾದ್ವೈತ ಸಿದ್ಧಾಂತ ಪ್ರಚಾರ ಕೇಂದ್ರವಾಗಿಯೂ, ಜ್ಞಾನ ಮಂಟಪವಾಗಿಯೂ ನಿರ್ಮಿಸಿದ ಕೀರ್ತಿ ಈ ಗುರು ಪರಂಪರೆಗೆ ಸಲ್ಲುತ್ತದೆ.

ಪ್ರಸ್ತುತ ಶ್ರೀಮಠದ ಗುರುಪೀಠವನ್ನಲಂಕರಿಸಿರುವ ಶ್ರೀ ಶ್ರೀ ಜೀಯರ್ ಸ್ವಾಮಿಗಳವರು ತಮ್ಮ ಸೌಲಭ್ಯ, ಸೌಜನ್ಯ, ಸೌಶೀಲ್ಯ, ಸೌಹಾರ್ದ, ಕೃಪೆ, ಕಾರುಣ್ಯ, ಔದಾರ್ಯ ಮುಂತಾದ ಸಕಲಗುಣಗಳಿಂದಲೂ, ಪವಿತ್ರವಾದ ತಮ್ಮ ಆತ್ಮಗುಣಪೋಷಿತ ತೇಜಸ್ಸಿನಿಂದಲೂ ಎಲ್ಲ ಶಿಷ್ಯರು ಮತ್ತು ಅಭಿಮಾನಿಗಳ ಗೌರವಪೂರ್ವಕವಾದ ಆದರಕ್ಕೆ ಪಾತ್ರರಾಗಿರುವುದು ಅತ್ಯಂತ ಸಂತೋಷಕರವಾದ

ವಿಷಯ. ಅದರಲ್ಲೂ ಶ್ರೀ ಶ್ರೀ ಸ್ವಾಮಿಗಳವರ ಭಗವತ್ ಭಾಗವತ ಕೈಂಕರ್ಯ ಶ್ರದ್ಧೆಯು ಶ್ಲಾಘನೀಯವಾಗಿದೆ.

ಕೈಂಕರ್ಯಗಳಲ್ಲಿ ವಾಚಾ ಕೈಂಕರ್ಯ, ದೇಹ ಕೈಂಕರ್ಯ ಮತ್ತು ಧನ ಕೈಂಕರ್ಯವೆಂಬುವು ಪ್ರಧಾನವಾದುವುಗಳು. ಶ್ರೀ ಶ್ರೀ ಸ್ವಾಮಿಗಳವರು ದಿವ್ಯ ಪ್ರಬಂಧ ಸೇವೆ, ವೇದಪಾರಾಯಣ, ವಿಚಾರವಾದನ, ಕಾಲಕ್ಷೇಪ, ಉಪನ್ಯಾಸ ರೂಪವಾದ ವಾಚಾ ಕೈಂಕರ್ಯದಿಂದಲೂ, ಪುಷ್ಪವನ ನಿರ್ಮಾಣ, ಅದರ ಅಭಿವೃದ್ಧಿ, ತಿರುನಾರಾಯಣನಸನ್ನಿಧಿಯ ಪುಷ್ಪಕೈಂಕರ್ಯರೂಪವಾದ ದೇಹಕೈಂಕರ್ಯದಿಂದಲೂ ವಿಷಯಾಸಕ್ತಿರಹಿತರಾದುದರಿಂದ ಅರ್ಜಿತ ಧನವನ್ನು ಸದ್ವಿನಿಯೋಗ ಕೈಂಕರ್ಯದಿಂದಲೂ ಶ್ರೀಮತವನ್ನು ರಾಮಾನುಜ ಸಿದ್ಧಾಂತದ ಜ್ಞಾನಮಂಟಪವನ್ನಾಗಿ ಪರಿವರ್ತಿಸಿರುವರು.

ಆದಿಶೇಷಾಂಶಭೂತರಾಗಿ ಶ್ರೀ ರಾಮಾನುಜರ ಪುನರವತಾರರಾಗಿ ಅವತರಿಸಿದವರು ಶ್ರೀ ಮಣವಾಳ ಮಾಮುನಿಗಳು. ಈ ಲೋಕದಲ್ಲಿ ಈ ಮಹಾತ್ಮರು ಅವತರಿಸಿದನಂತರ ಸಮಸ್ತ ಚೇತನರಲ್ಲಿಯೂ ಭಕ್ತಿ, ಜ್ಞಾನ, ವೈರಾಗ್ಯವನ್ನು ಅಭಿವೃದ್ಧಿಗೊಳಿಸಲು, ಹಲವಾರು ವ್ಯಾಖ್ಯಾನ ಗ್ರಂಥಗಳನ್ನು ರಚಿಸಿ ಶ್ರೀವೈಷ್ಣವ ಕುಲಕ್ಕೆ ಮಹದುಪಕಾರವನ್ನು ಮಾಡಿರುವುದು ಚಿರಸ್ಮರಣೀಯವಾಗಿದೆ. ಅವರ ಹಲವಾರು ಗ್ರಂಥಗಳ ಒಂದು ಕೃತಿಯಲ್ಲಿ ನಿತ್ಯಸೂರಿಗಳಾದ ಆಳ್ವಾರ್ ಆಚಾರ್ಯರುಗಳ ಅನುಷ್ಠಾನ ವಿಶೇಷಗಳೂ, ಅವತರಿಸಿದ ಕಾಲ, ಪವಿತ್ರ ಜೀವನ ಚರಿತ್ರೆ, ಶ್ರೀವೈಷ್ಣವ ಧರ್ಮದ ಪವಿತ್ರತೆ ಮುಂತಾದ ಗಮನಾರ್ಹ ವಿಷಯಗಳು ಭವಿಷ್ಯ ಪರಂಪರೆಯ ತಿಳುವಳಿಕೆಗೋಸ್ಕರ ವಿವರಿಸಲ್ಪಟ್ಟಿವೆ. ಈ ಗ್ರಂಥವು ಮಹಾನುಭಾವರಾದ ಶ್ರೀ ಮಣವಾಳ ಮಾಮುನಿಗಳ ಉಪದೇಶ ಸಾರಾಂಶವಾಗಿ, ಒಂದೊಂದು ಪಾಶುರವೂ ಅಮೌಲ್ಯವಾದ ರತ್ನದಂತೆ ಶೋಭಿಸುತ್ತಾ 73 ರತ್ನಗಳ ಮಾಲೆಯಂತಿರುವುದರಿಂದ "ಉಪದೇಶರತ್ನಮಾಲೈ" ಎಂಬ ಪವಿತ್ರ ಹೆಸರಿನಿಂದ ಶೋಭಿಸುತ್ತಿದೆ.

ಶ್ರೀ ಶ್ರೀ ಸ್ವಾಮಿಗಳವರು ಈ ಪಾಶುರಗಳ ಅರ್ಥವನ್ನು ಸರಳ ಮತ್ತು ಸುಲಲಿತವಾದ ಶೈಲಿಯಲ್ಲಿ ಪ್ರತಿಪದಾರ್ಥ ಮತ್ತು ತಾತ್ಪರ್ಯದೊಡನೆ ಗ್ರಂಥ ರೂಪದಲ್ಲಿ ಅನುಗ್ರಹಿಸಿ, ಶಿಷ್ಯರುಗಳಿಗೂ, ಅಭಿಮಾನಿಗಳಿಗೂ ಮಹದುಪಕಾರವನ್ನು ಮಾಡಿರುತ್ತಾರೆ. ಆಸ್ತಿಕ ಮಹನೀಯರುಗಳೂ ಸ್ತ್ರೀಬಾಲಕಾದಿ ಸಮಸ್ತ ಭಕ್ತರುಗಳೂ ಈ ಗ್ರಂಥವನ್ನು ಅನುಸಂಧಾನಮಾಡಿ, ಶ್ರೀ ಲಕ್ಷ್ಮೀನರಸಿಂಹನ ಕೃಪಾಕಟಾಕ್ಷಕ್ಕೂ ಶ್ರೀ ಸ್ವಾಮಿಗಳವರ ಅನುಗ್ರಹಕ್ಕೂ ಪಾತ್ರರಾಗಬೇಕೆಂಬುದೇ ನನ್ನ ಕೋರಿಕೆ.

ಈ ಗ್ರಂಥದ ಪ್ರಕಾಶನವನ್ನು ವಹಿಸಿಕೊಂಡು ಎಲ್ಲಾ ರೀತಿಯಲ್ಲಿಯೂ, ವಿಶ್ವಾಸದಿಂದ ಸಂಪೂರ್ಣ ಸಹಾಯವನ್ನು ಒದಗಿಸಿಕೊಟ್ಟ "ಶ್ರೀ ಮಂಡಯಂ ಅಣ್ಣಾಛತ್ರಿ ಶ್ರೀನಿವಾಸಯ್ಯಂಗಾರ್–ಯದುಗಿರಿಯಮ್ಮ ಟ್ರಸ್ಟ್" ಸದಸ್ಯರುಗಳಿಗೆಲ್ಲಾ, ಶ್ರೀ ಯತಿರಾಜಮಠದ ಕಾರ್ಯನಿರ್ವಾಹಕ ಸಮಿತಿಯ ಹೃತ್ಪೂರ್ವಕವಾದ ವಂದನೆಗಳನ್ನೂ, ಕೃತಜ್ಞತೆಯನ್ನೂ ಅರ್ಪಿಸುತ್ತೇನೆ.

ಈ ಪುಸ್ತಕದ ಮುದ್ರಣ ಕಾರ್ಯದಲ್ಲಿ, ಕರಡುಗಳಲ್ಲಿ (Proof sheets) ಕಂಡುಬರುತ್ತಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ, ಪುಸ್ತಕದ ಶೋಧನ ಕಾರ್ಯದಲ್ಲಿ ಆಸಕ್ತಿಯಿಂದಲೂ, ಶ್ರದ್ಧೆಯಿಂದಲೂ ಬಹುಮಟ್ಟಿಗೆ ಸಹಕರಿಸಿ ಉಪಕಾರ ಮಾಡಿದ ವಿದ್ಯಾಭೂಷಣ ಆ. ನ. ಶ್ರೀನಿವಾಸ ಅಯ್ಯಂಗಾರ್ಯ ಸ್ವಾಮಿಗಳವರಿಗೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸಲು ಸಂತೋಷಿಸುತ್ತೇನೆ.

ಈ ಗ್ರಂಥವನ್ನು ಅಂದವಾಗಿ ಸಕಾಲದಲ್ಲಿ ಮುದ್ರಿಸಿಕೊಟ್ಟ 'ಶ್ರೀ ಶಂಕರ ಪ್ರಿಂಟಿಂಗ್ ವರ್ಕ್ಸ್' ಗೆಳೆಯರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಆಸ್ತಿಕ ಮಹಾಶಯರುಗಳೆಲ್ಲಾ ಶ್ರೀವೈಷ್ಣವ ಕುಲಕ್ಕೆ ಆದರ್ಶನೀಯವಾದ ಕೀರ್ತಿಯುತವಾದ ಈ ಸದ್ಗ್ರಂಥವನ್ನು ಓದಿ ಕೃತಾರ್ಥರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಬೆಂಗಳೂರು
10-1-1974

ಮಂಡಯಂ ಆಧ್ಯಾತ್ಮಿಕ ರಂಗಸ್ವಾಮಿ
ಗೌರವ ಕಾರ್ಯದರ್ಶಿ

ಉಪೋದ್ಘಾತ

ಶ್ರೀಯಃಪತಿಯಾಗಿಯೂ ಅವಾಪ್ತಸಮಸ್ತ ಕಾಮನಾಗಿಯೂ ಸಮಸ್ತ ಕಲ್ಯಾಣ ಗುಣಾತ್ಮಕನಾಗಿಯೂ ಇರುವ ಶ್ರೀಮನ್ನಾರಾಯಣನು ಜೀವಾತ್ಮರುಗಳು ತನ್ನನ್ನು ಆಶ್ರಯಿಸಿ ಸದ್ಗತಿಯನ್ನು ಹೊಂದಬೇಕೆಂಬ ಅಪೇಕ್ಷೆಯುಳ್ಳವನಾಗಿ—ಅನೇಕ ಶಾಸ್ತ್ರ ಪುರಾಣಾದಿಗಳನ್ನು ಋಷಿಗಳಿಂದ ಉಪದೇಶ ಮಾಡಿಸಿದರೂ ಜೀವಾತ್ಮರುಗಳು ಅಜ್ಞಾನಾಂಧಕಾರದಿಂದ ವಿಮುಕ್ತರಾಗದೆ, ಜನ್ಮಜರಾಮರಣಾದಿಗಳಿಂದ ಕ್ಲೇಶಪಡುತ್ತಿರುವುದನ್ನು ನೋಡಿ, ಚಿಂತಾಕ್ರಾಂತನಾಗಿ—ರಾಮಕೃಷ್ಣಾದಿ ಅವತಾರಗಳನ್ನು ಎತ್ತಿ ಆ ಅವತಾರ ಮೂಲಕವಾಗಿ ಅತಿಮಾನುಷವಾದ ಕಾರ್ಯಗಳನ್ನು ತೋರಿಸಿದರೂ ಆ ಭಗವಂತನನ್ನು ತಮ್ಮಂತೆ ಇವನು ಮನುಷ್ಯ ಸಾಮಾನ್ಯನೆಂದು ಭಾವಿಸಿದ ಕಾರಣ—ಭಗವಂತನು ತನ್ನ ಹಾಸಿಗೆಯಾದ ಆದಿಶೇಷನನ್ನು ಭೂಲೋಕದಲ್ಲಿ ಅವತರಿಸಿ ಜೀವಾತ್ಮರುಗಳಿಗೆ ಜ್ಞಾನೋಪದೇಶವನ್ನು ಮಾಡಿ ಸದ್ಗತಿ ಹೊಂದುವಂತೆ ಮಾಡಲು ಆಜ್ಞೆ ಮಾಡಲು, ಶ್ರೀ ಆದಿಶೇಷನು ("ಅನಂತಃಪ್ರಥಮಂರೂಪಂ ಲಕ್ಷ್ಮಣಶ್ಚ ತತಃಪರಂ-ಬಲಭದ್ರಸ್ತೃತೀಯಸ್ತು ಕಲೌಕಶ್ಚಿದ್ಭವಿಷ್ಯತಿ") ಎನ್ನುವ ಶಾಸ್ತ್ರಪ್ರಕಾರ ಶ್ರೀ ವೈಕುಂಠದಲ್ಲಿ—ಪ್ರಥಮ ಆದಿಶೇಷನಾದವನು..ರಾಮಾವತಾರದಲ್ಲಿ ಲಕ್ಷ್ಮಣನಾಗಿಯೂ,ಕೃಷ್ಣಾವತಾರದಲ್ಲಿ ಬಲರಾಮನಾಗಿ ಕೃಷ್ಣನಿಗೆ ಅಂಗರಕ್ಷಕನಾಗಿಯೂ ಸಕಲ ವಿಧದಲ್ಲಿಯೂ ಸೇವೆಯನ್ನು ನಡೆಸುತ್ತಿದ್ದ ಆದಿಶೇಷನೇ ಕಲಿಯುಗದಲ್ಲಿ ರಾಮಾನುಜಾಚಾರ್ಯರಾಗಿ ಅವತರಿಸಿ—ಅಸಂಖ್ಯಾತರಾದ ಜೀವಾತ್ಮರುಗಳಿಗೆ ಜ್ಞಾನೋಪದೇಶವನ್ನು ಮಾಡಿ ಸ್ವಸ್ಥಾನಕ್ಕೆ ಬಿಜಮಾಡಿಸಿದನಂತರ ಸುಮಾರು ಎರಡುನೂರು ವರ್ಷಗಳು ಕಳೆದನಂತರ ಭೂಲೋಕದಲ್ಲಿ ದಿವ್ಯ ಪ್ರಬಂಧಗಳಿಗೆ ಅಪಾರ್ಥಗಳನ್ನು ಪ್ರಕಟಿಸುವವರು ಅಧಿಕವಾಗಲು ಪುನಃ ಭಗವಂತನು ಆದಿಶೇಷನಿಗೆ ಆಜ್ಞೆ ಮಾಡಲು ಆದಿಶೇಷನು ಶ್ರೀ ರಾಮಾನುಜಾಚಾರ್ಯರ ಅಪರಾವತಾರವೆಂದು ಪರಿಗಣಿಸುವಂತೆ—ಶ್ರೀ ಮಣವಾಳ ಮಾಮುನಿಗಳಾಗಿ ಅವತರಿಸಲು ನಿಶ್ಚಯಿಸಿ "ಶಿಪಕ್ಕಿಡನ್ದಾನ್—ತಿರುನಾವೀರುಡೈಯಪಿರಾನ್ ತಾದರಣ್ಣರೈಯ್ಯರ್" ಎನ್ನುವರ ಕುಮಾರರಾಗಿ ಆಳ್ವಾರ್ ತಿರುನಗರಿಯಲ್ಲಿ ಅವತರಿಸಿ ಶಾಸ್ತ್ರೋಕ್ತರೀತ್ಯಾ ಚೌಲೋಪನಯನ ಸಂಸ್ಕಾರಗಳಿಂದ ಅಲಂಕೃತರಾಗಿ,ತಮ್ಮ ತಂದೆಯವರಿಂದಲೂ ಮತ್ತು ಸೋದರಮಾವನವರಿಂದಲೂ ಶಾಸ್ತ್ರಾಭ್ಯಾಸಗಳನ್ನು ಅಧಿಕರಿಸಿ, ಗೃಹಸ್ಥಾಶ್ರಮವನ್ನು ಅಂಗೀಕರಿಸಿ, ತಿರುವಾಯಿಮೊಳಿಪಿಳ್ಳೈ ಎಂಬ ಗುರುಗಳಿಂದ ಸಕಲ

ಶಾಸ್ತ್ರಾರ್ಥವನ್ನು ಅಧಿಕರಿಸಿ—ಸಂಸಾರದಲ್ಲಿ ಜಿಹಾಸೆಯಿಂದ ಸನ್ಯಾಸಾಶ್ರಮವನ್ನು ಅಂಗೀಕರಿಸಿ—ಶ್ರೀರಂಗದಲ್ಲಿ ಶ್ರೀ ರಂಗನಾಥನ ಅಪ್ಪಣೆ ಪ್ರಕಾರ ಶ್ರೀ ಅಳಗಿಯ ಮಣವಾಳ ಮಂಟಪದಲ್ಲಿ ನಮ್ಮಾಳ್ವಾರ್ರವರಿಂದ ರಚಿಸಲ್ಪಟ್ಟು, ನಂಪಿಳ್ಳೆಯವರಿಂದ ವ್ಯಾಖ್ಯಾನಿಸಲ್ಪಟ್ಟು, ವಡಕ್ಕುತಿರುವೀಧಿಪಿಳ್ಳೆಯವರಿಂದ ಬರೆಯಲ್ಪಟ್ಟು, ತಿರುವಾಯ್ಮೊಳಿಪಿಳ್ಳೆಯವರಿಂದ ಉಪದೇಶಿಸಲ್ಪಟ್ಟ ಮುಪ್ಪತ್ತಾರಾಯಿರಪ್ಪಡಿ ಎನ್ನುವ ಗ್ರಂಥವನ್ನು ಒಂದು ವರ್ಷಕಾಲ ಕಾಲಕ್ಷೇಪವನ್ನು ಹೇಳಿ—ಶ್ರೀ ರಂಗನಾಥನಿಂದ "ಶ್ರೀ ಶೈಲೇಶದಯಾಪಾತ್ರಂ ಧೀಭಕ್ತ್ಯಾದಿಗುಣಾರ್ಣವಂ—ಯತೀನ್ದ್ರ ಪ್ರವಣಂವನ್ದೇರಮ್ಯಜಾಮಾತರಂ ಮುನಿಂ" ಎಂಬ ಬಿರುದನ್ನು ಪಡೆದವರಾದ ಶ್ರೀ ಮಣವಾಳ ಮಾಮುನಿಗಳು ತಮಗೆ ತಮ್ಮ ಗುರುಗಳಿಂದ ಉಪದೇಶವಾದ ಅರ್ಥವನ್ನೂ ಮತ್ತು ಆಳ್ವಾರ್ರುಗಳೂ ಆಚಾರ್ಯರುಗಳೂ ಅವತರಿಸಿದ ತಿಂಗಳು, ನಕ್ಷತ್ರಗಳು ಮತ್ತು ಆಚಾರ್ಯರುಗಳಿಂದ ಉಂಟಾದ ಉಪದೇಶ ಪರಂಪರೆಗಳನ್ನು ಈ "ಉಪದೇಶ ರತ್ನಮಾಲೈ" ಎಂಬ ಗ್ರಂಥದಲ್ಲಿ ಪ್ರಕಾಶಪಡಿಸಿದ್ದಾರೆ.

—ಶ್ರೀ ಯತಿರಾಜಃ

ಮುನ್ನುಡಿ

(ದ್ವಿತೀಯ ಮುದ್ರಣಕ್ಕೆ ಶ್ರೀ ಯಾದುಗಿರಿ ಯತಿರಾಜಮಠದ
ಶ್ರೀ ಆಸೂರಿ ಸಂಪತ್ಕುಮಾರ ಶ್ರೀನಿವಾಸ ರಾಮಾನುಜ
ಜೀಯರ್ ಸ್ವಾಮಿಗಳು ಅನುಗ್ರಹಿಸಿದ
ಮಂಗಳಾಶಾಸನ)

ಶ್ರೀಮತೇ ರಾಮಾನುಜಾಯ ನಮಃ
ಧರ್ಮೋ ರಕ್ಷತಿ ರಕ್ಷಿತಃ

ನಾವು ಯಾರೆಂದು ಪ್ರಶ್ನಿಸಿದಾಗ ನಮ್ಮ ಹಿರಿಯರು ಗುರುಗಳು ಯಾರು? ಅವರು ರಚಿಸಿದ ಗ್ರಂಥಗಳೇನು ಇತ್ಯಾದಿ ಜ್ಞಾಪಿಸಿಕೊಳ್ಳಲು "ಈ ಉಪದೇಶರತ್ನ ಮಾಲೈ" ಎಂಬ ಗ್ರಂಥವು ಬರೆಯಲ್ಪಟ್ಟಿರುವುದು.

ಈ ಗ್ರಂಥವನ್ನು ವಿಶದವಾಕ್ ಶಿಖಾಮಣಿ ಶ್ರೀ ಮಣವಾಳ ಮಾಮುನಿಗಳೆಂಬುವರು ಬರೆದಿರುವರು. ಇವರು ಪರಿವ್ರಾಜಕರು. ಶ್ರೀವೈಷ್ಣವ ಕುಲಕ್ಕೆ ಗುರುಗಳು. ಈ ಗ್ರಂಥವು ಚರಿತ್ರಾರ್ಹವಾದ ಗ್ರಂಥ. 73 ಪಾಶುರ (ಪದ್ಯ)ಗಳಿಂದ ಕೂಡಿದೆ. ಮೊದಲನೆಯ ಪಾಶುರದಲ್ಲಿ ಗ್ರಂಥಕರ್ತೃವಿನ ಮತ್ತು ಅವರ ಗುರುಗಳ ವಿಚಾರವಿರುವುದು. 3 ರಿಂದ 61 ಪಾಶುರದವರೆಗೆ ಆಳ್ವಾರುಗಳು, ಆಚಾರ್ಯರುಗಳು, ಅವರ ಕ್ರಮ, ಶ್ರೇಷ್ಠತೆ, ಅವರ ಬಿರುದು (ಪ್ರಶಸ್ತಿ), ಅವರ ವಿದ್ಯೆ, ಅವರು ಹುಟ್ಟಿದ ಊರು—ಅವತಾರ ಸ್ಥಳ, ಮಾಸ, ನಕ್ಷತ್ರ—ಅವರು ರಚಿಸಿದ ಗ್ರಂಥಗಳು, ವ್ಯಾಖ್ಯಾನಗಳು ಮುಂತಾದುವು ಕ್ರಮವರಿತು ಬರೆದಿವೆ. ಇದು ಅರ್ಥಾತ್ ಸಂಪೂರ್ಣ ಗುರು ಪರಂಪರಾ ಚರಿತ್ರೆ ಎನ್ನಬಹುದು. ಈ ರೀತಿ "ಉಪದೇಶ ರತ್ನ ಮಾಲೈ" ಎಂಬ ಹೆಸರಿನಲ್ಲಿ ಲೋಕೋಪಕಾರವಾಗಿ ಬರೆದು ಬಂದಿರುವ ಗುರು ಪರಂಪರಾಗ್ರಂಥವನ್ನು ಓದುವುದರಿಂದ ನಾವು ಒಂದಾವರ್ತಿ ನಮ್ಮ ಪೂರ್ವಾಚಾರ್ಯರನ್ನೆಲ್ಲಾ ಜ್ಞಾಪಿಸಿಕೊಂಡಂತಾಗುವುದು.

ಇಂಥಾ ಗ್ರಂಥವನ್ನು ಬರೆದ ಶ್ರೀ ಮಣವಾಳ ಮಾಮುನಿಗಳಿಗೆ ನಮಸ್ಕರಿಸಿ ಈ ಗ್ರಂಥವನ್ನು ಓದುವವರಿಗೆ ಸರ್ವಮಂಗಳವುಂಟಾಗಲೆಂದೂ ಆಶೀರ್ವದಿಸಿ, ಈ ರೀತಿಯಾಗಿ ಜ್ಞಾನೋಪಯುಕ್ತವಾಗಿ ಗ್ರಂಥವನ್ನು ಮುದ್ರಿಸಿ ಪ್ರಕಟಪಡಿಸಿದ ಮಹನೀಯರು ಇಂಥ ಇನ್ನೂ ಅನೇಕ ಗ್ರಂಥಗಳನ್ನು ಪ್ರಕಟಪಡಿಸಲಿ, ಭಗವಂತನು ಅವರಿಗೆ ಆಯುರಾರೋಗ್ಯ ಐಶ್ವರ್ಯ ಜ್ಞಾನ ಶಕ್ತಿಗಳನ್ನು ಕೊಡಲೆಂದು ಆಶಿಸಿ ಮಂಗಳಾಶಾಸನ ಮಾಡುತ್ತೇವೆ.

27–2–1993, ಶನಿವಾರ **ಶ್ರೀ ಯತಿರಾಜ**
ಮಲ್ಲೇಶ್ವರಂ, ಬೆಂಗಳೂರು

ಶ್ರೀರಸ್ತು

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ರಮ್ಯಜಾಮಾತೃ ಮುನೀಂದ್ರಾಯ ನಮಃ

ಶ್ರೀ ವಿಶದವಾಕ್ ಶಿಖಾಮಣಿಗಳಾದ ಮಣವಾಳ ಮಾಮುನಿಗಳು ರಚಿಸಿದ ಉಪದೇಶ ರತ್ತಿನ ಮಾಲೈ

ಕೋಯಿಲ್ ಕಂದಾಡೈ ಅಣ್ಣನ್ ರಚಿಸಿದ ತನಿಯನ್

ಮುನ್ನಂ ತಿರುವಾಯ್ಮೊಳಿಪ್ಪಿಳ್ಳೈ ತಾಮುಪದೇಶಿತ್ತ
ನೇರ್ ತನ್ನಿನ್ ಪಡಿಯೈತ್ತಣವಾದ ಶೊಲ್ ಮಣವಾಳ ಮುನಿ।
ತನ್ನನ್ಬುಡನ್ ಶೆಯ್ ಉಪದೇಶರತ್ತಿನಮಾಲೈತನ್ನೈ
ತನ್ನೆಂಜಂತನ್ನಿಲ್ ತರಿಪ್ಪವರ್ ತಾಳ್‌ಗಳ್ ಶರಣ್ ನಮಕ್ಕೇ

(ನೇರಿಸೈವೆಣ್ಬಾ)

*ಎನ್ದೈ ತಿರುವಾಯ್ಮೊಳಿಪ್ಪಿಳ್ಳೈ ಇನ್ನರುಳಾಲ್
ವಂದ ಉಪದೇಶಮಾರ್ಗತ್ತೈಚ್ಚಿಂದೈಶೆಯ್ದು,
ಪಿನ್ನವರುಂಕರ್ಕ ಉಪದೇಶಮಾಯ್ಪ್ಪೇಶುಗಿನ್ರೇನ್
ಮನ್ನಿಯಶೀರ್ ವೆಣ್ಬಾವಿಲ್ ವೈತ್ತು ॥ ೧ ॥

ಕರ್ರೋರ್‌ಗಳ್ ತಾಮುಗಪ್ಪರ್ ಕಲ್ವಿತನ್ನಿಲಾಶೈ
ಯುಳ್ಳೋರ್, ಪೆರ್ರೋಮೆನವುಗನ್ದು ಪಿನ್ಬುಕರ್ಪರ್,
ಮರ್ರೋರ್‌ಗಳ್ ಮಾಚ್ಚರಿಯತ್ತಾಲಿಗಳಿಲ್ ವಂದದು
ಎನ್ನೆಂಜೇ, ಇಗಳ್‌ಗೈ ಆಚ್ಚರಿಯನ್ರೋ ಅವರ್ಕ್ಕು ॥ ೨ ॥

ಸೂಚನೆ—*ನಕ್ಷತ್ರದ ಗುರುತಿರುವ ಪಾಸುರಗಳನ್ನು ಎರಡು ಸಲ ಹೇಳಬೇಕು.

*ಆಳ್ವಾರ್‌ಗಳ್ ವಾಳಿ. ಅರುಳಿಚ್ಚೆಯಲ್ ವಾಳಿ.
ತಾಳ್ವಾದುಮಿಲ್ ಕುರವರ್ ತಾಂ ವಾಳಿ.
ಏಳ್‌ಪಾರುಮುಯ್ಯ ಅವರ್‌ಗಳುರೈತ್ತವೈಗಳ್ ತಾಂ
ವಾಳಿ. ಶೆಯ್ಯಮಱೈತನ್ನುಡನೇ ಶೇರ್‌ನ್ದು || ೩ ||

ಪೊಯ್‌ಗೈಯಾರ್ ಪೂದತ್ತಾರ್ ಪೇಯಾರ್,
ಪುಗಳ್‌ಮಳಿಶೈ ಅಯ್ಯನರುಳ್ ಮಾಱನ್
ಶೇರಲರ್‌ಕೋನ್, ತುಯ್ಯಪಟ್ಟನಾದನ್ ಅನ್ಬರ್
ತಾಳ್‌ತೂಳಿ, ನಱ್ ಪಾಣನ್ ನಱ್ ಕಲಿಯನ್ ಈ
ದಿವರ್ ತೋಱ್ಱತ್ತಡೈವಾಮಿಂಗು || ೪ ||

"ಅನ್ದಮಿಳಾಲ್ ನಱ್ಕಲೈಗಳ್, ಆಯ್‌ನ್ದು
ರೈತ್ತವಾಳ್ವಾರ್‌ಗಳ್, ಇನ್ದ ಉಲಹಿಲ್ ಇರುಳ್ ನೀಂಗ,
ವನ್ದುದಿತ್ತ ಮಾದಂಗಳ್ ನಾಳ್‌ಗಳ್ ತಮ್ಮೈ ಮಣ್ಣು
ಲಹೋರ್ ತಾಮಱಿಯ, ಈದೆನ್ರು ಶೊಲ್ಲುವೋಂ ಯಾಂ" || ೫ ||

ಐಪ್ಪಶಿಯಿಲೋಣಮವಿಟ್ಟಂ ಶದಯಮಿವೈ,
ಒಪ್ಪಿಲವಾನಾಳ್‌ಗಳ್ ಉಲಹತ್ತೀರ್, ಎಪ್ಪುವಿಯುಂ
ಪೇಶುಪುಗಳ್. ಪೊಯ್‌ಗೈಯಾರ್ ಪೂದತ್ತಾಲ್
ಪೇಯಾಳ್ವಾರ್, ತೇಶುಡನೇ ತೋನ್ರು ಶಿಱಪ್ಪಾಲ್ || ೬ ||

ಮಱ್ಱುಳ್ಳ ಆಳ್ವಾರ್‌ಗಳುಕ್ಕು ಮುನ್ನೇ ವನ್ದುದಿತ್ತು,
ನಱ್ಱಮಿಳಾಲ್ ನೂಲ್‌ಶೆಯ್‌ದು ನಾಟ್ಟೈಯುಯ್‌ತ್ತ
ಪೆಱ್ಱಿಮೈಯೋರ್ ಎನ್ರು ಮುದಲಾಳ್ವಾರ್‌ಗಳ್
ಎನ್ನುಂ ಪೇರ್ ಇವರ್ಕ್ಕು, ನಿನ್ರದು
ಉಲಹತ್ತೇ ನಿಹಳ್‌ನ್ದು || ೭ ||

ಶೇಡೈನೆಂಜೇ, ಇಱೈಪ್ಪೆರುಮೈ ಅಱಿಂದಿಟ್ಟೈಯೋ,
ಪಡುಶೆಡುಮ್ಬು ಇಱೈಕ್ಕನ್ನಿಲ್—ಪಿಱಂಗಿನ್ರೇನ್,
ವಾಯ್‌ತ್ತುಗಳ್. ಮಂಗೈಯರ್ ಪೋಱ್ಱುಮಾನಿಲತ್ತಿಲ್
ವಂದುದಿತ್ತ, ಕಾರ್ತ್ತಿಗೈಯಿಲ್ ಕಾರ್ತ್ತಿಗೈನಾಳ್ ಕಾಣ್ ॥ ೮ ॥

ಮಾಱ ಪಣಿತ್ತ ತಮಿೞ್ ಮಾಱೈಕ್ಕು ಮಂಗೈಯರ್ ಕೋನ್,
ಆರಂಗಂಕೋರ ಅವತರಿತ್ತ, ತಿರುಮಂಗೈ ಕಾರ್ತ್ತಿಗೈಯಿಲ್
ಕಾರ್ತ್ತಿಗೈನಾಳ್ ಎನ್ಱೆನ್ಱು ಕಾದಲಿಪ್ಪಾರ್ ವಾಯ್‌ತ್ತ
ಮಲರ್ ತ್ತಾಳ್ಗಳ್ ನೆಂಜೇ ವಾೞ್ತ್ತು ॥ ೯ ॥

ಕಾರ್ತ್ತಿಗೈಯಿಲ್ ರೋಹಿಣಿನಾಳ್ ಕಾಣ್ಮಿನ್ ಇನ್ಱು
ಕಾಶಿನಿಯೀರ್, ವಾಯ್‌ತ್ತಪುಗೞ್, ಪ್ಪಾಣರ್ ವಂದು
ದಿಪ್ಪಾಲ್, ಆತ್ತಿಯರ್ಗಳ್ ಅನ್ಬುಡನೇ ತಾನ್
ಅಮಲನಾದಿಪಿರಾನ್ ಕಱ್ಱದಱ್ಪಿನ್ ನನ್ಗುಡನೇ
ಕೊಂಡಾಡುಂನಾಳ್ ॥ ೧೦ ॥

"ಮನ್ನಿಯ ಶೀರ್ ಮಾರ್ಗೞಿಯಿಲ್ ಕೇಟ್ಟೈಯಿನ್ಱು
ಮಾನಿಲತ್ತೀರ್, ಎನ್ನಿದನುಕ್ಕೇತ್ತಮೆನಿಲ್ ಉರೈಕ್ಕೇನ್,
ತುನ್ನುಪುಗೞ್. ಮಾಮಱೈಯೋನ್ ತೊಂಡರಡಿಪ್ಪೊಡಿ
ಯಾೞ್ವಾರ್ ಪಿಱಪ್ಪಾಲ್, ನಾನ್ಮಱೈಯೋರ್
ಕೊಂಡಾಡುಂನಾಳ್" ॥ ೧೧ ॥

"ತೈಯಿಲ್ ಮಗಂ ಇನ್ಱು ತಾರಣಿಯೀರ್ ಏತ್ತಂ, ಇಂದ
ತ್ತೈಯಿಲ್ ಮಗತ್ತುಕ್ಕು ಚ್ಚಾಱ್ಱುಗಿನ್ರೇನ್, ತುಯ್ಯಮದಿ
ಪೆತ್ತ ಮೞಿಶೈಪ್ಪಿರಾನ್ ಪಿಱಂದನಾಳೆನ್ಱು,
ನಲ್ ತವರ್ಗಳ್ ಕೊಂಡಾಡುಂನಾಳ್" ॥ ೧೨ ॥

ಮಾಶಿಪ್ಪುನರ್ಪೂಶಂ ಕಾಣ್ಮಿನ್ ಇನ್ರು ಮಣ್ಣುಲಗೀರ್,
ತೇಶಿತ್ತಿವಶತ್ತುಕ್ಕೇದೆನ್ನಿಲ್—ಪೇಶುಗಿನ್ರೇನ್,
ಕೊಲ್ಲಿನಗರ್ಕ್ಕೋನ್ ಕುಲಶೇಖರನ್ ಪಿರಪ್ಪಾಲ್,
ನಲ್ಲವರ್ಗಳ್ ಕೊಂಡಾಡುಂ ನಾಳ್ ॥ ೧೩ ॥

ಏರಾರ್ ವೈಗಾಶಿ ವಿಶಾಗತ್ತಿನ್ ಏತ್ತತ್ತೈ, ಪ್ಪಾರೋರ್
ಅರಿಯಪ್ಪಗರ್ಗಿನ್ರೇನ್, ಶೀರಾರುಂ ವೇದಂ ತಮಿಳ್,
ಶೆಯ್ದ ಮೆಯ್ಯನ್ ಎಳಿಲ್ ಕುರುಗೈನಾದನ್,
ಅವತರಿತ್ತ ನಾಳ್ ॥ ೧೪ ॥

*ಉಂಡೋ ವೈಗಾಶಿ ವಿಶಾಗತ್ತುಕ್ಕು ಒಪ್ಪೊರು ನಾಳ್,
ಉಂಡೋ ಶಠಕೋಪರ್ಕ್ಕು ಒಪ್ಪೊರುವರ್, ಉಂಡೋ
ತಿರುವಾಯ್ಮೊಳಿಕ್ಕೊಪ್ಪು ತೆನ್ಕುರುಗೈಕ್ಕು ಉಂಡೋ,
ಒರುಪಾರ್ ತನ್ನಿಲೊಕ್ಕುಮೂರ್ ॥ ೧೫ ॥

ಇನ್ರೈಪ್ಪೆರುಮೈ ಅರಿಂದಿಲೈಯೋ ಪೇದೈ ನೆಂಜೇ,
ಇನ್ರೈಕ್ಕೆನ್ನೇತ್ತಮೆನಿಲ್ ಉರೈಕ್ಕೇನ್, ನನ್ರಿಪುನೈ
ಪಲ್ಲಾಂಡುಪಾಡಿಯ ನಂ ಪಟ್ಟರ್ಪಿರಾನ್, ವಂದುದಿತ್ತ,
ನಲ್ಲಾನಿಯಿಲ್ ಶೋದಿನಾಳ್ ॥ ೧೬ ॥

ಮಾನಿಲತ್ತಿಲ್ ಮುನ್ನಂ ಪೆರಿಯಾಳ್ವಾರ್ ವಂದುದಿತ್ತ,
ಆನಿತನ್ನಿಲ್ ಶೋದಿಯೆನ್ರಾಲ್ ಆದರಿಕ್ಕುಂ, ಜ್ಞಾನಿಯರ್ಕ್ಕು
ಒಪ್ಪೋರಿಲ್ಲೈ ಇವ್ವುಲಗುದನಿಲ್ ಎನ್ರು ನೆಂಜೇ,
ಎಪ್ಪೋದುಂ ಶಿಂದಿತ್ತಿರು ॥ ೧೭ ॥

ಮಂಗಳಾಶಾಸನತ್ತಿಲ್ ಮತ್ತುಳ್ಳ ಆಳ್ವಾರ್ಗಳ್,
ತಂಗಳಾರ್ವತ್ತಳವು ತಾನನ್ರಿ, ಪೊಂಗುಂ ಪರಿವಾಲೇ
ವಿಲ್ಲಿಪುತ್ತೂರ್ ಪಟ್ಟರ್ಪಿರಾನ್ ಪೆತ್ತಾನ್,
ಪೆರಿಯಾಳ್ವಾರ್ ಎನ್ನುಂಪೆಯರ್ ॥ ೧೮ ॥

ಕೋದಿಲವಾಂ ಆಳ್ವಾರ್‌ಗಳ್ ಕೂರುಕಲೈಕ್ಕೆಲ್ಲಾಂ
ಆದಿ ತಿರುಪ್ಪಲ್ಲಾಂಡಾನದುವುಂ, ವೇದತ್ತುಕ್ಕು ಓಂಎನ್ನುಮದು
ಪ್ಪೋಲ್ ಉಳ್ಳದುಕ್ಕೆಲ್ಲಾಂ ಶುರುಕ್ಕಾಯ್‌,
ತ್ತಾನ್ ಮಂಗಳ ಮಾದಲಾಲ್ || ೧೯ ||

*ಉಂಡೋ ತಿರುಪ್ಪಲ್ಲಾಂಡುಕ್ಕು ಒಪ್ಪದೋರ್ ಕಲೈತಾನ್,
ಉಂಡೋ ಪೆರಿಯಾಳ್ವಾರ್ ಕ್ಕೊಪ್ಪೊರುವರ್, ತಣ್‌ತಮಿಳ್
ನೂಲ್ ಶೆಯ್ದರುಳುಂ ಆಳ್ವಾರ್‌ಗಳ್ ತಮ್ಮಿಲವರ್
ಶೆಯ್‌ಕಲೈಯಿಲ್, ಪೈದಲ್‌ನೆಂಜೇ!
ನೀ ಉಣರ್‌ನ್ದುಪಾರ್ || ೨೦ ||

ಆಳ್ವಾರ್ ತಿರುಮಹಳಾರ್ ಆಂಡಾಳ್, ಮಧುರಕವಿ ಆಳ್ವಾರ್
ಯತಿರಾಶರಾಮ್ ಇವರ್‌ಗಳ್, ವಾಳ್ವಾಹ ವಂದುದಿತ್ತ
ಮಾದಂಗಳ್ ನಾಳ್‌ಗಳ್ ತಮ್ಮಿನ್ ವಾಶಿಯೈಯುಂ
ಇನ್ದವುಲಹೋರ್ಕ್ಕು ಉರೈಪ್ಪೋಮ್ ಯಾಂ || ೨೧ ||

*ಇನ್ರೋ ತಿರುವಾಡಿಪ್ಪೂರಂ ಎಮಕ್ಕಾಹವನ್ರೋ—ಇಂಗು
ಆಂಡಾಳ್ ಅವತರಿತ್ತಾಳ್, ಕುನ್ರಾದ ವಾಳ್ವಾನ
ವೈಗುಂದವಾನ್—ಪೋಹಂತನ್ನೈ ಇಹಳ್‌ನ್ದು
ಆಳ್ವಾರ್ ತಿರುಮಹಳಾರಾಯ್ || ೨೨ ||

ಪೆರಿಯಾಳ್ವಾರ್ ಪೆಣ್ ಪಿಳ್ಳೈಯಾಯ್, ಆಂಡಾಳ್ ಪಿರನ್ದ
ತಿರುವಾಡಿಪ್ಪೂರತ್ತಿನ್ ಶೀರ್‌ಮೈ, ಒರುನಾಳೈಕ್ಕು
ಉಂಡೋ ಮನಮೇ ಉಣರ್‌ನ್ದುಪಾರ್, ಆಂಡಾಳುಕ್ಕು
ಉಂಡಾಹಿಲ್ ಒಪ್ಪು ಇದರ್ಕ್ಕುಂ ಉಂಡು || ೨೩ ||

ಅಂಜು ಕ್ಕುಡಿಕ್ಕೊರು ಶಂತತಿಯಾಯ್, ಆೞ್ವಾರ್‌ಗಳ್
ತಂ ಶೆಯಲೈ ವಿಂಜಿನಿರ್ಕುಂ ತನ್ಮೈಯಳಾಯ್, ಪಿಂಜಾಯ್
ಪೞುತ್ತಾಳೈ ಯಾಂಡಾಳೈ ಪ್ಪತ್ತಿಯುಡನ್ ನಾಳುಂ,
ವೞುತ್ತಾಯ್ ಮನಮೇ ಮಗಿೞ್‌ನ್ದು || ೨೪ ||

ಏರಾರ್ ಮಧುರಕವಿ ಇವ್ವುಲಗಿಲ್ ವನ್ದುದಿತ್ತ, ಶೀರಾರುಂ
ಶಿತ್ತಿರೈಯಿಲ್ ಶಿತ್ತಿರೈನಾಳ್, ಪಾರುಲಗಿಲ್ ಮತ್ತುಳ್ಳ
ಆೞ್ವಾರ್‌ಗಳ್ ವನ್ದುದಿತ್ತನಾಳ್‌ಗಳಿಲುಮ್
ಉತ್ತದೆಮಕ್ಕೆನ್ರು ನೆಂಜೇ ಓರ್ || ೨೫ ||

ವಾಯ್‌ತ್ತ ತಿರುಮನ್ದಿರತ್ತಿನ್ ಮತ್ತಿಮಮಾಂ ಪದಂಪೋಲ್,
ಶೀರ್‌ತ್ತ ಮಧುರಕವಿ ಶೆಯ್‌ಕಲೈಯೈ, ಆರ್‌ತ್ತಪುಗೞ್.
ಆರಿಯರ್‌ಗಳ್ ತಾಙ್ಗಳ್ ಅರುಳಿಚ್ಚೆಯಲ್ ನಡುವೇ,
ಶೇರ್ವಿತ್ತಾರ್ ತಾತ್ಪರಿಯಂ ತೇರ್‌ನ್ದು || ೨೬ ||

ಇನ್ರುಲಗೀರ್ ಶಿತ್ತಿರೈಯಿಲ್ ಏಯ್‌ನ್ದ ತಿರುವಾದಿರೈನಾಳ್,
ಎನ್ರೈಯಿಲುಂ ಇನ್ರಿದನುಕ್ಕೇತ್ತಮೆನ್ ತಾನ್,
ಎನ್ರವರ್ಕ್ಕು ಶಾತ್ತುಗಿನ್ರೇನ್ ಕೇಣ್ಮಿನ್ ಯತಿರಾಶರ್ ತಂ
ಪಿರಪ್ಪಾಲ್, ನಾಲ್‌ತಿಶೈಯುಂ ಕೊಂಡಾಡುಂನಾಳ್ || ೨೭ ||

ಆೞ್ವಾರ್‌ಗಳ್ ತಾಙ್ಗಳ್ ಅವತರಿತ್ತ ನಾಳ್‌ಗಳಿಲುಂ
ವಾೞ್ವಾನ ನಾಳ್ ನಮಕ್ಕು ಮಣ್ಣುಲಗೀರ್, ಏೞ್.
ಪಾರುಂ ಉಯ್ಯ ಎತಿರಾಶರುದಿತ್ತರುಳುಂ,
ಶಿತ್ತಿರೈಯಿಲ್ ಶೆಯ್ಯ ತಿರುವಾದಿರೈ || ೨೮ ||

ಎಂದೈ ಎತಿರಾಜರ್ ಇವ್ವುಲಗಿಲ್ ಎಂದನಮಕ್ಕಾ
ವಂದುದಿತ್ತನಾಳೆನ್ನುಂ ವಾಚಿಯಿನಾಲ್,
ಇಂದತ್ತಿರು ವಾದಿರೈದನ್ನಿಲ್ ಶೀರ್ಮೈದನ್ನೈನೆಂಜೇ,
ಒರುಪಾವಮುಳ್ ಎಪ್ಪೊಳುದುಂ ಓರ್ ‖ ೨೯ ‖

ಎಣ್ಣರುಂಶೀರ್ ಪೊಯ್‌ಗೈಮುನ್ನೋರ್ ಇವ್ವುಲಗಿಲ್
ತೋನ್ರಿಯವೂರ್, ವಣ್ಮೈಮಿಗು ಕಚ್ಚಿಮಲ್ಲೈ
ಮಾಮಯಿಲೈ, ಮಣ್ಣಿಯಿಲ್ ನೀರ್ ತೇಂಗುಂ
ಕುರೈಯಲೂರ್ ಶೀರ್‌ಕಲಿಯನ್ ತೋನ್ರಿಯವೂರ್,
ಓಂಗುಂ ಉರೈಯೂರ್ ಪಾಣನೂರ್ ‖ ೩೦ ‖

ತೊಂಡರಡಿಪ್ಪೊಡಿಯಾರ್ ತೋನ್ರಿಯವೂರ್,
ತೊಲ್‌ಪುಗಳ್‌ಶೇರ್ ಮಣ್ಡಂಗುಡಿಯೆನ್ಬರ್
ಮಣ್ಣುಲಗಿಲ್, ಎಂಡಿಶೈಯುಂ ಏತ್ತುಂ ಕುಲಶೇಖರನೂರೆನ
ಉರೈಪ್ಪರ್, ವಾಯ್‌ತ್ತ ತಿರುವಂಜಿಕ್ಕಳಂ ‖ ೩೧ ‖

ಮನ್ನು ತಿರುಮಳಿಶೈ ಮಾಡತ್ತಿರುಕ್ಕುರುಗೂರ್,
ಮಿನ್ನುಪುಗಳ್. ವಿಲ್ಲಿಪುತ್ತೂರ್ ಮೇದಿನಿಯಿಲ್,
ನನ್ನೆರಿಯೋರ್ ಏಯ್‌ನ್ದ ಪತ್ತಿಶಾರರ್ ಎಳಿಲ್ ಮಾರನ್
ಪಟ್ಟರ್‌ಪಿರಾನ್, ವಾಯ್‌ನ್ದುದಿತ್ತ ಊರ್‌ಗಳ್ ಅಗ್ಗೈ ‖ ೩೨ ‖

ಶೀರಾರುಂ ವಿಲ್ಲಿಪುತ್ತೂರ್ ಶೆಲ್ವತ್ತಿರುಕ್ಕೋಳೂರ್,
ಏರಾರ್ ಪೆರುಂಬೂದೂರ್ ಎನ್ನುಮಿವೈ, ಪಾರಿಲ್
ಮದಿಯಾರುಂ ಆಂಡಾಳ್ ಮಧುರಕವಿಯಾಳ್ವಾರ್,
ಎತಿರಾಜರ್ ತೋನ್ರಿಯ ಊರ್ ಇಂಗು ‖ ೩೩ ‖

ಆೞ್ವಾರ್ಗಳೇಱ್ಱಂ ಅರುಳಿಚ್ಚೆಯಲ್ ಏಱ್ಱಂ,
ತಾೞ್ವಾದುಮಿಲ್ಕುರವರ್ ತಾಮೇಱ್ಱಂ, ಏೞ್‌ಪಾರುಂ
ಉಯ್ಯ ಅವರ್ಗಳ್ ಸೆಯ್ದ ವಿಯಾಕ್ಕಿಯೈ
ಗಳುಳ್ಳದೆಲ್ಲಾಂ ವೈಯಂ ಅಱಿಯಪ್ಪಗರ್ವೋಂ
ವಾಯ್‌ನ್ದು ॥ ೩೭ ॥

ಆೞ್ವಾರ್ಗಳೈಯುಂ ಅರುಳಿಚ್ಚೆಯಲ್ಗಳೈಯುಂ,
ತಾೞ್ವಾಗ ನಿನೈಪ್ಪವರ್ಗಳ್ ತಾಂ, ನರಕಿಲ್
ವೀೞ್ವಾರ್ಗಳೆನ್ಱು ನಿನೈತ್ತು ನೆಂಜೇ, ಎಪ್ಪೊೞುದುಂ
ನೀ ಅವರ್ಪಾಲ್, ಸೆನ್ಱಣುಗಕ್ಕೂಸಿತ್ತಿರಿ ॥ ೩೮ ॥

ತೆರುಳುಱ್ಱ ಆೞ್ವಾರ್ಗಳ್ ಸೀರ್ಮೈ ಯಱಿವಾರಾರ್?
ಅರುಳಿಚ್ಚೆಯಲೈ ಅಱಿವಾರಾರ್? ಅರುಳ್‌ಪೆಱ್ಱ ನಾದಮುನಿ
ಮುದಲಾನ ನಂದೇಸಿಕರೈಯಲ್ಲಾಲ್,
ಪೇದೈಮನಮೇ ಉಂಡೋ ಪೇಸು ॥ ೩೯ ॥

ಓರಾಣ್ ವೞಿಯಾಯ್ ಉಪದೇಸಿತ್ತಾರ್
ಮುನ್ನೋರ್, ಏರಾರ್ ಎತಿರಾಸರಿನ್ನರುಳಾಲ್,
ಪಾರುಲಗಿಲ್ ಆಸೈಯುಡೈಯೋರ್ಕ್ಕೆಲ್ಲಾಂ, ಆರಿಯರ್ಗಾಳ್
ಕೂಱುಮೆನ್ಱು, ಪೇಸಿ ವರಂಬಱುತ್ತಾರ್ ಪಿನ್ ॥ ೪೦ ॥

*ಎಂಬೆರುಮಾನಾರ್ ದರಿಸನಮೆನ್ಱೇ ಇದಱ್ಕು,
ನಂಬೆರುಮಾಳ್ ಪೇರಿಟ್ಟು ನಾಟ್ಟಿವೈತ್ತಾರ್, ಅಂಬುವಿಯೋರ್
ಇಂದತ್ತರಿಸನತ್ತೈ ಎಂಬೆರುಮಾನಾರ್ ವಳರ್ತ್ತ
ಅಂದಚ್ಚೆಯಲಱಿಗೈಕ್ಕಾ ॥ ೪೧ ॥

ಪಿಳ್ಳಾನ್ ನಂಜೀಯರ್ ಪೆರಿಯವಾಚ್ಚಾನ್ ಪಿಳ್ಳೈ,
ತೆಳ್ಳಾರ್ ವಡಕ್ಕುತ್ತಿರುವೀದಿ ಪ್ಪಿಳ್ಳೈ,

ಮಣವಾಳ ಯೋಗಿ ತಿರುವಾಯ್ ಮೊಳಿ.ಯೈಕ್ಕಾತ್ತ,
ಕುಣವಾಳರೆನ್ರು ನೆಂಜೇಕೂರು || ೩೯ ||

ಮುಂದುರವೇ ಪಿಳ್ಳಾನ್ ಮುದಲಾನೋರ್ ಶೈದರುಳುಂ,
ಅಂದವಿಯಾಕ್ಕಿಯೈಗಳನ್ರಾಹಿಲ್, ಅಂದೋ ತಿರುವಾಯ್
ಮೊಳಿ ಪ್ಪೊರುಳೈ ತೇರ್ನ್ದುರೈಕ್ಕವಲ್ಲ ಕುರುವಾರ್,
ಇಕ್ಕಾಲಂ ನೆಂಜೇ ಕೂರು || ೪೦ ||

ತೆಳ್ಳಾರುಂ ಞಾನತ್ತಿರುಕ್ಕುರುಹೈಪ್ಪಿರಾನ್,
ಪಿಳ್ಳಾನ್ ಯತಿರಾಜರ್ ಪೇರರುಳಾಲ್,
ಉಳ್ಳಾರುಂ ಅನ್ಬುಡನೇ ಮಾರನ್ ಮರೈ ಪ್ಪೊರುಳೈ
ಅನ್ರುರೈತ್ತದು, ಇನ್ಬಮಿಗುಂ ಆರಾಯಿರಂ || ೪೧ ||

ತಂಶೀರೈ ಞಾನಿಯರ್ಗಳ್ ತಾಮ್ ಪುಹಳುಂ ವೇದಾಂತಿ,
ನಂಜೀಯರ್ ತಾಮ್ ಭಟ್ಟರ್ ನಲ್ಲರುಳಾಲ್,
ಎಂಜಾದ ಆರ್ವಮುಡನ್ ಮಾರನ್ ಮರೈಪ್ಪೊರುಳೈ
ಆಯ್ನ್ದುರೈತ್ತದು, ಒನ್ಬದಿನಾಯಿರಂ || ೪೨ ||

ನಂಬಿಳ್ಳೈ ತಮ್ಮುಡೈಯ ನಲ್ಲರುಳಾಲ್ ಏವಿಯಿಡ,
ಪಿನ್ಪೆರಿಯವಾಚ್ಚಾನ್ಪಿಳ್ಳೈ ಅದನಾಲ್,
ಇನ್ಬಾವರುಪತ್ತಿ ಮಾರನ್ಮರೈಪ್ಪೊರುಳೈ ಚೊನ್ನದು,
ಇರುಪತ್ತು ನಾಲಾಯಿರಂ || ೪೩ ||

*ತೆಳ್ಳಿಯದಾ ನಂಬಿಳ್ಳೈ ಶೆಪ್ಪು ನೆರಿತನ್ನೈ,
ವಳ್ಳಲ್ವಡಕ್ಕುತ್ತಿರುವೀದಿಪ್ಪಿಳ್ಳೈ,
ಇಂದ ನಾಡರಿಯ ಮಾರನ್ ಮರೈಪ್ಪೊರುಳೈ ನನ್ಗುರೈತ್ತದು,
ಈಡುಮುಪ್ಪತ್ತಾರಾಯಿರಂ || ೪೪ ||

ಅನ್ಬೋಡು ಅೞಗಿಯ ಮಣವಾಳಚ್ಚೀಯರ್,
ಪಿನ್ಬೋರುಂ ಕಱ್ಱು ಅಱಿಂದು ಪೇಸುಕೈಕ್ಕಾ,
ತಂಪೆರಿಯ ಪೋದಮುಡನ್ ಮಾಱನ್ಮಱೈ
ಯಿನ್ಪೊರುಳುರೈತ್ತದು, ಏದಮಿಲ್ ಪನ್ನೀರಾಯಿರಂ || ೪೨ ||

ಪೆರಿಯವಾಚ್ಚಾನ್ಪಿಳ್ಳೈ ಪಿನ್ಬುಳ್ಳವೈಕ್ಕುಂ,
ತೆರಿಯವಿಯಾಕ್ಕಿಯೈಗಳ್ ಶೆಯ್ ವಾಲ್
ಅರಿಯ ಅರುಳಿಚ್ಚೆಯಲ್ ಪೊರುಳೈ ಆರಿಯರ್
ಗಟ್ಕು ಇಪ್ಪೋದು, ಅರುಳಿಚ್ಚೆಯಲಾಯ್ತ್ತರಿವು || ೪೩ ||

ನಂಜೀಯರ್ ಶೆಯ್ದ ವಿಯಾಕ್ಕಿಯೈಗಳ್—ನಾಲಿರಂಡುಕ್ಕು,
ಎಂಜಾಮೈ ಯಾವೈಕ್ಕುಂ ಇಲ್ಲೈಯೇ,
ತಂಶೀರಾಲ್ ವೈಯಗುರುವಿನ್ ತಂಬಿ ಮನ್ನು
ಮಣವಾಳಮುನಿ, ಶೆಯ್ಯುಮವೈ ತಾಮುಂ ಶಿಲ || ೪೪ ||

ಶೀರಾರ್ ವಡಕ್ಕು ತ್ತಿರುವೀದಿಪ್ಪಿಳ್ಳೈ,
ಎೞು ತೇರಾರ್ ತಮಿೞ್ ವೇದತ್ತೀಡುದನ್ನೈ,
ತಾರುಮೆನ ವಾಂಗಿಮುನ್ ನಂಪಿಳ್ಳೈ ಈಯುಣ್ಣಿ
ಮಾದವರ್ಕ್ಕು, ತಾಂ ಕೊಡುತ್ತಾರ್ ಪಿನ್ನದನೈತ್ತಾನ್ || ೪೫ ||

ಆಂಗವರ್ಪಾಲ್ ಪೆಱ್ಱ ಶಿರಿಯಾೞ್ವಾನ್ ಅಪ್ಪಿಳ್ಳೈ,
ತಾನ್ ಕೊಡುತ್ತಾರ್ ತಮ್ಮಗನಾರ್ ತಂ ಕೈಯಿಲ್,
ಪಾಂಗುಡನೇ ನಾಲೂರ್ ಪ್ಪಿಳ್ಳೈಕ್ಕು ಅವರ್ ತಾಮ್
ನಲ್ಲಮಗನಾರ್ಕ್ಕು ಅವರ್ ತಾಮ್,
ಮೇಲೋರ್ಕ್ಕು ಈಂದಾರ್ ಅವರೇ ಮಿಕ್ಕು || ೪೬ ||

*ನಂಪೆರುಮಾಳ್, ನಮ್ಮಾೞ್ವಾರ್, ನಂಜೀಯರ್,
ನಂಪಿಳ್ಳೈ ಎನ್ಬರ್, ಅವರವರ್ ತಂ ಏಱ್ಱತ್ತಾಲ್,

ಉಯ್ಯನಿನೈವುಡೈಯೀರ್ ಉಂಗಳುಕ್ಕುಚ್ಚೊಲ್ಲುಗಿನ್ರೇನ್
ವೈಯಗುರು ಮುನ್ನಂ ವಾಯ್ ಮೊಳಿನ್ದ
ಶೆಯ್ಯಕಲೈಯಾಂ ವಚನಭೂಷಣತ್ತಿನ್ ಆಳ್-ಪೊರುಳೈ,
ಕತ್ತದನುಕ್ಕಾಂ ನಿಲೈಯಿಲ್ ನಿಲ್ಲುಮುನಿನ್ದು || ೫೬ ||

ದೇಶಿಕರ್ ಪಾಲ್ ಕೇಟ್ಟ ಶೆಳುಂ ಪೊರುಳೈ,
ಚಿನ್ದೈದನ್ನಿಲ್ ಮಾಶರವೇ ಊನ್ರ ಮನನಂಶೆಯ್ದು,
ಆಶರಿಕ್ಕ ವಲ್ಲಾರ್ಗಳ್ ತಾಂ ವಚನಭೂಷಣತ್ತಿನ್
ವಾನ್ಪೊರುಳೈ, ಕಲ್ಲಾದದೆನ್ನೋ ಕವರ್ನ್ದು || ೫೭ ||

ಶೆಚ್ಚಂ ಸಿರದಾಯುಂ ತಾಮುಂಡೈಯೋರ್ ಕೇಟ್ಟಕ್ಕಾಲ್,
ಮೆಚ್ಚುಂ ವಿಯಾಕ್ಕಿಯೈತಾನ್ ಉಣ್ಡಾಗಿಲ್
ನಚ್ಚಿ ಅದಿಕರಿಯುಂನೀರ್ ವಚನಭೂಷಣತ್ತುಕ್ಕತ್ತ
ಮತಿಯುಂಡೈಯಿರ್, ಮತ್ತಯತ್ತರಾಯ್ || ೫೮ ||

ಶೀರ್ ವಚನಭೂಷಣತ್ತಿನ್ ಶೆಮ್ಪೊರುಳೈ,
ಚಿನ್ದೈದನ್ನಾಲ್ ತೇರಿಲುಮಾಂ ವಾಯಾಲ್
ಶೆಪ್ಪಿಲುಮಾಂ, ಆರಿಯರ್ಗಾಳ್!
ಎನ್ದನಕ್ಕು ನಾಳುಂ ಇನಿದಾಗಾ ನಿನ್ರದು ಐಯೋ,
ಉನ್ದನಕ್ಕು ಎಪ್ಪಡಿಯುಂ ಉಳ್ಳದಾಂ || ೫೯ ||

ತನ್ ಗುರುವಿನ್ ತಾಳಿಣೈಗಳ್ ತನ್ನಿಲ್ ಅನ್ಪೊನ್ರಿಲ್ಲಾದಾರ್,
ಅನ್ಪುತನ್ಪಾಲ್ ಶೆಯ್ದಾಲುಂ ಅಂಬುಯೈಕೋನ್,
ಇನ್ಪಮಿಗು ವಿಣ್ಣಾಡು ತಾನಳಿಕ್ಕ ವೇಂಡಿಯಿರಾನ್,
ಆದಲಾಲ್, ನಣ್ಣಾರ್ ಅವರ್ಗಳ್ ತಿರುನಾಡು || ೬೦ ||

* ಜ್ಞಾನಂ ಅನುಷ್ಠಾನಮಿವೈ ನನ್ರಾಗವೇ ಉಡೈಯನಾನ
ಗುರುವೈ ಅಡೈನ್ದಕ್ಕಾಲ್, ಮಾನಿಲತ್ತೀರ್

ತೇನಾರ್ ಕಮಲ ತ್ತಿರುಮಾಮಗಳ್ ಕೊೞುನನ್,
ತಾನೇವೈಗುಂದಮ್ ತರುಮ್ ॥ ೬೧ ॥

ಉಯ್ಯ ನಿನೈವುಣ್ಡಾಗಿಲ್ ಉಙ್ಗಳ್ ಕುರುಕ್ಕಳ್
ತಮ್ ಪದತ್ತೇ ವೈಯುಂ ಅನ್ಬುದನ್ನೈ ಇಂದ
ಮಾನಿಲತ್ತೀರ್, ಮೆಯ್ಯುರೈಕ್ಕಿನ್ರೇನ್ ಪೈಯರವಿಲ್ ಮಾಯನ್
ಪರಮಪದಂ ಉಂಗಳುಕ್ಕಾಂ, ಕೈಯಿಲಂಗು ನೆಲ್ಲಿಕ್ಕನಿ ॥ ೬೨ ॥

ಆಚಾರಿಯನ್ ಶೆಯ್ದ ಉಪಕಾರಮಾನವದು
ತೂಯ್ದಾಗನೆಂಜುತನ್ನಿಲ್ ತೋನ್ರುಮೇಲ್,
ದೇಶಾನ್ತರತ್ತಿಲ್ ಇರುಕ್ಕ ಮನಮ್ದಾನ್ ಪೊರುನ್ದ
ಮಾಟ್ಟಾದು, ಇರುತ್ತಲಿನಿ ಏದರಿಯೋಂ ಯಾಮ್ ॥ ೬೩ ॥

ತನ್ನಾರಿಯನುಕ್ಕುತ್ತಾನ್ ಅಡಿಮೈ ಶೆಯ್ವದು,
ಅವನ್ ಇನ್ನಾಡುದನ್ನಿಲ್ ಇರುಕ್ಕುಂನಾಳ್,
ಅನ್ನೇರ್ ಅರಿಂದುಂ ಅದಿಲಾಶೈಯಿನ್ರಿ ಆಚಾರಿಯನೈ
ಪ್ಪಿರಿಂದಿರುಪ್ಪಾರ್ ಮನಮೇ ಪೇಶು ॥ ೬೪ ॥

ಆಚಾರಿಯನ್ ಶಿಚ್ಚನಾರುಯಿರೈಪ್ಪೇಣುಮವನ್,
ತೇಶಾರುಂ ಶಿಚ್ಚನವನ್ ಶೀರ್ವಡಿವೈ, ಆಶೈಯುಡನ್
ನೋಕ್ಕುಮವನ್ ಎನ್ನುಂ ನುಣ್ಣರಿವೈ ಕ್ಕೇಟ್ಟುವೈತ್ತುಂ,
ಆರ್ಕ್ಕು ಅನ್ನೇರ್ ನಿರ್ಕೈ ಅರಿದಾಂ ॥ ೬೫ ॥

ಪಿನ್ಬೞಗರಾಂ ಪೆರುಮಾಳ್ ಜೀಯರ್
ಪೆರುಂದಿವತ್ತಿಲ್, ಅನ್ಬದುವು ಮತ್ತು ಮಿಕ್ಕ ಆಶೈಯಿನಾಲ್,
ನಂಬಿಳ್ಳೈಕ್ಕು ಆನ ಅಡಿಮೈಗಳ್ ಶೆಯ್ ಅನ್ನಿಲೈಯೈ
ನನ್ನೆಂಜೇ, ಊನಮರ ಎಪ್ಪೊೞುದುಂ ಓರ್ ॥ ೬೬ ॥

ಆಶಾರಿಯರ್ಗಳನೈವರುಂ ಮುನ್ನಾಶರಿತ್ತ
ಆಶಾರನ್ದನ್ನೈ ಅರಿಯಾದಾರ್,
ಪೇಶುಗಿನ್ರ ವಾರ್ತ್ತೈಗಳೈ ಕ್ಕೇಟ್ಟು ಮರುಳಾದೇ,
ಪೂರುವರ್ಗಳ್ ಶೀರ್ಮೈ ನಿಲೈ ತನ್ನೈ ನೆಂಜೇ ಶೇರ್ || ೬೭ ||

ನಾತ್ತಿಗರುಂ ನಱ್ಕಲೈಯಿನ್ ನನ್ನೆಱಿಶೇರ್ ಆತ್ತಿಗರುಂ,
ಆತ್ತಿಗನಾತ್ತಿಗರು ಮಾಮಿವರ್ಗಳ್, ಓರ್ತ್ತು ನೆಂಜೇ!
ಮುನ್ನವರುಂ ಪಿನ್ನವರುಂ ಮೂರ್ಕ್ಕರೆನವಿಟ್ಟು,
ನಡುಚ್ಚೊನ್ನವರೈ ನಾಳುಂ ಕೂಡ್ || ೬೮ ||

ನಲ್ಲ ಮಣಮುಳ್ಳದೊನ್ರೈ ನಣ್ಣಿಯಿರುಪ್ಪದಱ್ಕು
ನಲ್ಲಮಣಮುಂಡಾಂ ನಯಮದುಪೋಲ್, ನಲ್ಲಗುಣ
ಮುಡೈಯೋರ್ ತಂಗಳುಡನ್ ಕೂಡಿಯಿರುಪ್ಪಾರ್ಕ್ಕು
ಗುಣಮದುವೇಯಾಂ ಶೇರ್ತ್ತಿಕೊಂಡು || ೬೯ ||

ತೀಯಗನ್ದಮುಳ್ಳದೊನ್ರೈಚ್ಚೇರ್ನ್ದಿರುಪ್ಪದೊನ್ರುಕ್ಕು
ತೀಯಗನ್ದಮೇಱುಂ ತಿಱಮದುಪೋಲ್, ತೀಯಗುಣ
ಮುಡೈಯೋರ್ ತಂಗಳುಡನ್ ಕೂಡಿಯಿರುಪ್ಪಾರ್ಕ್ಕು
ಗುಣಮದುವೇಯಾಂ ಶೆಱಿವುಕೊಂಡು || ೭೦ ||

*ಮುನ್ನೋರ್ ಮೊೞಿನ್ದ ಮುಱೈತಪ್ಪಾಮಲ್ ಕೇಟ್ಟು
ಪಿನ್ನೋರ್ನ್ದು ತಾಮದನೈಪ್ಪೇಶಾದೇ, ತನ್ನೆಂಜಿಲ್
ತೋಱ್ಱಿನದೇ ಶೊಲ್ಲಿ ಇದು ಶುದ್ಧ ಉಪದೇಶವರ
ವಾಱ್ಱೆನ್ಬರ್ ಮೂರ್ಕ್ಕರಾವಾರ್ || ೭೧ ||

*ಪೂರುವಾಶಾರಿಯರ್ಗಳ್ ಪೋದಂ ಅನುಟ್ಟಾನಂಗಳ್,
ಕೂಱುವಾರ್ ವಾರ್ತ್ತೈಗಳೈ ಕೊಂಡು ನೀರ್ ತೇಱಿ,

ಇರುಳ್ ತರುಮಾ ಜ್ಞಾಲತ್ತೇ ಇನ್ಬಮುತ್ತುವಾಳುಂ,
ತೆರುಳ್ ತರುಮಾ ದೇಶಿಕನೈ ಚ್ಚೇರ್ನ್ದು || ೭೨ ||

*ಇಂದ ಉಪದೇಶರತ್ತಿನಮಾಲೈತನ್ನೈ,
ಶಿಂದೈತನ್ನಿಲ್ ನಾಳುಂ ಶಿಂದಿಪ್ಪಾರ್, ಎನ್ದೈ
ಯತಿರಾಶರ್ ಇನ್ನರುಳುಕ್ಕು ಎನ್ರು ಇಲಕ್ಕಾಗಿ,
ಶದಿರಾಗ ವಾಳ್ನ್ದಿಡುವರ್ ತಾಮ್ || ೭೩ ||

ಮನ್ನುಯಿರ್ಗಾಳ್ ಇಂಗೇ ಮಣವಾಳ ಮಾಮುನಿವನ್,
ಪೊನ್ನಡಿಯಾಂ ಶೆಂಗಮಲಪ್ಪೋದುಗಳೈ,
ಉನ್ನಿಚ್ಚಿರತ್ತಾಲೇ ತೀಂಡಿಲ್ ಅಮಾನವನುಂ ನಮ್ಮೈ,
ಕರತ್ತಾಲೇ ತೀಣ್ಡಲ್ ಕಡನ್ || ೭೪ ||

ಶ್ರೀರಸ್ತು

ಶ್ರೀಮತೇ ರಾಮಾನುಜಾಯ ನಮಃ

ಶ್ರೀಮತೇ ರಮ್ಯಜಾಮಾತೃ ಮುನೀಂದ್ರಾಯ ನಮಃ

ಶ್ರೀ ವಿಶದವಾಕ್ ಶಿಖಾಮಣಿಗಳಾದ ಮಣವಾಳ ಮಾಮುನಿಗಳು ರಚಿಸಿದ ಉಪದೇಶ ರತ್ತಿನ ಮಾಲೈ

ತಮಗೆ ಲಭಿಸಿದ ಉಪದೇಶ ಮಾರ್ಗದ ಪ್ರಕಾರವೇ "ವೆಣ್ಬಾ" ಎನ್ನುವಂತಹ ವೃತ್ತದಿಂದ ರಚಿಸುವುದಾಗಿ ನಿಶ್ಚಯಿಸಿರುವ ಗ್ರಂಥ.

ಕೋಯಿಲ್ ಕಂದಾಡೈ ಅಣ್ಣನ್ ರಚಿಸಿದ ತನಿಯನ್

ಮುನ್ನಂ ತಿರುವಾಯ್‌ಮೊಳಿ.ಪ್ಪಿಳ್ಳೈ ತಾಮುಪದೇಶಿತ್ತ
ನೇರ್ ತನ್ನಿನ್ ಪಡಿಯೈ ತಣವಾದ ಶೊಲ್ ಮಣವಾಳ ಮುನಿ
ತನ್ನನ್ಬುಡನ್ ಶೆಯ್ ಉಪದೇಶರತ್ತಿನಮಾಲೈ ತನ್ನೈ
ತನ್ನೆಂಜು ತನ್ನಿಲ್ ತರಿಪ್ಪವರ್ ತಾಳ್ಗಳ್ ಶರಣ್ ನಮಕ್ಕೇ

(ನೇರಿಶೈ ವೆಣ್ಬಾ)

*ಎನ್ದೈ ತಿರುವಾಯ್ಮೊಳಿ.ಪ್ಪಿಳ್ಳೈ ಇನ್ನರುಳಾಲ್
ವಂದ ಉಪದೇಶಮಾರ್ಗತ್ತೈಚ್ ಚಿಂದೈಶೆಯ್ದು
ಪಿನ್ನವರುಂ ಕಱ್ಕ ಉಪದೇಶಮಾಯ್ ಪೇಶುಹಿನ್ನೇನ್
ಮನ್ನಿಯಶೀರ್ ವೆಣ್ಬಾವಿಲ್ ವೈತ್ತು ॥ ೧ ॥

ಎಂದೈ — ನಮ್ಮಗಳಿಗೆ ಗುರುಗಳಾದ "ತಿರುವಾಯ್‌ಮೊಳಿ.ಪ್ಪಿಳ್ಳೈ" ಎನ್ನುವಂತಹ ತಿರುಮಲೈ ಆಳ್ವಾರ್ ಅವರ, ಇನ್ನರುಳಾಲ್ ವಂದ — ಮಹತ್ತರವಾದ ದಯೆಯಿಂದ ಲಭಿಸಿದ, ಉಪದೇಶಮಾರ್ಗತ್ತೈಚ್ ಚಿಂದೈಶೆಯ್ದು — ಉಪದೇಶ ಕ್ರಮವನ್ನೇ ಮನಸ್ಸಿನಲ್ಲಿ ಧ್ಯಾನಮಾಡಿ, ಪಿನ್ನವರುಂ ಕಱ್ಕ — ಮಣವಾಳ ಮಾಮುನಿಗಳ ಅವತಾರವು ಮುಗಿದನಂತರ ಜನಿಸಿದ ಜೀವಾತ್ಮರುಗಳೆಲ್ಲಾ ಅಭ್ಯಾಸ

ಸೂಚನೆ — * ನಕ್ಷತ್ರದ ಗುರುತಿರುವ ಪಾಶುರಗಳನ್ನು ಎರಡು ಸಲ ಹೇಳಬೇಕು.

ಮಾಡುವ ಕ್ರಮವನ್ನು, ಮನ್ನಿಯಶೀರ್ ವೆಣ್ಬಾವಿಲ್ ವೈತ್ತು — "ವೆಣ್ಬಾ" ಎನ್ನುವ ವೃತ್ತಕ್ಕೆ ಯಾವ ಲಕ್ಷಣಗಳು ಇರುವುವೋ ಆ ಕ್ರಮದಲ್ಲಿ ರಚಿಸಿ, ಉಪದೇಶಮಾಯ್‌ಪೇಶು ಪಿನ್ನೋರ್ — ಲೋಕದಲ್ಲಿರುವ ಜೀವಾತ್ಮರುಗಳಿಗಾಗಿ, ಉಪದೇಶರೂಪವಾಗಿ ಹೇಳುತ್ತಿದ್ದೇನೆ.

ಈ ಪಾಶುರವನ್ನು ಕುರಿತು ವಿವೇಕಿಗಳು ಸಂತೋಷಿಸುವುದೇ ಸಾಕು.

ಕತ್ತೋರ್‌ಗಳ್ ತಾಮುಗಪ್ಪರ್ ಕಲ್ವಿದನ್ನಿಲಾಶೈ
ಯುಳ್ಳೋರ್, ಪೆತ್ತೋಮೆನವುಗಂದು ಪಿನ್ಬುಕರ್ಪರ್,
ಮತ್ತೋರ್‌ಗಳ್ ಮಾಚ್ಚರಿಯತ್ತಾಲಿಗಳ್.ಲ್ ವಂದದು
ಎನ್ನೆಂಜೇ, ಇಗಳ್.ಗೈ ಆಚ್ಚರಿಯಮೋತಾನ್ ಅವರ್ಕ್ಕು || ೨ ||

ನೆಂಜೇ — ಎಲೈ ಮನಸ್ಸೇ, ಕತ್ತೋರ್‌ಗಳ್ ತಾಮುಗಪ್ಪರ್ — ವಿದ್ವಾಂಸರುಗಳು ಸಂತೋಷಿಸುವರು, ಕಲ್ವಿದನ್ನಿಲ್ ಆಶೈಯುಳ್ಳೋರ್ — ಈ ಪ್ರಬಂಧವನ್ನು ಅಭ್ಯಾಸಮಾಡಲು ಆಸೆಯುಳ್ಳವರು, ಪೆತ್ತೋಂ ಎನವುಗಂದು ಪಿನ್ಬುಕರ್ಪರ್ — ಈ ಪ್ರಬಂಧವನ್ನು ನಾವು ಪಡೆದೆವಲ್ಲಾ! ಎಂದು ಮನಸ್ಸು ಕರಗಿ ಅಭ್ಯಾಸಮಾಡುವರು, ಮತ್ತೋರ್‌ಗಳ್ — ಇತರರು, ಮಾಚ್ಚರಿಯತ್ತಾಲ್ — ಅಸೂಯೆಯಿಂದ ದ್ವೇಷಿಸಿ, ಇಗಳ್.ಲ್ — ದೂಷಿಸುವುದರಿಂದ, ವಂದದೆನ್ — ನಮಗೆ ಉಂಟಾಗುವ ಖೇದವೇನು? (ಅಂದರೆ ಅದರಿಂದ ನಮಗೇನೂ ವ್ಯಥೆಯಿಲ್ಲ ಎಂದರ್ಥ). ಅವರ್ಕ್ಕು — ಆ ರೀತಿ ದ್ವೇಷಬುದ್ಧಿಯುಳ್ಳ ಜನಗಳಿಗೆ, ಇಗಳ್.ಗೈ — ಒಳ್ಳೆಯದನ್ನು ದೂಷಿಸುವುದು, ಆಚ್ಚರಿಯಮೋತಾನ್ — ಅವರುಗಳಿಗೆ ಇದು ಸ್ವಭಾವವಲ್ಲವೇ? ಇದರಲ್ಲಿ ಆಶ್ಚರ್ಯವೇನು?

ಈ ಪಾಶುರದಲ್ಲಿ ಆಳ್ವಾರ್ ಆಚಾರ್ಯರುಗಳ ಶ್ರೀಸೂಕ್ತಿಗಳಿಗೆ ಮಂಗಳಾಶಾಸನ ಮಾಡುತ್ತಾರೆ:—

*** ಆಳ್ವಾರ್‌ಗಳ್ ವಾಳಿ. ಅರುಳಿಚ್ಚೆಯಲ್ ವಾಳಿ.**
ತಾಳ್.ವಾದುಮಿಲ್ ಕುರವರ್ ತಾಂ ವಾಳಿ.
ಏಳ್.ಪಾರುಮುಯ್ಯ ಅವರ್‌ಗಳುರೈತ್ತವೈಗಳ್ ತಾಂ
ವಾಳಿ., ಶೆಯ್ಯಮರೈತನ್ನುಡನೇ ಶೇರ್‌ನ್ದು || ೩ ||

ಆಳ್ವಾರ್‌ಗಳ್ ವಾಳಿ — ಪೊಯ್‌ಗೈಯಾಳ್ವಾರ್, ಪೂದತ್ತಾರ್, ಪೇಯಾರ್ ಮೊದಲಾದ ಭಕ್ತರು ಚೆನ್ನಾಗಿ ಬಾಳಬೇಕು. ಅರುಳಿಚ್ಚೆಯಲ್ ವಾಳಿ — ಅವರುಗಳು ರಚಿಸಿರುವ ದಿವ್ಯಪ್ರಬಂಧಗಳು ಚೆನ್ನಾಗಿ ಬಾಳಬೇಕು. ತಾಳ್ವಾದುಂ, ಇಲ್ ಕುರವರ್ ತಾಂವಾಳಿ: ಯಾವ ಕೊರತೆಯೂ ಇಲ್ಲದ ಅಪರಿಮಿತವಾದ ಕೀರ್ತಿಯುಳ್ಳ ಶ್ರೀರಾಮಾನುಜಾಚಾರ್ಯರೇ ಮೊದಲಾದ ಆಚಾರ್ಯರುಗಳು ಬಾಳಬೇಕು. ಏಳ್. ಪಾರುಮುಯ್ಯ — ಭೂಮಂಡಲದಲ್ಲಿರುವ ಜೀವಾತ್ಮರುಗಳು ಜೀವಿಸುವಂತೆ, ಅವರ್‌ಗಳ್ — ಆ ಆಚಾರ್ಯರುಗಳು, ಉರೈತ್ತವೈಗಳ್ ತಾಂತೆಯ್ಯ ಮರೈತ್ತನ್ನುಡನ್ ಶೇರ್‌ನ್ದು ವಾಳಿ — ರಚಿಸಿರುವ ಶ್ರೀಸೂಕ್ತಿಗಳೂ ವಿಲಕ್ಷಣವಾದ ವೇದಗಳೂ ಕೂಡಿ ಬಾಳಬೇಕು.

ಆಳ್ವಾರ್ರುಗಳ ಅವತಾರದ ಕ್ರಮವನ್ನು ತಿಳಿಸುವ ಪಾಶುರ—

ಪೊಯ್‌ಗೈಯಾರ್ ಪೂದತ್ತಾರ್ ಪೇಯಾರ್,
ಪುಗಳ್‌ಮಳಿಶೈ ಅಯ್ಯನರುಳ್ ಮಾರನ್
ಶೇರಲರ್‌ಕೋನ್, ತುಯ್ಯಪಟ್ಟನಾದನ್ ಅನ್ಬರ್
ತಾಳ್‌ತೂಳಿ, ನಱ್ ಪಾಣನ್ ನನ್ ಕಲಿಯನ್ ಈದ್
ಇವರ್ ತೋಱ್ಱತ್ತಡೈವಾಮಿಂಗು ॥ ೪ ॥

ಪೊಯ್‌ಗೈಯಾರ್ — ಮೊದಲನೆಯವರು, ಪೂದತ್ತಾರ್ — ಎರಡನೆಯವರು, ಪೇಯಾಳ್ — ಮೂರನೆಯವರು, ಪುಗಳ್ ಮಳಿಶೈ ಅಯ್ಯನ್ — ಕೀರ್ತಿಪಡೆದ ತಿರುಮಳಿಶೈ ಆಳ್ವಾರ್ ನಾಲ್ಕನೆಯವರು, ಅರುಳ್ ಮಾರನ್ — ದಯಾಶಾಲಿಯಾದ ನಮ್ಮಾಳ್ವಾರ್ ಐದನೆಯವರು, ಶೇರಲರ್‌ಕೋನ್ — ಕುಲಶೇಖರಾಳ್ವಾರ್ ಆರನೆಯವರು, ತುಯ್ಯಪಟ್ಟನಾದನ್ — ಪವಿತ್ರರಾದ ಪೆರಿಯಾಳ್ವಾರ್ ಏಳನೆಯವರು, ಅನ್ಬರ್‌ತಾಳ್‌ತೂಳಿ — ತೊಂಡರಡಿಪ್ಪೊಡಿ ಆಳ್ವಾರ್ ಎಂಟನೆಯವರು, ನಱ್ಪಾಣನ್ — ಪರಮಸಾತ್ವಿಕರಾದ ತಿರುಪ್ಪಾಣಾಳ್ವಾರ್ ಒಂಭತ್ತನೆಯವರು, ನನ್‌ಕಲಿಯನ್ — ವಿಲಕ್ಷಣರಾದ ತಿರುಮಂಗೈ ಆಳ್ವಾರ್ ಹತ್ತನೆಯವರು. ಈದ್ — ಇದು, ಇಂಗೇ — ಈ ಲೋಕದಲ್ಲಿ, ಇವರ್‌ತೋಱ್ಱತ್ತು ಅಡೈತ್ತು ಆಮ್ — ಈ ಆಳ್ವಾರ್ರುಗಳ ಅವತಾರ ಕ್ರಮವಾಗಿದೆ.

ಆಳ್ವಾರ್ರುಗಳು ಅವತರಿಸಿದ ತಿಂಗಳುಗಳು, ನಕ್ಷತ್ರಗಳು ಹೇಳಲ್ಪಡುತ್ತವೆ ಎಂದು ತಿಳಿಸುವ ಪಾಶುರ—

"ಅನ್ದಮಿಳಾಲ್ ನಲ್ಕಲೈಗಳ್, ಆಯ್ನ್ದು
ರೈತ್ತವಾಳ್ವಾರ್ಗಳ್, ಇಂದ ಉಲಹಿರುಳ್ ನೀಂಗ,
ವಂದುದಿತ್ತ ಮಾದಂಗಳ್ ನಾಳ್ಗಳ್ ತಮ್ಮೈ ಮಣ್ಣು
ಲಹೋರ್ ತಾಮಱಿಯ, ಈದೆನ್ರು ಶೊಲ್ಲುಹಿನ್ರೋಂ ಯಾಂ" ॥ ೪ ॥

ಅನ್ದಮಿಳಾಲ್ = ರಮಣೀಯವಾದ ತಮಿಳು ಭಾಷೆಯಲ್ಲಿ (ದಿವ್ಯ ಪ್ರಬಂಧಗಳನ್ನು) ಆಯ್ನ್ದುರೈತ್ತ ಆಳ್ವಾರ್ಗಳ್ = ರಮಣೀಯ ಪದಗಳನ್ನು ಹುಡುಕಿ ಉಪದೇಶಿಸಿದ ಆಳ್ವಾರ್ರುಗಳು, ಇಂದ ಉಲಗಿರುಳ್ ನೀಂಗ = ಅಜ್ಞಾನವನ್ನೇ ಕೊಡುವ ಈ ಲೋಕದಲ್ಲಿ ಅಜ್ಞಾನಾಂಧಕಾರವನ್ನು ಹೋಗಲಾಡಿಸುವುದಕ್ಕೋಸ್ಕರ, ವಂದುದಿತ್ತ ಮಾದಂಗಳ್ ನಾಳ್ಗಳ್ ತಮ್ಮೈ = ಬಂದು ಅವತರಿಸಿದ ಮಾಸಗಳನ್ನೂ ನಕ್ಷತ್ರಗಳನ್ನೂ, ಮಣ್ಣುಲಹೋರ್ ತಾಮರಿಯ = ಈ ಭೂಲೋಕದಲ್ಲಿ ಜನಿಸಿದ ಜೀವಾತ್ಮರುಗಳು ವಿಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೋಸ್ಕರ, ಈದೆನ್ರು = ಇಂತಿಂತಾದ್ದು—ಎಂಬುದಾಗಿ, ಯಾಂ ಶೊಲ್ಲುಹಿನ್ರೋಂ = ಇನ್ನು ಮೇಲೆ ನಾವು ಹೇಳುತ್ತೇವೆ.

ಈ ಆಳ್ವಾರ್ ಇಂತಹ ತಿಂಗಳಲ್ಲಿ, ಈ ನಕ್ಷತ್ರದಲ್ಲಿ ಅವತರಿಸಿದರು, ಎನ್ನುವ ವಿಷಯವು, ಆ ಆಚಾರ್ಯರುಗಳು ಅವತರಿಸಿದ ಕಾಲವು ಜನಗಳಿಗೆ ತಿಳಿದು ಲೋಕದಲ್ಲಿ ಪ್ರಚಾರವಾಗಿದ್ದರೂ, ಮುಂದೆ ಮುಂದೆ ಯಾವ ಕಾರಣಗಳಿಂದಲೂ, ಲೋಪಬರಬಾರದೆಂಬ ಅಭಿಪ್ರಾಯದಿಂದ ಪ್ರಬಂಧವನ್ನಾಗಿಯೇ ರಚಿಸಿದರೆಂದು ತಿಳಿಯಬೇಕು.

ಪೆರಿಯ ಆಚ್ಚಾನ್ಪಿಳ್ಳೈ ರಚಿಸಿದ ಮೊದಲ್ ತಿರುವಂದಾದಿ ವ್ಯಾಖ್ಯಾನದ ಆರಂಭದಲ್ಲಿ ಈ ಮೊದಲಾಳ್ವಾರ್ರುಗಳು, ಈ ಸ್ಥಳಗಳಲ್ಲಿ, ಅವತರಿಸಿದವರೆಂದು, ಕಾಲದ ಪರಿಪಾಕದಿಂದ ನಿಶ್ಚಯಿಸಲು ಸಾಧ್ಯವಿಲ್ಲವೆಂಬುದಾಗಿ ತಿಳಿದುಬರುತ್ತದೆ. ಆ ಗ್ರಂಥದಲ್ಲಿ ಟಿಪ್ಪಣಿ ಬರೆದಿರುವವರು—"ಈ ಸ್ಥಳದಲ್ಲಿ ಯಾವುದೋ ವಾಕ್ಯಸ್ಖಲನವು ಇರುತ್ತದೆ" ಎಂದು ಬರೆದಿರುತ್ತಾರೆ. (ಪೆರಿಯ ಆಚ್ಚಾನ್ಪಿಳ್ಳೈ) ಈ ರೀತಿ ಬರೆದಿದ್ದಾರೆ. ಆದರೆ ಪರಮಪ್ರಾಮಾಣಿಕರಾದ ಮಣವಾಳ ಮಾಮುನಿಗಳು ಈ ಉಪದೇಶ ರತ್ನಮಾಲೆಯಲ್ಲಿ "ಎಣ್ಣರುಂ ಶೀರ್ ಪೊಯ್ಗೈ ಮುನ್ನೋರ್ ಇವ್ವುಲಹಿಲ್ ತೋನ್ರಿಯವೂರ್, ಪತ್ತೈಯುಮುಹುಕಿಟ್ಟ ಮೇಲ್ಲ ಮಾಮುನಿಲ್ಲೈ"— ಎಂದು ದೃಢವಾಗಿ ರಚಿಸಲು ಆಗುತ್ತಿರಲಿಲ್ಲ. ಪೆರಿಯ ಆಚ್ಚಾನ್ಪಿಳ್ಳೈ ಕಾಲಕ್ಕೆ ಹಿಂದೆಯೇ ಅವತರಿಸಿ, ಅನುಸಂಧಾನದಲ್ಲಿ ಆಚರಣೆಯಲ್ಲಿ ಬರುತ್ತಿರುವ,

ತಿರುವಂದಾದಿ ತನಿಯನ್‌ಗಳಲ್ಲಿಯೂ—"ಕಟ್ಟುಪಗರ್ ಪೊಯ್‌ಗೈಪ್ಪಿರಾನ್" ಎಂಬುದಾಗಿಯೂ. "ಕದಲ್‌ಮಲ್ಲೈ ಪೂದತ್ತಾರ್" ಎಂಬುದಾಗಿಯೂ—ಇರುವುದಕ್ಕೆ ವ್ಯತ್ಯಾಸವಾಗಿ ಮೇಲಿನ ಅಭಿಪ್ರಾಯಕ್ಕೆ ತಾವು ರಚಿಸುವುದಕ್ಕೂ ಪ್ರಸಕ್ತಿ ಇರಲಾರದು. ಹೀಗಿದ್ದರೂ ವಾಕ್ಯದ ವ್ಯತ್ಯಾಸವು ಉಂಟಾಯಿತು. ಈ ರೀತಿ ವ್ಯತ್ಯಾಸವು ಉಂಟಾಗದೇ ಇರುವುದಕ್ಕೋಸ್ಕರವೇ, ಮಹಾಮುನಿಗಳು, ಆಚಾರ್ಯರುಗಳು ಅವತರಿಸಿದ ಮಾಸಪಕ್ಷ, ದಿವ್ಯದೇಶಗಳನ್ನು ಈ ಉಪದೇಶ ರತ್ನಮಾಲೆಯಲ್ಲಿ ಬರೆದಿಟ್ಟರೆಂದು ತಿಳಿಯಬೇಕು.

ಐಪ್ಪಶಿಯಿಲೋಣಮವಿಟ್ಟಂ ಶದಯಮಿವೈ,
ಒಪ್ಪಿಲವಾನಾಳ್‌ಗಳ್ ಉಲಗತ್ತೀರ್, ಎಪ್ಪುವಿಯುಂ
ಪೇಶುಪುಗಳ್. ಪೊಯ್‌ಗೈಯಾರ್ ಪೂದತ್ತಾಲ್
ಪೇಯಾಳ್ವಾರ್, ತೇಶುಡನೇ ತೋನ್ರು ಶಿರಪ್ಪಾಲ್ || ೬ ||

ಉಲಗತ್ತೀರ್ = ಈ ಲೋಕದಲ್ಲಿರುವ ಜನಗಳೇ, ಎಪ್ಪುವಿಯುಂ ಪೇಶುಪುಗಳ್ = ಲೋಕದ ಎಲ್ಲಾ ಕಡೆಗಳಲ್ಲಿಯೂ ಹರಡಿರುವ ಕೀರ್ತಿಯುಳ್ಳ, ಪೊಯ್‌ಗೈಯಾರ್ ಪೂದತ್ತಾರ್ ಪೇಯಾರ್ = ಪೊಯ್‌ಗೈ, ಪೂದತ್ತಾರ್ ಪೇಯಾಳ್ವಾರ್ ಮೂವರೂ, ತೇಶುಡನೇ ತೋನ್ರುಶಿರಪ್ಪಾಲ್ = ಬಹಳ ತೇಜಸ್ಸಿನಿಂದ ಅವತರಿಸಿದ ಮಹಿಮೆಯಿಂದ, ಒಪ್ಪಿಲ ಆ ನಾಳ್‌ಗಳ್ = ಅಸದೃಶವಾದ ದಿವಸಗಳು ಯಾವುವೆಂದರೆ, ಐಪ್ಪಶಿಯಿಲ್ ಓಣಂ. ಅವಿಟ್ಟಂ, ಶದಯಂ ಇವೈ = ಐಪ್ಪಶಿ ತುಲಾ ಮಾಸದಲ್ಲಿ ಶ್ರವಣ, ಧನಿಷ್ಠ, ಶತಭಿಷ ನಕ್ಷತ್ರಗಳೇ. ಈ ಆಳ್ವಾರುಗಳು ಮೂವರೂ ಭೂಲೋಕದಲ್ಲಿ ದಿವ್ಯಮಂಗಳ ವಿಗ್ರಹದೊಡನೆ ಇದ್ದ ಕಾಲದಲ್ಲಿ ಒಬ್ಬರನ್ನು ಅಗಲಿ ಮತ್ತೊಬ್ಬರು ಇಲ್ಲದವರಾಗಿ, ಮೂವರೂ ಜೊತೆ ಜೊತೆಯಾಗಿಯೇ ಯೋಗಿಗಳಾಗಿ ಇರುತ್ತಿದ್ದುದರಿಂದ ಆಚಾರ್ಯವತಾರದಲ್ಲಿಯೂ ಕೂಡಿಯೇ ಇರೋಣಾದರಿಂದಲೂ ಈ ಮೂವರನ್ನೂ ಸೇರಿಸಿಯೇ ಪಾಶುರವನ್ನು ರಚಿಸಿರುತ್ತಾರೆ.

ಪೊಯ್‌ಗೈಯಾರ್ ಮೂವರಿಗೂ ಮೊದಲಾಳ್ವಾರ್ ಎಂಬುವ ಹೆಸರು ಪ್ರಚಾರಕ್ಕೆ ಬರಲು ಕಾರಣ—

ಮತ್ತುಳ್ಳ ಆಳ್ವಾರ್‌ಗಳುಕ್ಕು ಮುನ್ನೇ ವಂದುದಿತ್ತು,
ನಲ್‌ತಮಿಳಾಲ್ ನೂಲ್ ಶೆಯ್‌ದು ನಾಟ್ಟೈಯುಯ್‌ತ್ತ
ಪೆತ್ತಿಮೈಯೋರ್ ಎನ್ರು ಮುದಲಾಳ್ವಾರ್‌ಗಳ್
ಎನ್ನುಂ ಪೇರ್ ಇವರ್ಕ್ಕು, ನಿನ್ರದು
ಉಲಗತ್ತೇ ನಿಗಳ್‌ನ್ದು || ೭ ||

ಇವರ್ಗ್ಕು = ಇವರುಗಳಿಗೆ, ಮುದಲಾಳ್ವಾರ್‌ಗಳೆನ್ನುಂಪೇರ್ = ಮುದಲಾಳ್ವಾರ್‌ಗಳೆನ್ನುವ ಹೆಸರು, ಉಲಹತ್ತೇ ನಿಹಳ್‌ನ್ದು ನಿನ್ನದು — ಲೋಕದಲ್ಲಿ ಪ್ರಸಿದ್ಧವಾದುದು ಯಾವ ಕಾರಣದಿಂದ ಎಂದರೆ ಉಳಿದ ಏಳು ಆಳ್ವಾರ್‌ಗಳಿಗಿಂತಲೂ ಮೊದಲು ಅವತರಿಸಿದ್ದರಿಂದಲೂ, ನಲ್‌ತಮಿಳಾಲ್ = ಶ್ಲಾಘ್ಯವಾದ ದ್ರಾವಿಡ ಭಾಷೆಯಲ್ಲಿ, ನೂಲ್‌ಶೆಯ್‌ದು = ತಿರುವಂದಾದಿ ಎಂಬ ದಿವ್ಯಪ್ರಬಂಧವನ್ನು ರಚಿಸಿ, ನಾಟ್ಟೈ ಉಯ್‌ತ್ತ ಪೆತ್ತಿಮೈಯೋರ್ ಎನ್ರು — ಈ ಲೋಕವನ್ನು ಉಜ್ಜೀವಿಸುವಂತೆ ಮಾಡಿದವರಾದ ಕಾರಣದಿಂದ ಮೊದಲಾಳ್ವಾರ್ ಎಂದು ಹೆಸರುಂಟಾಯಿತು.

ತಿರುಮಂಗೈ ಆಳ್ವಾರ್‌ರವರ ಅವತಾರದ ದಿವ್ಯಮಹಿಮೆ—

ಪೇದೈನೆಂಜೇ, ಇನ್ರೈಪೆರುಮೈ ಅರಿಂದಿಲ್ಲೈಯೋ,
ಏದುಪೆರುಮೈ ಇನ್ರೈಕ್ಕೆನ್ನಿಲ್ — ಓದುಗಿನ್ರೇನ್,
ವಾಯ್‌ತ್ತಪುಗಳ್. ಮಂಗೈಯರ್‌ಕೋನ್ ಮಾನಿಲತ್ತಿಲ್
ವಂದುದಿತ್ತ, ಕಾರ್ತ್ತಿಗೈಯಿಲ್ ಕಾರ್ತ್ತಿಗೈನಾಳ್‌ಕಾಣ್ ॥ ೮ ॥

ಪೇದೈನೆಂಜೇ = ಜ್ಞಾನವಿಲ್ಲದ ಮನಸ್ಸೇ, ಇನ್ರೈಪೆರುಮೈ ಅರಿಂದಿಲೈಯೋ = ಈ ದಿವಸದ ಮಹಿಮೆಯನ್ನು ತಿಳಿಯಲಿಲ್ಲವೇ? ಇನ್ರೈಕ್ಕು ಎನ್ನ ಏದು ಪೆರುಮೈಯೆನ್ನಿಲ್ = ಈ ದಿವಸಕ್ಕೆ ಅಸಾಧಾರಣ ಮಹಿಮೆ ಏನೆಂದರೆ, ಓದುಗಿನ್ರೇನ್ = ಹೇಳುತ್ತೇನೆ. ವಾಯ್‌ತ್ತ ಪುಗಳ್ = ವಿಶೇಷವಾದ ಕೀರ್ತಿಯನ್ನು ಪಡೆದಿರುವ ಮಂಗೈಯರ್‌ಕೋನ್ = ತಿರುಮಂಗೈ ಆಳ್ವಾರ್, ಮಾನಿಲತ್ತಿಲ್ ವಂದುದಿತ್ತ = ಮಹಾಪೃಥಿವಿಯಲ್ಲಿ ಬಂದು ಅವತರಿಸಿದ, ಕಾರ್ತ್ತಿಗೈಯಿಲ್ = ಕಾರ್ತ್ತಿಕಮಾಸದಲ್ಲಿ, ಕಾರ್ತ್ತಿಗೈನಾಳ್‌ಕಾಣ್ = ಕೃತ್ತಿಕಾ ನಕ್ಷತ್ರವಲ್ಲವೇ, ಇದು !

ಆದಕಾರಣ ಆಳ್ವಾರ್ ತಿರುನಕ್ಷತ್ರದ ದಿವಸ ದೇವಸ್ಥಾನಗಳಲ್ಲೂ ಮನೆಗಳಲ್ಲೂ ಹಾಡುವಂತೆ "ನಾಳ್‌ಪಾಟ್ಟು" ಎಂಬುದು ಶಿಷ್ಯರುಗಳ ಪ್ರಾರ್ಥನೆ ಪ್ರಕಾರ ರಚಿಸಲ್ಪಟ್ಟಿತು.

ನಮ್ಮಾಳ್ವಾರ್ ಅವರು ರಚಿಸಿದ ದ್ರಾವಿಡ ವೇದಗಳಿಗೆ ಆರು ಅಂಗಗಳಾಗಿ ಅವತರಿಸಿದ ಮಹಿಮೆ—

ಮಾರನ್‌ಪಣಿತ್ತ ತಮಿಳ್ ಮರೈಕ್ಕು ಮಂಗೈಯರ್‌ಕೋನ್,
ಆರಂಗಂಕೂರ ಅವತರಿತ್ತ, ವೀರುಡೈಯ ಕಾರ್ತ್ತಿಗೈಯಿಲ್
ಕಾರ್ತ್ತಿಗೈನಾಳ್ ಇನ್ರೆನ್ರು ಕಾದಲಿಪ್ಪಾರ್ ವಾಯ್‌ತ್ತ
ಮಲರ್‌ತ್ತಾಳ್‌ಗಳ್ ನೆಂಜೇ ವಾಳ್‌ತ್ತು ॥ ೯ ॥

ನೆಂಜೇ — ಮನಸ್ಸೇ, ಮಾರನ್‌ಪಣಿತ್ತ — ನಮ್ಮಾಳ್ವಾರ್ ಅವರು ರಚಿಸಿದ ತಮಿಳ್‌ಮರೈಕ್ಕು — ದ್ರಾವಿಡ ವೇದವಾದ ತಿರುವಿರುತ್ತಂ ಮೊದಲಾದ ನಾಲ್ಕು ಪ್ರಬಂಧಗಳಿಗೆ, ಆರ್ ಅಂಗಂಕೂರ — ಆರು ಅಂಗಗಳಾಗಿರುವಂತೆ, ಮಂಗೈಯರ್ ಕೋನ್ ಅವತರಿತ್ತ — ತಿರುಮಂಗೈ ಆಳ್ವಾರ್ ಜನಿಸಿದ, ವೀರುಡೈಯ — ಮಹಿಮೆಯೊಂದಿಗೆ ಸೇರಿದ, ಕಾರ್ತ್ತಿಗೈಯಿಲ್ ಕಾರ್ತ್ತಿಗೈನಾಳ್ ಇನ್ರೆನ್ರು — ಕಾರ್ತಿಗೈ ಮಾಸದ ಕೃತ್ತಿಕಾನಕ್ಷತ್ರ ಎಂಬುದಾಗಿ, ಕಾದಲಿಪ್ಪಾರ್ — ಕುತೂಹಲಪಡುವವರ, ವಾಯ್‌ತ್ತ ಮಲರ್‌ತ್ತಾಳ್‌ಗಳ್ — ಸ್ವರೂಪ ಪ್ರಾಪ್ತವಾದ ತಿರುವಡಿಗಳನ್ನು, ವಾಳ್ತ್ತು — ಸ್ತೋತ್ರಮಾಡು.

"ಆಚಾರ್ಯಹೃದಯ"ದಲ್ಲಿ — "ವೇದಚತುಷ್ಟಯ ಅಂಗೋಪಾಂಗಂಗಳ್ ಪದಿನಾಲುಂಪೋಲೇ" ನಾಲ್ಕು ವೇದಗಳ ಅಂಗ ಉಪಾಂಗವಾದ ಹದಿನಾಲ್ಕು ಲಕ್ಷಣಗಳು ಯಾವ ರೀತಿ ಇದೆಯೋ ಅದರಂತೆಯೇ ದ್ರಾವಿಡ ವೇದಕ್ಕೂ ಆ ಲಕ್ಷಣಗಳುಂಟು. ಋಗ್ಯಜುಸ್ಸಾಮ ಅಥರ್ವಣಗಳೆಂಬ ನಾಲ್ಕು ವೇದಗಳಿಗೂ ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್ಸು, ಕಲ್ಪ, ಜ್ಯೋತಿಷವೆಂಬ ಆರು ಅಂಗಗಳೂ, ಮೀಮಾಂಸಾ, ನ್ಯಾಯ, ಪುರಾಣ, ಧರ್ಮಶಾಸ್ತ್ರ ಇವೇ ಮೊದಲಾದ ಉಪಾಂಗಗಳೆಂದೂ, ಒಟ್ಟು ಹದಿನಾಲ್ಕು ಅಂಗಗಳಂತೆ, ತಿರುವಿರುತ್ತಂ, ತಿರುವಾಶಿರಿಯಂ, ಪೆರಿಯತಿರುವಂದಾದಿ, ತಿರುವಾಯ್ಮೊಳಿ ಎಂಬುವ ನಾಲ್ಕು ವೇದಕ್ಕೂ, ತಿರುಮಂಗೈ ಆಳ್ವಾರ್ ಅವರ ದಿವ್ಯಪ್ರಬಂಧಗಳಾರೂ, ಉಳಿದ ಐದು ಆಳ್ವಾರ್‌ಗಳವರ ದಿವ್ಯಪ್ರಬಂಧಗಳೂ ಅಂಗೋಪಾಂಗಗಳೆಂಬುದಾಗಿ ತಾತ್ಪರ್ಯ, ತಿರುಮಂಗೈ ಆಳ್ವಾರ್ ಅವರ ಪೆರಿಯತಿರುಮೊಳಿ, ತಿರುಕ್ಕುರುಂದಾಂಡಕಂ, ತಿರುವೆಳುಕೂಟ್ರಿರುಕ್ಕೈ, ಶಿರಿಯತಿರುಮಡಲ್, ಪೆರಿಯತಿರುಮಡಲ್, ತಿರುನೆಡುಂದಾಂಡಕಮ್ — ಆರು ಪ್ರಬಂಧಗಳೂ ಆರು ಅಂಗವಾಗಿ ಅಂಗೀಕರಿಸಲ್ಪಟ್ಟಿವೆ. ನಮ್ಮಾಳ್ವಾರ್ ಅವರ ಮನೋಭಿಪ್ರಾಯವನ್ನು ಅನುಸರಿಸಿಯೇ ಇವರು ರಚಿಸಿರುವುದರಿಂದ ಈ ರೀತಿ ಹೇಳಲಾಗಿದೆ.

ತಿರುಪ್ಪಾಣಾಳ್ವಾರ್ ಅವತರಿಸಿದ ನಕ್ಷತ್ರ—

ಕಾರ್ತ್ತಿಗೈಯಿಲ್ ರೋಹಿಣಿನಾಳ್ ಕಾಣ್ಮಿನ್ ಇನ್ರು
ಕಾಶಿನಿಯೀರ್, ವಾಯ್‌ತ್ತಪುಗಳ್. ಪ್ಪಾಣರ್ ವಂದು
ದಿಪ್ಪಾಲ್, ಆತ್ತಿಯರ್‌ಗಳ್ ಅನ್ಬುಡನೇ ತಾನ್
ಅಮಲನಾದಿಪಿರಾನ್ ಕತ್ತದರ್ಪಿನ್ ನನ್ಗುಡನೇ
ಕೊಂಡಾಡುಂನಾಳ್ ॥ ೧೦ ॥

ಧಾರಿಣಿಯೀರ್ — ಲೋಕದಲ್ಲಿರುವ ಜನಗಳೇ! ಇನ್ರು — ಈ ದಿವಸ, ಕಾರ್ತ್ತಿಗೈಯಿಲ್ ರೋಹಿಣಿನಾಳ್ — ಕಾರ್ತ್ತಿಕ — ಕಾರ್ತ್ತಿಕಮಾಸದ ರೋಹಿಣೀ ನಕ್ಷತ್ರ ವಾಗಿದೆ. ವಾಯ್ತ್ತಪುಗಳ್ — ಮಹತ್ತರವಾದ ಕೀರ್ತ್ತಿಯುಳ್ಳವರಾದ, ಪಾಣರ್ — ತಿರುಪ್ಪಾಣಾಳ್ವಾರ್, ವಂದುದಿಪ್ಪಾಲ್ — ಬಂದು ಅವತರಿಸಿದ್ದರಿಂದ, ಆತ್ತಿಯರ್‌ಗಳ್ — ಆಸ್ತಿಕರುಗಳು, ಅನ್ಬುಡನೇ ತಾನ್ — ಭಕ್ತಿಯಿಂದ, ಅಮಲನಾದಿಪಿರಾನ್ ಕತ್ತದರ್ಕ್ಕು — ಅಮಲನಾದಿಪಿರಾನ್ ಎನ್ನುವ ಪ್ರಬಂಧವನ್ನು ಕಲಿತಮೇಲೆ ನಣ್ಣುದಲ್ — ಬಹಳ ಸಂತೋಷದಿಂದ, ಕೊಂಡಾಡುಂನಾಳ್ — ಹೊಗಳುವಂತಹ ದಿವಸವಾಗಿದೆ.

ತೊಂಡರಡಿಪ್ಪೊಡಿ ಅವತರಿಸಿದ ನಕ್ಷತ್ರ—

"ಮನ್ನಿಯಶೀರ್ ಮಾರ್ಗಳಿಯಿಲ್ ಕೇಟ್ಟೈಯಿನ್ನು
ಮಾನಿಲತ್ತೀರ್, ಎನ್ನಿದನುಕ್ಕೇತ್ತಮೆನಿಲ್ ಉರೈಕ್ಕೇನ್,
ತುನ್ನುಪುಗಳ್, ಮಾಮರೈಯೋನ್ ತೊಂಡರಡಿಪ್ಪೊಡಿ
ಯಾಳ್ವಾರ್ ಪಿರಪ್ಪಾಲ್, ನಾನ್ಮರೈಯೋರ್
ಕೊಂಡಾಡುಂನಾಳ್" ॥ ೧೧ ॥

ಮಾನಿಲತ್ತೀರ್ — ವಿಶಾಲವಾದ ಲೋಕದಲ್ಲಿರುವ ಜನಗಳೇ, ಇನ್ನುಶೀರ್ ಮನ್ನಿಯ ಮಾರ್ಗಳಿಯಿಲ್ ಕೇಟ್ಟೈ — ಈ ದಿವಸ ಘನತೆಯೊಡನೆ ಕೂಡಿದ ಧನುರ್ಮಾಸದ ಜ್ಯೇಷ್ಠಾ ನಕ್ಷತ್ರವಾಗಿದೆ. ಇದನುಕ್ಕು — ಈ ದಿವಸಕ್ಕೆ, ಏತ್ತಮೆನಿಲ್ — ಏನು ಮಹಿಮೆಯೆಂದರೆ, ಉರೈಕ್ಕೇನ್ — ಹೇಳುವೆನು, ಕೇಳಿರಿ. ತುನ್ನುಪುಗಳ್ ಮಾಮರೈಯೋನ್ — ತುಂಬಿದ ಕೀರ್ತ್ತಿಯುಳ್ಳ ವೈದಿಕರಾದ, ತೊಂಡರಡಿಪ್ಪೊಡಿ ಆಳ್ವಾರ್ — ತೊಂಡರಡಿಪ್ಪೊಡಿ ಆಳ್ವಾರ್ರವರ, ಪಿರಪ್ಪಾಲ್ ನಾನ್ಮರೈಯೋರ್ — ಅವತಾರವೇ ಕಾರಣವಾಗಿ ವೈದಿಕೋತ್ತಮರುಗಳು, ಕೊಂಡಾಡುಂನಾಳ್ — ಆದರಿಸುವಂತಹ ದಿವಸವಾಗಿದೆ.

ತಿರುಮಳಿಶೈ ಆಳ್ವಾರ್ ಅವತರಿಸಿದ ನಕ್ಷತ್ರ—

"ತೈಯಿಲ್ ಮಕಂ ಇನ್ನು ಧಾರಿಣಿಯೀರ್ ಏತ್ತಂ, ಇಂದ
ತೈಯಿಲ್ ಮಗತ್ತುಕ್ಕು ಶಾತ್ತುಗಿನ್ರೇನ್, ತುಯ್ಯಮದಿ
ಪೆತ್ತಮಳಿಶೈಪ್ಪಿರಾನ್ ಪಿರಂದನಾಳೆನ್ನು,
ನಱ್ತವರ್‌ಗಳ್ ಕೊಂಡಾಡುಂನಾಳ್" ॥ ೧೨ ॥

(ತೈಯ್ಯಿಲ್ ಮಗಮಿನ್ರು ತಾರಣಿಯೀರ್ ಏತ್ತಂ ತಾರಣಿಯೀರ್— ಭೂಲೋಕದ ಜನಗಳೇ, ಇನ್ರು = ಈ ದಿವಸ. ತೈಯ್ಯಿಲ್‌ಮಗಂ — ತೈ (ಪುಷ್ಯ) ಮಾಸದ ಮಖಾನಕ್ಷತ್ರವಾಗಿದೆ. ಇಂದತ್ತೈಯ್ಯಿಲ್ ಮಗತ್ತುಕ್ಕು ಏತ್ತಂ ಶಾತ್ತುಗಿನ್ರೇನ್ = ಈ ತೈಮಾಸದ ಮಖಾನಕ್ಷತ್ರಕ್ಕೆ ಉಂಟಾಗಿರುವ ಹಿರಿಮೆಯನ್ನು ಹೇಳುತ್ತೇನೆ, ಕೇಳಿರಿ. ತುಯ್ಯಮದಿಪೆತ್ತ = ಪರಿಶುದ್ಧವಾದ ಜ್ಞಾನವನ್ನು ಹೊಂದಿದ, ಮಳಿಶೈಪ್ಪಿರಾನ್ ಪಿರಂದನಾಳೆನ್ರು = ತಿರುಮಳಿಶೈ ಆಳ್ವಾರ್ ಅವತರಿಸಿದ ದಿನ ನಾಳ್ ಎಂದು, ನಲ್ತವರ್ಗಳ್ ಕೊಂಡಾಡುಂನಾಳ್ = ಮಹಾತಪಸ್ವಿಗಳು ಹೊಗಳುವಂತಹ ದಿವಸವಾಗಿದೆ. ಈ ಆಳ್ವಾರ್ ಅವರು ಪೇಯಾಳ್ವಾರ್ ತಿರುವಡಿಗಳನ್ನು ಆಶ್ರಯಿಸಿ ಜ್ಞಾನವನ್ನು ಹೊಂದಿದವರಾದ್ದರಿಂದ, "ತುಯ್ಯಮದಿಪೆತ್ತ" ಎಂಬುದಾಗಿ ಮಣವಾಳ ಮಾಮುನಿಗಳು ಹೇಳಿದರು. ಮಖಾನಕ್ಷತ್ರವನ್ನು ಸುತ್ತಿಕೊಂಡು ಸಪ್ತಋಷಿಗಳು ಇರುತ್ತಾರೆಂದು ಜ್ಯೋತಿಷ್ಯಕರು ಹೇಳುತ್ತಾರಾದ್ದರಿಂದ ಆದಕ್ಕೆ ಅನುಗುಣವಾಗಿ, ನಲ್ತವರ್ಗಳ್ = ಎಂಬುದಾಗಿ ಹೇಳಿದಾರೆ.

ಕುಲಶೇಖರಾಳ್ವಾರ್ ತಿರುನಕ್ಷತ್ರ—

ಮಾಶಿಪ್ಪುನರ್ಪೂಶಂಕಾಣ್ಮಿನ್ ಇನ್ರು ಮಣ್ಣುಲಗೀರ್,
ತೇಶಿತ್ತಿವಶತ್ತುಕ್ಕೇದೆನ್ನಿಲ್ — ಪೇಶುಗಿನ್ರೇನ್,
ಕೊಲ್ಲಿನಗರ್ಕ್ಕೋನ್ ಕುಲಶೇಖರನ್ ಪಿರಪ್ಪಾಲ್,
ನಲ್ಲವರ್ಗಳ್ ಕೊಂಡಾಡುಂನಾಳ್ ॥ ೧೩ ॥

ಮಣ್ಣುಲಗೀರ್ = ಭೂಲೋಕದಲ್ಲಿರುವ ಜನಗಳೇ, ಇನ್ರು = ಈ ದಿವಸ. ಮಾಶಿಪ್ಪುನರ್ಪೂಶಂಕಾಣ್ಮಿನ್ = ಮಾಘಮಾಸದ ಪುನರ್ವಸು ನಕ್ಷತ್ರವಲ್ಲವೇ? ಇತ್ತಿವಶತ್ತುಕ್ಕು = ಈ ದಿವಸಕ್ಕೆ, ತೇಶು (ಕಾಂತಿ) ಏದೆನ್ನಿಲ್ = ಏನು ಮಹಿಮೆಯೆಂದರೆ ಪೇಶುಗಿನ್ರೇನ್ = ಹೇಳುತ್ತೇನೆ, ಕೇಳಿ. ಕೊಲ್ಲಿನಗರ್ಕ್ಕೋನ್ = ಕೊಲ್ಲಿ ಎನ್ನುವ ಊರಿಗೆ ದೊರೆಯಾದ, ಕುಲಶೇಖರನ್ ಪಿರಪ್ಪಾಲ್ = ಕುಲಶೇಖರಾಳ್ವಾರ್ ಅವತರಿಸಿದ್ದರ ಕಾರಣವಾಗಿ, ನಲ್ಲವರ್ಗಳ್ = ಸದ್ಗುಣ ಸಂಪನ್ನರು, ಕೊಂಡಾಡುಂನಾಳ್ = ಹೊಗಳುವಂತಹ ದಿವಸವಾಗಿದೆ.

ನಮ್ಮಾಳ್ವಾರ್ ಅವರ ತಿರುನಕ್ಷತ್ರ—

ಏರಾರ್ ವೈಗಾಶಿ ವಿಶಾಗತ್ತಿನ್ ಏತ್ತತ್ತೈ, ಪ್ಪಾರೋರ
ರಿಯಪ್ಪಗರ್ಗಿನ್ರೇನ್, ಶೀರಾರುಂ ವೇದಂತಮಿಳ್,
ಶೆಯ್ದ ಮೆಯ್ಯನ್ ಎಳಿಲ್ ಕುರುಗೈನಾದನ್,
ಅವತರಿತ್ತನಾಳ್ ॥ ೧೪ ॥

ಏರಾರ್—ಮಹಿಮೆ ತುಂಬಿದ, ವೈಗಾಶಿವಿಶಾಗತ್ತಿನ್=ವೈಶಾಖಮಾಸದ ವಿಶಾಖಾನಕ್ಷತ್ರದ, ಏತ್ತತ್ತೈ=ಮಹಿಮೆಯನ್ನು, ಪಾರೋರ್—ಲೋಕದಲ್ಲಿರುವವರು, ಅರಿಯ=ತಿಳಿದುಕೊಳ್ಳುವಂತೆ, ಪಗರ್ಕಿನ್ರೇನ್—ಹೇಳುತ್ತೇನೆ. ಶೀರಾರುಂ ವೇದಂ=ವಿಶೇಷವಾದ ಮಹಿಮೆಯುಳ್ಳ ಸಂಸ್ಕೃತ ವೇದವನ್ನು, ತಮಿಳ್ ಶೆಯ್ದ=ದ್ರಾವಿಡಭಾಷೆಯಲ್ಲಿ ರಚಿಸಿದ, ಮೆಯ್ಯನ್=ಸತ್ಯವಾದಿಯಾದ, ಎಳಿಲ್ ಕುರುಗೈನಾದನ್=ರಮಣೀಯವಾದ ಆಳ್ವಾರ್ ತಿರುನಗರಿಗೆ ಸ್ವಾಮಿಯಾದ ನಮ್ಮಾಳ್ವಾರ್ ಅವರು, ಅವತರಿತ್ತನಾಳ್=ಭೂಲೋಕದಲ್ಲಿ ಅವತರಿಸಿದ ತಿರುನಾಳ್ ಆಗಿದೆ (ದಿವ್ಯದಿವಸವಾಗಿದೆ).

ನಮ್ಮಾಳ್ವಾರ್ ಅವರೂ, ಅವರ ಅವತಾರ ದಿವಸವೂ, ಅವರ ಗ್ರಂಥಗಳೂ, ಅಸದೃಶವಾದವುಗಳು.

* ಉಂಡೋ ವೈಗಾಶಿ ವಿಶಾಕತ್ತುಕ್ಕು ಒಪ್ಪೊರುನಾಳ್,
ಉಂಡೋ ಶಠಕೋಪರ್ಕ್ಕು ಒಪ್ಪೊರುವರ್, ಉಂಡೋ
ತಿರುವಾಯ್ಮೊಳಿ.ಕ್ಕೊಪ್ಪು ತೆನ್ಕುರುಗೈಕ್ಕು ಉಂಡೋ,
ಒರುಪಾರ್ ತನ್ನಿಲೊಕ್ಕುಮೂರ್ ॥ ೧೫ ॥

ವೈಗಾಶಿ ವಿಶಾಗತ್ತುಕ್ಕೊಪ್ಪೊರುನಾಳ್ ಉಂಡೋ?=ವೈಶಾಖ ವಿಶಾಖಾ ನಕ್ಷತ್ರಕ್ಕೆ ಸಮಾನವಾದ ನಕ್ಷತ್ರ ಉಂಟೋ? (ಇಲ್ಲವೆಂದರ್ಥ). ಶಠಕೋಪರ್ಕ್ಕು ಒಪ್ಪೊರುವರ್ ಉಂಡೋ—ನಮ್ಮಾಳ್ವಾರ್ ಅವರಿಗೆ ಸಮಾನರಾದ ಆಳ್ವಾರ್ ಮತ್ತೊಬ್ಬರು ಉಂಟೋ, ತಿರುವಾಯ್ಮೊಳಿ.ಕ್ಕು ಒಪ್ಪು ಉಂಡೋ=ತಿರುವಾಯ್ಮೊಳಿ.ಗೆ ಸಮಾನವಾದ ದಿವ್ಯಪ್ರಬಂಧ ಉಂಟೋ? ಈ ಭೂಲೋಕದಲ್ಲಿ, ತೆನ್ಕುರುಗೈಕ್ಕು ಉಂಡೋಪಾರ್—ಈ ಭೂಮಂಡಲದಲ್ಲಿ, ತನ್ನಿಲೊಕ್ಕುಂ=ತಿರುನಗರಿಗೆ ಸಮಾನವಾದ, ಒರುಊರುಂಡೋ=ಯಾವುದಾದರೂ ಊರುಉಂಟೋ? (ಇಲ್ಲವೇ ಇಲ್ಲವೆಂದರ್ಥ)

ಪೆರಿಯಾಳ್ವಾರ್ ತಿರುನಕ್ಷತ್ರ—

* ಇನ್ರೈಪ್ಪೆರುಮೈ ಅರಿಂದಿಲ್ಲೈಯೋ ಏಳೈ.ನೆಂಜೇ,
ಇನ್ರೈಕ್ಕೆನ್ನೇತ್ತಮೆನಿಲ್ ಉರೈಕ್ಕೇನ್, ನನ್ನಿಪುನೈ
ಪಲ್ಲಾಂಡುಪಾಡಿಯ ನಂ ಪಟ್ಟರ್‌ಪಿರಾನ್, ವಂದುದಿತ್ತ,
ನಲ್ಲಾನಿಯಿಲ್ ಶೋದಿನಾಳ್ ॥ ೧೬ ॥

ಏಳೈ ನೆಂಜೇ = ಚಪಲಬುದ್ಧಿಯುಳ್ಳ ಮನಸ್ಸೇ, ಇನ್ರೈಪ್ಪೆರುಮೈ ಅರಿಂದಿಲೈಯೋ = ಈ ದಿವಸಕ್ಕೆ ಏನು ಮಹಿಮೆ? ಎಂದು ತಿಳಿಯಲಿಲ್ಲವೋ? ಇನ್ರೈಕ್ಕು ಎನ್ನೇತ್ರಂ ಎನಿಲ್ = ಈ ದಿವಸಕ್ಕೆ ಮಹಿಮೆ ಏನೆಂದರೆ, ಉರೈಕ್ಕೇನ್ = ಹೇಳುತ್ತೇನೆ ಕೇಳು. ನನ್ರಿಪುನೈ = ಶ್ಲಾಘ್ಯವಾದ, ಪಲ್ಲಾಂಡುಪಾಡಿನ = "ತಿರುಪ್ಪಲ್ಲಾಂಡು" ಎನ್ನುವಂತಹ ಗ್ರಂಥವನ್ನು ರಚಿಸಿದ, ನಂ ಪಟ್ಟರ್‌ಪಿರಾನ್ ವಂದುದಿತ್ತ = ನಮ್ಮ ಪೆರಿಯಾಳ್ವಾರ್ ಅವತರಿಸಿದ, ನಲ್ಲಾನಿಯಿಲ್‌ಶೋದಿನ್ನಾಳ್ = ಜ್ಯೇಷ್ಠ (ಮಿಥುನ) ಮಾಸದ ಸ್ವಾತಿ ಎನ್ನುವಂತಹ ಶ್ಲಾಘ್ಯವಾದ ದಿವಸವಾದದ್ದು

ಮಾನಿಲತ್ತಿಲ್ ಮುನ್ನಂ ಪೆರಿಯಾಳ್ವಾರ್‌ವಂದುದಿತ್ತ,
ಆನಿದನ್ನಿಲ್ ಶೋದಿಯೆನ್ನಾಲ್ ಆದರಿಕ್ಕುಂ, ಜ್ಞಾನಿಯರ್ಕ್ಕು
ಒಪ್ಪೋರಿಲ್ಲೈ ಇವ್ವುಲಗುದನಿಲ್ ಎನ್ರು ನೆಂಜೇ,
ಎಪ್ಪೋದುಂ ಶಿಂದಿತ್ತಿರು ‖ ೧೮ ‖

ಓ ನೆಂಜೇ = ಎಲೈ ಮನಸ್ಸೇ, ಮುನ್ನಂ — ಹಿಂದೆ ಒಂದಾನೊಂದು ಕಾಲದಲ್ಲಿ. ನಂಪೆರಿಯಾಳ್ವಾರ್, ನಮಗೆಲ್ಲರಿಗೂ ಹಿರಿಯರಾದ ಪೆರಿಯಾಳ್ವಾರ್ ಅವರು, ಮಾನಿಲತ್ತಿಲ್ ವಂದುದಿತ್ತ = ಈ ಲೋಕಕ್ಕೆ ಬಂದು ಅವತರಿಸಿದ, ಆನಿದನ್ನಿಲ್ ಶೋದಿ ಎನ್ನಾಲ್ = ಜ್ಯೇಷ್ಠ ಮಾಸದ ಸ್ವಾತೀನಕ್ಷತ್ರವೆಂದರೆ, ಅದನ್ನು ಆದರಿಕ್ಕುಂ = ಶ್ಲಾಘಿಸುವಂತಹ, ಜ್ಞಾನಿಯರ್ಕ್ಕು = ಜ್ಞಾನಿಗಳಿಗೆ, ಒಪ್ಪೋರ್ ಇವ್ವುಲಹುದನಿಲ್ ಇಲ್ಲೈ ಎನ್ರು = ಸಮಾನರಾದವರು ಈ ಲೋಕದಲ್ಲಿ ಯಾರೂ ಇಲ್ಲವೆಂಬುದಾಗಿ, ಎಪ್ಪೋದುಂಶಿಂದಿತ್ತು ಇರು = ಸದಾ ಕಾಲದಲ್ಲಿಯೂ ಚಿಂತನೆ ಮಾಡುತ್ತಿರು.

ಮಂಗಳಾಶಾಸನತ್ತಿಲ್ ಮತ್ತುಳ್ಳ ಆಳ್ವಾರ್‌ಗಳ್,
ತಂಗಳಾರ್ವತ್ತಳವು ತಾನನ್ರಿ, ಪೊಂಗುಂ ಪರಿವಾಲೇ
ವಿಲ್ಲಿ ಪುತ್ತೂರ್ ಪಟ್ಟರ್‌ಪಿರಾನ್ ಪೆತ್ತಾನ್,
ಪೆರಿಯಾಳ್ವಾರ್ ಎನ್ನುಂಪೆಯರ್ ‖ ೧೯ ‖

ವಿಲ್ಲಿಪುತ್ತೂರ್ ಪಟ್ಟರ್‌ಪಿರಾನ್ = ಶ್ರೀ ವಿಲ್ಲಿಪುತ್ತೂರಿನಲ್ಲಿ ಅವತರಿಸಿದ, ವಿಷ್ಣುಚಿತ್ತರ್ = ಪೆರಿಯಾಳ್ವಾರ್ ಎನ್ನುಂ ಪೆಯರ್ = ಪೆರಿಯಾಳ್ವಾರ್ ಎಂಬುವ ದಿವ್ಯನಾಮವನ್ನು, ಪೆತ್ತಾನ್ = ಬಿರುದಾಗಿ ಪಡೆದರು. (ಈ ಹೆಸರು ಯಾವ ಕಾರಣದಿಂದ ಬಂತು ಎಂದರೆ) ಮಂಗಳಾಶಾಸನತ್ತಿಲ್ = ಭಗವಂತನಿಗೆ ರಕ್ಷೆಯನ್ನು ಹಾರೈಸಿದ ವಿಷಯದಲ್ಲಿ, ಮತ್ತುಳ್ಳ ಆಳ್ವಾರ್‌ತಂಗಳ್ = ಇತರ ಆಳ್ವಾರ್ಗಳ,

ಅಸ್ವತ್ತೀಕ್ಷವಾಸನ್ನು ಪ್ರೀತಿಗಿಂತಲೂ ಅಧಿಕವಾಗಿ, ಪೊಂಗುಂ ಪರಿವಾಲ್ — ಉಕ್ಕಿ ಬರುತ್ತಿರುವುದೇ ಕಾರಣವಾಗಿ, ಪೆರಿಯಾಳ್ವಾರ್ ಅವರಿಗೆ ಪೆರಿಯಾಳ್ವಾರ್ ಎಂಬ ಹೆಸರು ಯಾವ ಕಾರಣದಿಂದ ಉಂಟಾಯಿತೆಂದರೆ ಇವರು ಇತರ ಆಳ್ವಾರ್ಗಳಿಗಿಂತ ದೊಡ್ಡವರೂ ಅಲ್ಲ. ಮೊದಲಾಳ್ವಾರ್ ಮೊದಲಾಗಿ ಕುಲಶೇಖರರು ಮುಗಿಯುವವರೆಗೆ ಇರುವ ಆಳ್ವಾರ್ಗಳು ಇವರಿಗಿಂತ ವಯೋವೃದ್ಧರು; ದೊಡ್ಡ ಪ್ರಬಂಧವನ್ನು ರಚಿಸಿದವರೋ ಎಂದರೆ ನಮ್ಮಾಳ್ವಾರ್ಗಿಂತ ಹೆಚ್ಚಾದ ಪ್ರಬಂಧವನ್ನು ರಚಿಸಿದವರಲ್ಲ. ಆದರೆ ಪೆರಿಯಾಳ್ವಾರ್ ಎಂಬ ಹೆಸರು ಯಾವ ಕಾರಣದಿಂದ ಉಂಟಾಯಿತೆಂದರೆ, ಭಗವಂತನಿಗೆ ಯಾವ ಅಪಾಯವು ಸಂಭವಿಸುವುದೋ ಎಂಬುದಾಗಿ ಹೊಟ್ಟೆಯಲ್ಲಿ ಕಿರುಕುಳ ಉಂಟಾಗಿತವಾಗಿ ಭಗವಂತನಿಗೆ ಯಾವ ಅಪಾಯವೂ ಸಂಭವಿಸದಂತೆ ಮಂಗಳಾಶಾಸನವನ್ನು ಮಾಡಿದ್ದರಿಂದ, ಆದರೆ ಮಿಕ್ಕ ಆಳ್ವಾರ್ಗಳಿಗೆ ಪ್ರೀತಿ ಇಲ್ಲವೇ ಎಂದರೆ, ಇವರಿಗೆ ಅವರಿಗಿಂತಲೂ ವಿಶೇಷವಾಗಿ ಪ್ರೀತಿಯು ತುಂಬಿತ್ತು, ಕೋಡಿವರಿಯುತ್ತಿತ್ತು ಎಂದು ಭಾವ.

ತಿರುಪ್ಪಲ್ಲಾಂಡನ್ನು ಮೊದಲೇ ಪ್ರಾರಂಭಿಸುವುದಕ್ಕೆ ಕಾರಣ—

ಕೋದಿಲವಾಂ ಆಳ್ವಾರ್ಗಳ್ ಕೂರುಕಲೈಕ್ಕೆಲ್ಲಾಂ
ಆದಿ ತಿರುಪ್ಪಲ್ಲಾಂಡಾನದವುಂ, ವೇದತ್ತುಕ್ಕು ಓಂ ಎನ್ನುಮದು
ಪೋಲ್ ಉಳ್ಳದುಕ್ಕೆಲ್ಲಾಂ ಶುರುಕ್ಕಾಯ್,
ತಾನ್ ಮಂಗಳ ಮಾದಲಾಲ್ ||೧೯||

ಕೋದಿಲವಾಂ — ದೋಷವಿಲ್ಲದೇ ಇರುವ, ಆಳ್ವಾರ್ಗಳ್ ಕೂರುಕಲೈಕ್ಕೆಲ್ಲಾಂ — ಆಳ್ವಾರ್ಗಳು ರಚಿಸಿದ ದಿವ್ಯಪ್ರಬಂಧಗಳಿಗೆಲ್ಲಾ, ತಿರುಪ್ಪಲ್ಲಾಂಡು ಆದಿ ಆನದವುಂ — ತಿರುಪ್ಪಲ್ಲಾಂಡೇ ಮೊದಲನೆಯ ಪ್ರಬಂಧವಾಗಿ ಪರಿಗಣಿಸಲ್ಪಟ್ಟಿದ್ದು, ಯಾವ ಕಾರಣದಿಂದ ಎಂದರೆ, ವೇದತ್ತುಕ್ಕು "ಓಂ" ಎನ್ನುಮದು ಪೋಲ್ — ಸಕಲವೇದಗಳಿಗೂ ಪ್ರಣವದಂತೆ, ಉಳ್ಳದುಕ್ಕೆಲ್ಲಾಂ ಶುರುಕ್ಕಾಯ್ — ವೇದದಲ್ಲಿರುವ ಅರ್ಥಗಳಿಗೆಲ್ಲಾ ಸಂಗ್ರಹವಾಗಿ, ಮಂಗಳ ಮಾದಲಾಲ್ — ಮಂಗಳ ರೂಪವಾಗಿಯೂ ಇರುವುದರಿಂದ.

ಆಸಾರವೇನು ತಿಳಿಯಬೇಕಾದ ವಿಷಯವು ಯಾವುದೂ ಇಲ್ಲದೆ ಈ ಪ್ರಬಂಧದಲ್ಲಿರುವ ಅರ್ಥವು ಪೂರ್ಣವಾಗಿ, ರಸಭರಿತವಾಗಿರುವುದರಿಂದ, ವೇದಕ್ಕೆ ಪ್ರಣವವು ಮೊದಲನೆಯದಾಗಿರುವಂತೆ, ದಿವ್ಯಪ್ರಬಂಧಗಳಿಗೆಲ್ಲಾ "ತಿರುಪ್ಪಲ್ಲಾಂಡು" ಮೊದಲನೆಯ ಪ್ರಬಂಧವಾಗಿದೆ. ಪ್ರಣವಾಕ್ಷರವು ಸಕಲವೇದಸಾರಾರ್ಥಯುತವಾಗಿಯೂ, ಮಂಗಳಕರವಾಗಿಯೂ ಇರುವಂತೆ, ಸರ್ವಾಧಿಕಾರಿಗಳೂ ಅಭ್ಯಾಸಮಾಡುವ

ಈ ಪ್ರಬಂಧದಲ್ಲಿ "ಓಂ" ಎಂದು ಪ್ರಯೋಗ ಮಾಡಿರೋಣದರಿಂದ, ಪ್ರಣವಾಕ್ಷರವು ಸರ್ವಾಧಿಕಾರವೆಂಬುದಾಗಿ ಆಚಾರ್ಯರುಗಳ ಅಭಿಪ್ರಾಯವೆಂದು ತಿಳಿಯತಕ್ಕದ್ದು.

ತಿರುಪ್ಪಲ್ಲಾಂಡಿಗೂ, ಪೆರಿಯಾಳ್ವಾರಿಗೂ ಸಮಾನರು ಯಾರೂ ಇಲ್ಲ—

***ಉಂಡೋ ತಿರುಪ್ಪಲ್ಲಾಂಡುಕ್ಕು ಒಪ್ಪದೋರ್ ಕಲೈತಾನ್,**
ಉಂಡೋ ಪೆರಿಯಾಳ್ವಾರ್ ಕ್ಕೊಪ್ಪೊರುವರ್, ತಣ್ ತಮಿಳ್
ನೂಲ್ ಶೆಯ್ದರುಳುಂ ಆಳ್ವಾರ್‌ಗಳ್ ತಮ್ಮಿಲವರ್
ಶೆಯ್ ಕಲೈಯಿಲ್, ಪೈದಲ್ ನೆಂಜೇ!
ನೀ ಉಣರ್ನ್ದು ಪಾರ್ || ೨೦ ||

ತಣ್ ತಮಿಳ್ ನೂಲ್ ಶೆಯ್ದರುಳುಂ ಆಳ್ವಾರ್‌ಗಳ್ ತಮ್ಮಿಲ್— ದಿವ್ಯ ಪ್ರಬಂಧವನ್ನು ರಚಿಸಿದ ಆಳ್ವಾರುಗಳಲ್ಲಿ ಪೆರಿಯಾಳ್ವಾರರವರಿಗೆ ಸಮಾನರಾದರೂ ಉಂಟೇ? ಇಲ್ಲ (ಎಂದರ್ಥ). ಅವರ್ ಶೆಯ್ ಕಲೈಯಿಲ್, ಆ ಆಳ್ವಾರ್‌ಗಳು ರಚಿಸಿದ ಪ್ರಬಂಧಗಳಲ್ಲಿ ತಿರುಪ್ಪಲ್ಲಾಂಡುಕ್ಕು ಒಪ್ಪದು ಓರ್ ಕಲೈತಾನ್ ಉಂಡೋ— ತಿರುಪ್ಪಲ್ಲಾಂಡಿಗೆ ಸಮಾನವಾದ ಪ್ರಬಂಧ ಉಂಟೇ? (ಇಲ್ಲವೆಂದರ್ಥ). ಪೈದಲ್ ನೆಂಜೇ— ಜ್ಞಾನವಿಲ್ಲದ ಮನಸ್ಸೇ, ನೀ ಉಣರ್ನ್ದು ಪಾರ್— ಇದನ್ನು ನೀನು ವಿಚಾರಮಾಡಿ ತಿಳಿದುಕೋ.

ಆಂಡಾಳ್ ಮಧುರ ಕವಿಗಳ್ ಯತಿರಾಜರ್ ಈ ಮೂವರುಗಳ ಅವತಾರ ದಿವಸವನ್ನು ತಿಳಿಸುವ ಪಾಶುರ.

ಆಳ್ವಾರ್ ತಿರುಮಗಳಾರ್ ಆಂಡಾಳ್, ಮಧುರಕವಿ ಆಳ್ವಾರ್
ಯತಿರಾಶರಾಮ್ ಇವರ್‌ಗಳ್, ವಾಳ್ವಾಗ ವಂದುದಿತ್ತ
ಮಾದಂಗಳ್ ನಾಳ್‌ಗಳ್ ತಮ್ಮಿನ್ ವಾಶಿಯೈಯುಂ
ಇನ್ನುಲಗೋರ್ಕ್ಕು ಉರೈಪ್ಪೋಂ ಯಾಂ || ೨೧ ||

ಆಳ್ವಾರ್ ತಿರುಮಗಳಾರ್ ಆಂಡಾಳ್— ಇದುವರೆವಿಗೂ ಹೇಳಿದ ಆಳ್ವಾರುಗಳ ಮಗಳಾದ ಆಂಡಾಳೂ, ಮಧುರ ಕವಿಯಾಳ್ವಾರ್— ಮಧುರಕವಿ ಆಳ್ವಾರ್ ವಿನ್ನು, ಯತಿರಾಶರಾಂ ಇವರ್‌ಗಳ್— ಯತಿರಾಜರೂ ಈ ಮೂವರುಗಳೂ, ವಾಳ್ವಾಗ— ಲೋಕವಲ್ಲಿ ಉಜ್ಜೀವಿಸುವುದಕ್ಕಾಗಿ, ವಂದುದಿತ್ತ—

ಈ ಲೋಕದಲ್ಲಿ ಬಂದು ಪ್ರಕಾಶಿಸಿದ, ವೇದಂಗಳ್ ನಾಲ್ಗಳ್ ತಮ್ಮಿನ್ ವಾಶಿಯೆಲ್ಲಾಮುಂ= ಮಾಸವೇನು, ನಕ್ಷತ್ರವೇನು ಇವುಗಳ ವೈಲಕ್ಷಣ್ಯಗಳನ್ನು, ಇಂಬುಲಗತೋರ್ಕ್ಕು= ಈ ಲೋಕದಲ್ಲಿರುವ ಜನಗಳಿಗೆ, ಯಾಂ ಉರೈಪ್ಪೋಂ= ಈಗ ನಾವು ತಿಳಿಸುತ್ತೇವೆ.

ಪೊಯ್‌ಗೈಯಾರ್ ಮೊದಲಾದ ಆಳ್ವಾರುಗಳು ಭಗವಂತನ ಕಲ್ಯಾಣ ಗುಣಗಳೆಂಬ ಸಮುದ್ರದಲ್ಲಿ ಮುಳುಗಿದ್ದರಿಂದ ಆಳ್ವಾರುಗಳೆಂದು ಹೆಸರನ್ನು ಪಡೆದಿರುವಂತೆ ಮಧುರಕವಿಗಳು ನಮ್ಮಾಳ್ವಾರ್ ಅವರ ಗುಣಗಳೆಂಬ ಸಮುದ್ರದಲ್ಲಿ ಮುಳುಗಿದ್ದವರಿಂದ ಇವರನ್ನು ಆಳ್ವಾರ್ ಎಂದೇ ಹೇಳತಕ್ಕದ್ದು. ಆಂಡಾಳ್ ಅವರೂ ಮಧುರ ಕವಿಗಳೂ ದಿವ್ಯ ಪ್ರಬಂಧವನ್ನು ರಚಿಸಿದ ಕಾರಣದಿಂದ ಇವರುಗಳಿಗೂ ತಿರುನಾಳ್ ಪಾಶುರವನ್ನು ರಚಿಸಬೇಕಾಯಿತು. ಶ್ರೀರಾಮಾನುಜಾಚಾರ್ಯರು ದ್ರಾವಿಡ ವೇದಸಾರವನ್ನು (ತಾಯಿಯು ಮಕ್ಕಳಿಗೆ ಹಾಲುಕೊಟ್ಟು ಬೆಳೆಸುವಂತೆ) ಪೋಷಣೆ ಮಾಡಿದ್ದರಿಂದ, ಪೋಷಣೆ ಮಾಡಿದ ತಾಯಿಯಾದ್ದರಿಂದಲೂ, ರಾಮಾನುಜಾಚಾರ್ಯರ ವಿಷಯವಾದ "ರಾಮಾನುಶನೂತ್ತಂದಾದಿ" ಎಂಬ ಪ್ರಬಂಧವು ಅವತರಿಸಿದ್ದರಿಂದಲೂ ರಾಮಾನುಜಾಚಾರ್ಯರಿಗೂ, ನಾಳ್ ಪಾಟ್ಟನ್ನು ರಚಿಸಬೇಕಾಯಿತು. "ತಿರುವರಂಗತ್ತಮುದನಾರ್" ಎಂಬುವರು ರಚಿಸಿದ ರಾಮಾನುಶನೂತ್ತಂದಾದಿಯನ್ನು ಶ್ರೀರಾಮಾನುಜರು ತಮ್ಮ ವಿಭವಾವತಾರ ಕಾಲದಲ್ಲೇ ಪ್ರತ್ಯಕ್ಷದಲ್ಲಿ ಕೇಳಿ ಸಂತೋಷಿಸಿದ ಕಾರಣ ನಾಳ್ ಪಾಟ್ಟನ್ನು ತಿರುವರಂಗತ್ತಮುದನಾರ್ ರಚಿಸದೆ ಮಣವಾಳ ಮಾಮುನಿಗಳಿಗೆ ಬಿಟ್ಟುಕೊಟ್ಟರು.

*ಇನ್ನನ್ರೋ ತಿರುವಾಡಿಪ್ಪೂರಂ ಎಮಕ್ಕಾಕವನ್ರೋ—ಇಂಗು
ಆಂಡಾಳ್ ಅವತರಿತ್ತಾಳ್, ಕುನ್ರಾದ ವಾಳ್ವಾನ
ವೈಗುಂದವಾನ್—ಭೋಗಂತನ್ನೈ ಇಗಳ್‌ನ್ದು
ಆಳ್ವಾರ್ ತಿರುಮಗಳಾರಾಯ್ ||೨೩||

ಇನ್ನನ್ರೋ ತಿರುವಾಡಿಪ್ಪೂರಂ= ತಿರುವಾಡಿಪ್ಪೂರವೆಂಬ ತಿರುನಾಳ್ ಈ ದಿವಸವಲ್ಲವೇ? ಆಂಡಾಳ್, ಶೂಡಿಕ್ಕೊಡುತ್ತನಾಚ್ಚಿಯಾರ್, ಕುನ್ರಾದವಾಳ್ವಾನ= ನಿತ್ಯವೂ ಐಶ್ವರ್ಯದಿಂದನೆ ಕೂಡಿದ, ವೈಗುಂದವಾನ್‌ಭೋಗಂ= ಶ್ರೀವೈಕುಂಠದಲ್ಲಿರುವ ಅಪ್ರಾಕೃತವಾದ ಸುಖವನ್ನು ಬಿಟ್ಟು, ಇಂಗೇ= ಅಜ್ಞಾನವನ್ನೇ ಕೊಡುವ ಈ ಲೋಕದಲ್ಲಿ, ಆಳ್ವಾರ್ ತಿರುಮಗಳಾರಾಯ್= ಪೆರಿಯಾಳ್ವಾರ್‌ರವರ ಪುತ್ರಿಯಾಗಿ, ಎಮಕ್ಕಾಕವನ್ರೋ ಅವತರಿತ್ತಾಳ್= ನಮ್ಮಂತಹವರ ಉಜ್ಜೀವನಕ್ಕೋಸ್ಕರವಲ್ಲವೇ ಅವತರಿಸಿದಳು?

ಭಗವಂತನು ಈ ಲೋಕದಲ್ಲಿ ಕೃಷ್ಣನಾಗಿ ಅವತರಿಸಿ ಗೀತೆ ಎಂಬ ಉಪನಿಷತ್ತನ್ನು ತನ್ನ ಬಾಯಿಂದಲೇ ಉಪದೇಶಮಾಡಿ ಉಪಕಾರ ಮಾಡಿದನು. ಆ ಗೀತೆಯು ಸಂಸ್ಕೃತದಲ್ಲಿದ್ದು, ಸಾಧಾರಣ ಮನುಷ್ಯರಿಗೆ ಅರ್ಥವು ತಿಳಿಯಲು ಸಾಧ್ಯವಾದ್ದರಿಂದ ಪ್ರಯೋಜನವಾಗಲಿಲ್ಲ. ಇಂತಹ ಕೊರತೆಯನ್ನು ಹೋಗಲಾಡಿಸುವುದಕ್ಕಾಗಿ, ಭೂದೇವಿಯು ಇಲ್ಲಿ ಬಂದು ಅವತರಿಸಿ "ವೇದಮನೈತ್ತುಕ್ಕುಂ ವಿತ್ತಾಹುಂ ಕೋದೈತಮಿಳ್" ಎಂಬುದಾಗಿ ಕೀರ್ತಿಯುಂಟಾಗುವಂತೆ ಈ ದಿವ್ಯ ಪ್ರಬಂಧವನ್ನು ಸುಲಭಶೈಲಿಯಿಂದ ತಮಿಳ್ ಭಾಷೆಯಲ್ಲಿ ಉಪದೇಶಿಸಿ ನಮ್ಮಂತಹವರು ಉಜ್ಜೀವಿಸುವಂತೆ ಮಾಡಿದಳು, ಎಂದು ತಿಳಿಯತಕ್ಕದ್ದು.

ಆಂಡಾಳಿಗೂ ಅವಳು ಅವತರಿಸಿದ ಒಳ್ಳೆಯ ದಿವಸಕ್ಕೂ ಸಮಾನವಾದ ದಿವಸವಿಲ್ಲ.

ಪೆರಿಯಾಳ್ವಾರ್ ಪೆಣ್ ಪಿಳ್ಳೈಯಾಯ್, ಆಂಡಾಳ್ ಪಿರನ್ದ
ತಿರುವಾಡಿಪ್ಪೂರತ್ತಿನ್ ಶೀರ್ಮೈ, ಒರುನಾಳೈಕ್ಕು
ಉಂಡೋ ಮನಮೇ ಉಣರ್ನ್ದುಪಾರ್, ಆಂಡಾಳುಕ್ಕು
ಉಂಡಾಹಿಲ್ ಒಪ್ಪು ಇದರ್ಕ್ಕುಂ ಉಂಡು || ೨೩ ||

ಆಂಡಾಳ್—ಸೂಡಿಕೊಡುತ್ತನಾಚ್ಚಿಯಾರ್, ಪೆರಿಯಾಳ್ವಾರ್ ಪೆಣ್ ಪಿಳ್ಳೈಯಾದ್—ಪೆರಿಯಾಳ್ವಾರಿಗೆ ಮಗಳಾಗಿ, ಪಿರನ್ದ—ಅವತರಿಸಿದ, ತಿರುವಾಡಿಪ್ಪೂರತ್ತಿನ್ ಶೀರ್ಮೈ—ಕರ್ಕಾಟಕಮಾಸದ ಪುಬ್ಬಾ ನಕ್ಷತ್ರದ ಮಹಿಮೆಯು ಒರುನಾಳೈಕ್ಕು ಉಂಡೋ—ಮತ್ತೊಂದು ದಿವಸಕ್ಕೆ ಉಂಟೋ, ಮನಮೇ ಮನಸ್ಸೇ, ಉಣರ್ನ್ದುಪಾರ್—ಚೆನ್ನಾಗಿ ಯೋಚಿಸಿ ನೋಡು, ಆಂಡಾಳುಕ್ಕು ಉಂಡಾಯಿಲ್ ಇದರ್ಕ್ಕು ಒಪ್ಪು ಉಂಡು, ಆಂಡಾಳಿಗೆ ಸಮಾನವಾದ ವ್ಯಕ್ತಿಯಿದ್ದದ್ದೇ ಆದರೆ, ಈ ದಿವಸಕ್ಕೂ ಸಮಾನವಾದ ದಿವಸವು ಇದ್ದೀತು.

ಆಂಡಾಳ್ ಅವರ ಮಹಿಮೆಯನ್ನು ವರ್ಣಿಸುವ ಪಾಶುರ—

ಅಂಜು ಕುಡಿಕ್ಕೊರು ಸಂತತಿಯಾಯ್, ಆಳ್ವಾರ್‌ಗಳ್
ತಂ ಶೆಯಲೈ ವಿಂಜಿನಿರ್ಕುಂ ತನ್ಮೈಯಳಾಯ್, ಪಿಂಜಾಯ್
ಪಳುತ್ತಾಳೈ ಯಾಂಡಾಳೈ ಪ್ಪತ್ತಿಯುಡನ್ ನಾಳುಂ,
ವಳುತ್ತಾಯ್ ಮನಮೇ ಮಹಿಳ್ನ್ದು || ೨೪ ||

ಅಂಜಿ ಕುಡಿಕ್ಕು — (ಐದು ಸಂತತಿಗೆ), ಭಗವಂತನಿಗೆ ಯಾವ ಅಪಾಯವು ಸಂಭವಿಸುವುದೋ ಎಂಬ ಭಯವುಳ್ಳ ಹತ್ತು ಆಳ್ವಾರುಗಳ ವಂಶಕ್ಕೆ, ಒರುಶಂತತಿಯಾಯ್ — ಒಂದು ಮಗಳಾಗಿ ಅವತರಿಸಿ, ಆಳ್ವಾರ್‌ಗಳ್ ತಮ್ ಶೆಯಲೈ — ಆಳ್ವಾರುಗಳ ಸ್ವಭಾವವನ್ನು, ವಿಂಜಿನಿರ್ಕುಂ ತನ್ಮೈಯಳಾಯ್ — ಮೀರಿ ಇರುವಂತಹ ಸ್ವಭಾವ ಉಳ್ಳವಳಾಗಿಯೂ, ಪಿಂಜಾಯ್ ಪಳುತ್ತಾಳೈ — ಬಾಲ್ಯದಲ್ಲೇ ಭಗವಂತನಲ್ಲಿ ಅತಿ ತುಂಬಿರುವ ಆಂಡಾಳೈ — ಶೂಡಿಕೊಡುತ್ತ ನಾಚ್ಚಿಯಾರನ್ನು, ಮನಮೇ — ಮನಸ್ಸೇ, ಮಹಿೞ್‌ನ್ದು — ಸಂತೋಷದಿಂದ, ಪತ್ತಿಯುಡನ್ — ಭಕ್ತಿಯೊಡನೆ, ನಾಳುಮ್ ವಳುತ್ತಾಯ್ — ಯಾವಾಗಲೂ ಸ್ತೋತ್ರಮಾಡು.

ಈ ಪಾಶುರದಲ್ಲಿ ಮೊದಲನೆ ಪಾದದಲ್ಲಿ ಶ್ಲೇಷಾರ್ಥವು ಹೇಳಲ್ಪಟ್ಟಿದೆ. ಐದು ಸಂತತಿಗೆ ಎಂದೂ, ಭಯಪಡುವಂಥಾ ವಂಶಕ್ಕೆ ಎನ್ನುವ ಅರ್ಥವೂ ಹೇಳಲ್ಪಟ್ಟಿದೆ.

ಐದು ಸಂತತಿ ಯಾವುವೆಂದರೆ ಗೋದಾದೇವಿಗೆ ಮೊದಲೇ ಅವತರಿಸಿದ ಏಳು ಆಳ್ವಾರರುಗಳ ಕುಟುಂಬವು ಐದಾಗುತ್ತದೆ. ಹೇಗೆಂದರೆ — ಅಯೋನಿಜರಾದ ಮೊದಲಾಳ್ವಾರುಗಳು ಮೂವರೂ ಸೇರಿ, ಅದು ಸಂತತಿ ಒಂದು, ಎರಡನೇ ಸಂತತಿ ತಿರುಮಳಿಶೈಯಾಳ್ವಾರ್. ಮೂರನೇ ಸಂತತಿ ನಮ್ಮಾಳ್ವಾರ್, ನಾಲ್ಕನೇ ಸಂತತಿ ಕುಲಶೇಖರಾಳ್ವಾರ್. ಐದನೇ ಸಂತತಿ ಪೆರಿಯಾಳ್ವಾರ್. ಹೀಗೆಂದು ಐದು ಸಂತತಿಗಳಿಗೂ ಈ ಆಂಡಾಳ್ ಒಬ್ಬಳೇ ಮಗಳಾಗಿದ್ದಾಳೆ. ಆಂಡಾಳ್ ಅವತರಿಸಿದ ನಂತರ ಅವತರಿಸಿದ ತೊಂಡರಡಿಪ್ಪೊಡಿಯಾಳ್ವಾರ್ — ತಿರುಪ್ಪಾಣಾಳ್ವಾರ್, ತಿರುಮಂಗೈಯಾಳ್ವಾರ್ — ಈ ಮೂರು ಆಳ್ವಾರುಗಳಿಗೂ, ಇವಳು ಮಗಳಾಗಿ ಪ್ರಕಾಶಿಸುತ್ತಿದ್ದಾಳೆ. ಹೇಗೆಂದರೆ :—

“ಅಂಜುಕುಡಿ” ಎಂದರೆ, ಭಯಪಡುವಂಥಾ ಸಂತತಿ ಎಂದೂ ಅರ್ಥವಾಗುತ್ತದೆಯಾದ್ದರಿಂದ — ಹತ್ತು ಆಳ್ವಾರುಗಳೂ ಭಗವಂತನಿಗೆ ಯಾವ ಅಪಾಯ ಸಂಭವಿಸುತ್ತದೋ ಎಂದು ಭಯಪಡುವಂಥಾ ಸಂತತಿಯಾಯಿತು. ಹತ್ತು ಆಳ್ವಾರುಗಳಿಗೂ ಇವಳು ಮಗಳೆಂಬುವುದು ನಿಶ್ಚಿತವಾಯಿತು. “ಪ್ರಜಯಾ ಪಿತೃಭ್ಯಃ” ಎಂಬ ಹಾಗೆ ವೇದದಲ್ಲಿ ಹೇಳಿರುವಂತೆ ಮಕ್ಕಳು ಜನಿಸಿದನಂತರ ತಂದೆಗೆ ಸಾಲ ತೀರುತ್ತದೆಂಬ ವಚನಕ್ಕೆ ಅನುಸಾರವಾದದ್ದು. ಆಂಡಾಳ್ ಅವತರಿಸಿದ ಮೇಲೆ ಹತ್ತು ಆಳ್ವಾರುಗಳಿಗೂ ಸಾಲ ತೀರಿತೆಂದೂ, ತಿಳಿಯಬಹುದು. ಆಳ್ವಾರುಗಳು ಪುರುಷರಾಗಿ ಅವತರಿಸಿ ಭಗವಂತನೊಡನೆ ಸಂಶ್ಲೇಷವನ್ನು ಅಪೇಕ್ಷಿಸುವ ಕಾಲದಲ್ಲಿ ತಾವು ಹೆಂಗಸಿನ ರೂಪವನ್ನು ಹೊಂದಿ ಭಗವಂತನನ್ನು ಅನುಭವಿಸಿದರು.

ಈ ಆಂಡಾಳೋ ಅಂದರೆ—ಸ್ವಭಾವವಾಗಿಯೇ ಹೆಣ್ಣಾಗಿ ಅವತರಿಸಿ ಭಗವಂತನನ್ನು ಅನುಭವಿಸಿದವಳಾದ್ದರಿಂದ, ಆಳ್ವಾರ್ಗಳ ಸ್ವಭಾವಕ್ಕಿಂತಲೂ, ಮೇಲಾದವಳೆಂಬುದು ಸ್ಪಷ್ಟವಾಗಿ ಕಾಣುತ್ತದೆ.

ಗೋದಾದೇವಿಯು ಬಾಲ್ಯದಲ್ಲಿಯೇ "ವಾಸಿದ್ಯಾಳ್.ಂ ಅಪ್ಪಾಸವರ್ಗ" ಎಂಬುವ ಪಾಶುರಾದಿಗಳಿಂದ, ಬಾಲ್ಯಾವಸ್ಥೆಯಲ್ಲಿಯೇ—ಯೌವ್ವನಾವಸ್ಥೆಯಲ್ಲಿ ಹೇಳುವಂಥಾ ಪಾಶುರಗಳಿಂದ ಭಗವಂತನನ್ನು ಅನುಭವಿಸಿದವಳಾದ್ದರಿಂದ, "ಪಿಂಜಾಯ್ ಪಳುತ್ತಾಳ್" ಎಂದರೆ ಹೀಚಾಗಿರುವ ಕಾಲದಲ್ಲಿರುವ ರುಚಿಯೇ ಬೇರೆ, ಪಕ್ವವಾದ ಹಣ್ಣಿನ ರುಚಿಯೇ ಬೇರೆ, ಈ ಸ್ಥಿತಿಯು ಎಲ್ಲರಿಗೂ ತಿಳಿದ ವಿಷಯವಷ್ಟೆ. ಆಂಡಾಳ್ ವಿಷಯದಲ್ಲೋ ಎಂದರೆ, ಇದು ಹೀಚಾಗಿರುವ ಕಾಲದಲ್ಲೇ ಹಣ್ಣಿನ ರುಚಿಯು ಇರುತ್ತದೆಯಾದ್ದರಿಂದ ವಿಲಕ್ಷಣವಾದ ಕ್ರಮವಾಗಿದೆ.

ಮಧುರಕವಿಯಾಳ್ವಾರ್ :—

ಏರಾರ್ ಮಧುರಕವಿ ಇವ್ವುಲಗಿಲ್ ವನ್ದುದಿತ್ತ, ಶೀರಾರುಂ
ಚಿತ್ತಿರೈಯಿಲ್ ಚಿತ್ತಿರೈನಾಳ್. ಪಾರುಲಗಿಲ್ ಮಱ್ಱುಳ್ಳ
ಆಳ್ವಾರ್ಗಳ್ ವನ್ದುದಿತ್ತನಾಳ್ಗಳಿಲುಮ್
ಉಱ್ಱದೆಮಕ್ಕೆನ್ಱು ನೆಂಜೇ ಓರ್ || ೨೫ ||

ಏರಾರ್ ಮಧುರಕವಿ—ವಿಶೇಷವಾದ ಮಹಿಮೆಯೊಡನೆ ಕೂಡಿದ ಮಧುರಕವಿಗಳು, ಇವ್ವುಲಗಿಲ್—ಈ ಲೋಕದಲ್ಲಿ, ವನ್ದುದಿತ್ತ—ಬಂದು ಅವತರಿಸಿದ, ಶೀರಾರುಂ—ಮಹಿಮೆಯೊಡನೆ ಕೂಡಿದ, ಚಿತ್ತಿರೈಯಿಲ್—ಮೇಷಮಾಸದಲ್ಲಿ, ಚಿತ್ತಿರೈನಾಳ್—ಚಿತ್ತಾ ನಕ್ಷತ್ರದ ದಿವಸವು ಎಂಥಾ ಮಹಿಮೆಯುಳ್ಳದ್ದೆಂದರೆ, ಪಾರುಲಗಿಲ್ ಭೂಲೋಕದಲ್ಲಿ, ಮಱ್ಱುಳ್ಳ ಆಳ್ವಾರ್ಗಳ್—ಪೊಯ್ಗೈಯಾರ್ ಮೊದಲಾದ ಇತರ ಆಳ್ವಾರುಗಳು, ವನ್ದುದಿತ್ತ ನಾಳ್ಗಳಿಲುಮ್—ಬಂದು ಅವತರಿಸಿದ ದಿವಸಕ್ಕಿಂತಲೂ, ಎಮಕ್ಕು ಉಱ್ಱದೆನ್ಱು—ನಮ್ಮಗಳಿಗೆ ವಿಶೇಷವಾದ ದಿವಸವೆಂದು, ನೆಂಜೇ ಓರ್—ಮನಸ್ಸೇ, ನೀನು ಭಾವಿಸು.

ಶ್ರೀವಚನ ಭೂಷಣದಲ್ಲಿ ನಾಲ್ಕನೇ ಪ್ರಕರಣದಲ್ಲಿ, "ಉಂಡ ಪೋದೊರು ವಾರ್ತೈಯುಮ್—ಉಣ್ಣಾದ ಪೋದೊರು ವಾರ್ತ್ತೈಯುಮ್ ಶೊಲ್ಲುವಾರ್ ಪತ್ತುಪ್ಪೇರುಂಡಿರೇ, ಅವರ್ಗಳ ಪಾಶುರಂ ಕೊಂಡನ್ರು ಇವ್ವರ್ಥಮ್ ಅಱುದಿ ಇಡಕ್ಕಡವತು. ಅವರ್ಗಳ್ಳೈ ತಿರುಕ್ಕಿರುಪ್ಪಾರ್ ಒರುವರುಂಡಿರೇ. ಅವರ್ ಪಾಶುರಮ್ ಕೊಂಡು ಇವ್ವರ್ಥಮ್ ಅಱುದಿ ಇಡಕ್ಕಡವೋಮ್" ಎಂಬುದಾಗಿ

ಮಧುರ ಕವಿಗಳಿಗೆ ಮಹಿಮೆಯನ್ನು ಹೇಳಿರುವುದರಿಂದ, ಆಚಾರ್ಯರೇ ಉಪಾಯ ವೆಂಬ ಅರ್ಥವು ಇವರು ರಚಿಸಿದ ದಿವ್ಯ ಪ್ರಬಂಧವಾದ "ಕಣ್ಣಿನುಣ್ ಶಿರುತ್ತಾಂಬು" ವಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಈ ಆಳ್ವಾರಿಗೆ ಈ ಮಹಿಮೆಯು ನ್ಯಾಯ ವಾದದ್ದೇ ಎಂದರ್ಥ.

ಮಧುರ ಕವಿಗಳ ಪ್ರಬಂಧವು ನಾಲ್ಕು ಸಾವಿರ ಪ್ರಬಂಧಕ್ಕೆ ಸೇರಿದ್ದೆಂಬ ವಿಷಯ:—

ವಾಯ್ತ್ತ ತಿರುಮನ್ದಿರತ್ತಿನ್ ಮತ್ತಿಮಮಾಂ ಪದಂಪೋಲ್,
ಶೀರ್ತ್ತ ಮಧುರಕವಿ ಶೆಯ್‌ಕಲೈಯೈ, ಆರ್ತ್ತಪುಗಳ್.
ಆರಿಯರ್‌ಗಳ್ ತಾಙ್ಗಳ್ ಅರುಳಿಚ್ಚೆಯಲ್ ನಡುವೇ,
ಶೇರ್ವಿತ್ತಾರ್ ತಾತ್ಪರಿಯಂ ತೇರ್‌ನ್ದು || ೨೬ ||

ವಾಯ್ತ್ತ—ನಮಗೆ ಸ್ವರೂಪಾನುರೂಪವಾದ, ತಿರುಮಂತಿರತ್ತಿನ್—ಅಷ್ಟಾಕ್ಷರ ಮಹಾ ಮಂತ್ರದಲ್ಲಿ, ಮತ್ತಿಮಮಾಂಪದಂಪೋಲ್—ಮಧ್ಯದಲ್ಲಿರುವ "ನಮಃ" ಪದದಂತೆ ಇರುವ, ಮಧುರಕವಿ ಶೆಯ್—ಮಧುರ ಕವಿಗಳು ರಚಿಸಿದ, ಶೀರ್ತ್ತಕಲೈಯೈ—ಶ್ಲಾಘ್ಯವಾದ ಪ್ರಬಂಧವನ್ನು, ಆರ್ತ್ತಪುಗಳ್—ಪೂರ್ಣವಾದ ಯಶಸ್ಸುಳ್ಳ, ಆರಿಯರ್‌ಗಳ್ ತಾಂಗಳ್—ಪೂರ್ವಾಚಾರ್ಯರುಗಳು, ಅರುಳಿಚ್ಚೆಯಲ್ ನಡುವೆ—ನಾಲ್ಕು ಸಾವಿರ ದಿವ್ಯ ಪ್ರಬಂಧಗಳೊಡನೆ, ಶೇರ್ವಿತ್ತಾರ್—ಸೇರಿಸಿದರು. (ಕಾರಣ ವೇನೆಂದರೆ) ತಾತ್ಪರ್ಯಮ್ ತೇರ್‌ನ್ದು—"ಆ ಕಣ್ಣಿನುಣ್ ಶಿರುತ್ತಾಂಬು" ಪ್ರಬಂಧದ ಅಭಿಪ್ರಾಯವನ್ನು ಪರಿಶೀಲಿಸಿ.

ಆಳ್ವಾರುಗಳು ರಚಿಸಿರುವ ದಿವ್ಯ ಪ್ರಬಂಧಗಳೆಲ್ಲವೂ ಭಗವಂತನ ಸ್ವರೂಪ ರೂಪ ಗುಣವಿಭೂತಿಗಳನ್ನೂ ಅತಿಮಾನುಷವಾದ ಲೀಲೆಗಳನ್ನೂ ವಿಸ್ತಾರವಾಗಿ ಹೇಳುತ್ತವೆ. ಅಂತಹ ದಿವ್ಯ ಪ್ರಬಂಧಗಳ ಮಧ್ಯದಲ್ಲಿ, ಆಳ್ವಾರ್‌ರವರ ಸ್ತೋತ್ರ ವಾದ—ಮಧುರ ಕವಿಗಳಿಂದ ರಚಿಸಲ್ಪಟ್ಟ ಈ ಪ್ರಬಂಧವನ್ನು ಸೇರಿಸುವುದು ನ್ಯಾಯವಲ್ಲವೆಂದು ಕೆಲವರು ಸಂದೇಹಪಡುವುದಕ್ಕೆ ಕಾರಣವಾಗಿದೆ. ಅಂಥವರು ಗಳ ಕಪಟದ ಜ್ಞಾನವು ತಿಳಿಯಾಗುವಂತೆ ಅವರಿಗೆ ತಿಳಿವನ್ನು ಉಂಟುಮಾಡುವಂಥಾದ್ದಾಗಿದೆ—ಈ ಪಾಶುರ. ಆಳ್ವಾರುಗಳ ದಿವ್ಯ ಪ್ರಬಂಧಗಳೆಲ್ಲವೂ ವಿಶೇಷವಾಗಿ ತಿರುಮಂತ್ರಾರ್ಥವನ್ನೂ ದ್ವಯಾರ್ಥವನ್ನೂ ವಿವರಿಸುವಂತಹವಾಗಿವೆ. ಇದರಲ್ಲಿ ತಿರುಮಂತ್ರದ ಮಧ್ಯದಲ್ಲಿರುವ "ನಮಃ" ಪದದ ಮುಖ್ಯವಾದ ಅರ್ಥವಾದ ಭಾಗವತರಿಗೆ ದಾಸನಾಗಿರುವುದನ್ನು ಅನುಸಂಧಾನ ಮಾಡಿಕೊಂಡೇ ಇರಬೇಕಾದ ಈ ವಿಷಯವು "ಮುಮುಕ್ಷುಪ್ಪಡಿ" ಎನ್ನುವಂತಹ ಗ್ರಂಥದಲ್ಲಿಯೂ ಅದರ

ವ್ಯಾಖ್ಯಾನದಲ್ಲಿಯೂ ವಿಸ್ತಾರವಾಗಿದೆ. ಆ ಪ್ರಕಾರವಾದ ಭಾಗವತರ ದಾಸ್ಯವನ್ನೇ ಶ್ಲಾಘ್ಯವೆಂದು ಹೇಳುವಂತಹ "ಕಣ್ಣಿನುಣ್ ಶಿರುತ್ತಾಂಬು" ಎಂಬುವ ಪ್ರಬಂಧವು ಆಳ್ವಾರುಗಳು ರಚಿಸಿದ ಪ್ರಬಂಧಗಳ ಮಧ್ಯದಲ್ಲೇ ಸೇರಿ ಪ್ರಕಾಶಿಸುವುದು ಮುಖ್ಯವೆಂದು ನಮ್ಮ ಪೂರ್ವಾಚಾರ್ಯರುಗಳು ಅಂಗೀಕರಿಸಿದ್ದಾರೆ.

ಶ್ರೀ ಉಡೈಯವರ್ ಎಂಬ "ಶ್ರೀ ರಾಮಾನುಜಾಚಾರ್ಯರ್" ಅವತಾರ —

ಇನ್ರುಲಹೀರ್ ಶಿತ್ತಿರೈಯಿಲ್ ಏಯ್‍ನ್ದ ತಿರುವಾದಿರೈನಾಳ್,
ಎನ್ರೈಯಿನುಂ ಇನ್ರಿದನುಕ್ಕೇತ್ತಮೆನ್ ತಾನ್,
ಎನ್ನವರ್ಕ್ಕು ಶಾತ್ತುಹಿನ್ರೇನ್ ಕೇಣ್ಮಿನ್ ಯತಿರಾಶರ್ ತಂ
ಪಿರಪ್ಪಾಲ್, ನಾಲ್ ತಿಶೈಯುಂ ಕೊಂಡಾಡುಂನಾಳ್ ॥ ೩೮ ॥

ಉಲಹೀರ್ = ಲೋಕದಲ್ಲಿರುವ ಜನಗಳೇ, ಇನ್ರು = ಈ ದಿವಸ, ಶಿತ್ತಿರೈಯಿಲ್ ಏಯ್‍ನ್ದ = ಚೈತ್ರಮಾಸದಲ್ಲಿ ಕೀರ್ತಿಪಡೆದ, ತಿರುವಾದಿರೈನಾಳ್ = ಆರ್ದ್ರಾ ನಕ್ಷತ್ರವು ಎನ್ರೈಯಿನುಂ — ಮಿಕ್ಕ ದಿನಗಳಿಗಿಂತಲೂ, ಇನ್ರು ಇದನುಕ್ಕು = ಇಂದು ಈ ದಿವಸಕ್ಕೆ, ಏತ್ತಮೆನ್ ತಾನ್ — ಎನ್ನವರ್ಕ್ಕು — ವಿಶೇಷವೇನು ಎಂಬುದಾಗಿ ಕೇಳಿದವರಿಗೆ, ಶಾತ್ತುಹಿನ್ರೇನ್, ಕೇಣ್ಮಿನ್ = ಹೇಳುತ್ತೇನೆ, ಕೇಳಿರಿ :—

ಯತಿರಾಶರ್ ತಂ ಪಿರಪ್ಪಾಲ್ = ಯತಿರಾಜರಾದ ಶ್ರೀ ರಾಮಾನುಜರ ಅವತಾರ ದಿವಸವಾದ್ದರಿಂದ, ನಾಲ್ ತಿಶೈಯುಂ ಕೊಂಡಾಡುಂನಾಳ್ = ನಾಲ್ಕು ದಿಕ್ಕುಗಳಲ್ಲಿರುವ ಜನಗಳೆಲ್ಲರೂ ಕೊಂಡಾಡುವ (ಹೊಗಳುವ) ದಿವಸವಾಗಿದೆ.

* ಆಳ್ವಾರ್‍ಗಳ್ ತಾಂಗಳ್ ಅವತರಿತ್ತ ನಾಳ್‍ಕಳಿಲುಂ
ವಾಳ್ವಾನ ನಾಳ್ ನಮಕ್ಕು ಮಣ್ಣುಲಗೀರ್, ಏಳ್
ಪಾರುಂ ಉಯ್ಯ ಎತಿರಾಶರುದಿತ್ತರುಳುಂ,
ಶಿತ್ತಿರೈಯಿಲ್ ಶೆಯ್ಯ ತಿರುವಾದಿರೈ ॥ ೩೯ ॥

ಮಣ್ಣುಲಗೀರ್ = ಭೂಲೋಕದಲ್ಲಿರುವ ಜನಗಳೇ, ಆಳ್ವಾರ್‍ಗಳ್ ತಾಂಗಳ್ = ಪೊಯ್‍ಗೈಯಾಳ್ವಾರ್ ಮೊದಲಾದ ಆಳ್ವಾರುಗಳು, ಅವತರಿತ್ತನಾಳ್‍ಕಳಿಲುಂ = ಅವತರಿಸಿದ ದಿವಸಗಳಿಗಿಂತಲೂ, ನಮಕ್ಕೇ ವಾಳ್ವು, ಆನನಾಳ್ — ನಾವುಗಳು ಉದ್ಧಾರವಾಗುವಂತಹ ದಿವಸವು ಯಾವುದೆಂದರೆ, ಏಳ್‍ಪಾರುಂ ಉಯ್ಯ — ಲೋಕದಲ್ಲಿರುವವರೆಲ್ಲಾ ಉಜ್ಜೀವಿಸುವಂತೆ, ಯತಿರಾಜರುದಿತ್ತರುಳುಂ — ರಾಮಾನುಜರು

ಅವತರಿಸಿದ, ಚಿತ್ತಿರೈಯಿಲ್ ಶೆಯ್ಯ ತಿರುವಾದಿರೈ—ಚೈತ್ರ ಮಾಸದ ಆರ್ದ್ರಾ ನಕ್ಷತ್ರವೇ ಶ್ರೇಷ್ಠವಾದದ್ದು.

ಆಳ್ವಾರುಗಳು ದಿವ್ಯಪ್ರಬಂಧಗಳನ್ನು ರಚಿಸಿದರು. ಆ ಪ್ರಬಂಧಗಳನ್ನು ನಾನಾ ಪ್ರಕಾರವಾಗಿ ಘೋಷಿಸಿ ಬೆಳೆಸಿದವರು ಶ್ರೀ ರಾಮಾನುಜರು. ಆದಕಾರಣ ಈ ವಿಷಯವನ್ನು ಹಿಂದಿನ ಕಾಲದಲ್ಲೇ—"ತಮಿಳ್.ಮರೈಗಳಾಯಿರಮುಂ ಮೊಯ್ಂಬಾಲ್ ವಳರ್ತ್ತ ಇದತ್ತಾಯ್ ಇರಾಮಾನುಶರ್", "ಎಂಗಳ್ ಗತಿಯೇ, ಇರಾಮಾನುಶಮುನಿಯೇ, ಶಂಗೈ ಕೆಡುತ್ತಾಂಡ ತವರಾಸಾ, ಪೊಂಗುಪುಹಳ್ ಮಂಗೈಯರ್‌ಕೋನ್ ಈಂದಮರೈ ಆಯಿರಮನೈತ್ತುಂ, ತಂಗು ಮನಂ ನೀ ಎನಕ್ಕುತ್ತಾ" ಎನ್ನುವ ತನಿಯನ್‌ಗಳಿಂದ ಪೂರ್ವಾಚಾರ್ಯರುಗಳು ಪ್ರಕಾಶಪಡಿಸಿದ್ದರಿಂದಲೂ, ಹೆತ್ತತಾಯಿಗಿಂತ, ಮಕ್ಕಳನ್ನು ಪೋಷಿಸುವ ತಾಯಿಗೇ ಗೌರವವು ಅಧಿಕವಾದ್ದರಿಂದ ಈ ಪಾಶುರವು ಬಹಳ ಶ್ಲಾಘ್ಯವಾಗಿ ರಚಿಸಲ್ಪಟ್ಟಿದೆ.

ಎಂದೈ ಎತಿರಾಶರ್ ಇವ್ವುಲಗಿಲ್ ಎಂದಮಕ್ಕಾ
ವಂದುದಿತ್ತನಾಳೆನ್ನುಂ ವಾಶಿಯಿನಾಲ್,
ಇಂದತ್ತಿರುವಾದಿರೈದನ್ನಿನ್ ಏರ್ತ್ರದನ್ನೈ ನೆಂಜೇ,
ಒರುವಾಮಲ್ ಎಪ್ಪೊಳುದುಂ ಓರ್ ॥ ೩೮ ॥

ನೆಂಜೇ—ಮನಸ್ಸೇ, ಎಂದೈ ಎತಿರಾಶರ್—ನಮ್ಮ ಆಚಾರ್ಯರಾದ ರಾಮಾನುಜರು, ಇವ್ವುಲಗಿಲ್—ಈ ಭೂಲೋಕದಲ್ಲಿ, ಎಂದಮಕ್ಕಾ—ನಮಗೋಸ್ಕರವೇ, ವಂದುದಿತ್ತನಾಳೆನ್ನುಂ ವಾಶಿಯಿನಾಲ್—ಬಂದು ಅವತರಿಸಿದ, ತಿರುನಾಳ್ ಎನ್ನುವಂತಹ ವಿಶೇಷದಿಂದ; ಇಂದ ತಿರುವಾದಿರೈ ತನ್ನಿನ್—ಈ ಆರ್ದ್ರಾ ನಕ್ಷತ್ರವೆಂಬ ತಿರುನಾಳಿನ, ಏರ್ತ್ತತನ್ನೈ—ಗೌರವವನ್ನು, ಒರುವಾಮಲ್—ಬಿಡದೆ, ಎಪ್ಪೊಳುದುಂ ಓರ್—ಸರ್ವದಾ ಚಿಂತಿಸುತ್ತಿರು.

ಆದಿಶೇಷನೇ ಶ್ರೀರಾಮಾನುಜರಾಗಿ ಅವತರಿಸಿದರು. ಇವರು ಪರಮಪದದಲ್ಲಿ ಭಗವಂತನಿಗೆ, "ಶೆನ್ಱಾಲ್ ಕುಡೈಯಾಂ" ಎನ್ನುವ ಪಾಶುರದಲ್ಲಿ ಹೇಳಿರುವಂತೆ—ಭಗವಂತನಿಗೆ ಸಕಲವಿಧವಾದ ಕೈಂಕರ್ಯಗಳನ್ನೂ ಮಾಡಿಕೊಂಡು, ಬಾಳಬೇಕಾಗಿದ್ದರೂ, ಅದನ್ನು ಬಿಟ್ಟು, ಅನೇಕ ವಿಧವಾದ ಕಷ್ಟಗಳಿಗೂ ಅವಕಾಶವಾಗಿರುವ, ಅಜ್ಞಾನವನ್ನೇ ಉಂಟುಮಾಡುವ, ಈ ಭೂಲೋಕದಲ್ಲಿ ಅವತರಿಸಿದ್ದು, ಸಂಸಾರದಲ್ಲಿ ಬಿದ್ದು ನರಳುವಂತಹ ನಮ್ಮಂತಹ ಜನರನ್ನು ಸಂಸಾರ ಸಾಗರದಿಂದ

ಎತ್ತುಪ್ಪದರ್ಕ್ಕಾಗಿಯೇ ಎಂದು ಅನುಸಂಧಾನಮಾಡಿ, ಅವರು ಅವತರಿಸಿದ ದಿವಸವನ್ನು ಕೊಂಡಾಡಬೇಕಾಗಿದೆ.

ಮೊದಲಾಳ್ವಾರುಗಳು ತಿರುಮಂಗೈ ಆಳ್ವಾರ್ ತಿರುಪ್ಪಾಣಾಳ್ವಾರ್ ಇವರುಗಳ ಅವತಾರ ಸ್ಥಳಗಳನ್ನು ತಿಳಿಸುವ ಪಾಶುರ :—

ಎಣ್ಣರುಂಶೀರ್ ಪೊಯ್ಗೈಮುನ್ನೋರ್ ಇವ್ವುಲಗಿಲ್
ತೋನ್ರಿಯ ಊರ್, ವಣ್ಣಮಿಗು ಕಚ್ಚಿಮಲ್ಲೈ
ಮಾಮಯಿಲೈ, ಮಣ್ಣಿಯಿಲ್ ಶೀರ್ ಶೇರ್ಗುಂ
ಕುರೈಯಲೂರ್ ಶೀರ್ಕಲಿಯನ್ ತೋನ್ರಿಯ ಊರ್,
ಓಂಗುಂ ಉರೈಯೂರ್ ಪಾಣನೂರ್ || ೧೦ ||

ಎಣ್ಣರುಂಶೀರ್ = ಎಣಿಸ್ಸು ಮಾಡಲು ಅಸಾಧ್ಯವಾದ ಕಲ್ಯಾಣಗುಣಗಳುಳ್ಳ, ಪೊಯ್ಗೈ ಮುನ್ನೋರ್ = ಪೊಯ್ಗೈಯವರೇ ಮೊದಲಾದ ಮೂರು ಆಳ್ವಾರುಗಳೂ, ಇವ್ವುಲಗಿಲ್ ತೋನ್ರಿಯ ಊರ್ = ಈ ಲೋಕದಲ್ಲಿ ಅವತರಿಸಿದ ಸ್ಥಳಗಳು ಯಾವುವೆಂದರೆ, ವಣ್ಣಮಿಗು ಕಚ್ಚಿ ಮಲ್ಲೈ ಮಾಮಯಿಲೈ = ಶ್ರೇಷ್ಠವಾದ ಕಾಂಚೀಪುರವೂ, ತಿರುಕ್ಕಡಲ್ ಮಲ್ಲೈ, ಮೈಲಾಪುರಗಳು, ಮಣ್ಣಿಯಿಲ್ ಶೀರ್ ಶೇರ್ಗುಂ ಕುರೈಯಲೂರ್ = "ಮಣ್ಣಿ" ಎಂಬ ನದಿಯ ತೀರದ ತಂಗುವ ತಿರುಕ್ಕುರೈಯಲೂರ್ ಎನ್ನುವ ಸ್ಥಳವು, ಶೀರ್ಕಲಿಯನ್ ತೋನ್ರಿಯ ಊರ್ = ವಿಶೇಷವಾದ ಶ್ರೇಷ್ಠ ಗುಣಗಳು ತುಂಬಿರುವ ತಿರುಮಂಗೈ ಆಳ್ವಾರವರು ಅವತರಿಸಿದ ಸ್ಥಳವು. ಓಂಗುಂ ಉರೈಯೂರ್ = ಉನ್ನತವಾದ ಉರೈಯೂರ್ ಎನ್ನುವ ಸ್ಥಳವು, ಪಾಣನೂರ್ = ತಿರುಪ್ಪಾಣಾಳ್ವಾರ್ ಅವರು ಅವತರಿಸಿದ ಊರಾಗಿದೆ.

ತೊಂಡರಡಿಪ್ಪೊಡಿ ಆಳ್ವಾರ್, ಕುಲಶೇಖರಾಳ್ವಾರ್‌ಗಳು ಅವತರಿಸಿದ ಊರುಗಳು :—

ತೊಂಡರಡಿಪ್ಪೊಡಿಯಾರ್ ತೋನ್ರಿಯ ಊರ್,
ತೊಲ್‌ಪುಗಳ್ ಶೇರ್ ಮಂಡಂಗುಡಿಯೆನ್ಬರ್
ಮಣ್ಣುಲಗಿಲ್, ಎಂಡಿಶೈಯುಂ ಏತ್ತುಂ ಕುಲಶೇಕರನೂರೆನ
ಉರೈಪ್ಪರ್, ವಾಯ್ತ್ತ ತಿರುವಂಜಿಕ್ಕಳಂ || ೧೧ ||

ತೊಲ್‌ಪುಗಳ್ ಶೇರ್=ನಿರಂತರವಾದ ಕೀರ್ತಿಯುಳ್ಳ, ಮಂಡಂಕುಡಿ=ತಿರುಮಂಡಂಕುಡಿ ಎಂಬುವ ದಿವ್ಯಕ್ಷೇತ್ರವನ್ನು, ತೊಂಡರಡಿಪ್ಪೊಡಿಯಾರ್ ತೋನ್ರಿಯ ಊರೆನ್ಬರ್=ತೊಂಡರಡಿಪ್ಪೊಡಿ ಆಳ್ವಾರ್ ಅವರು ಅವತರಿಸಿದ ಕ್ಷೇತ್ರವೆಂಬು ದೊಡ್ಡವರು ಹೇಳುತ್ತಾರೆ. ತಾಯ್ನ್ದ=ಭಕ್ತರುಗಳು ಆಸೆಪಡುವ, ತಿರುವಂಜಿಕ್ಕಳಂ=ತಿರುವಂಜಿಕ್ಕಳಂ ಎನ್ನುವ ಕ್ಷೇತ್ರವನ್ನು ಎಣ್‌ತಿಶೈಯುಂಪುತ್ತುಂ=ಎಂಟು ದಿಕ್ಕುಗಳಲ್ಲಿಯೂ ಇರುವ ಜನರೆಲ್ಲರೂ ಸ್ತೋತ್ರಮಾಡುವಂತಹ, ಕುಲಶೇಖರನೂರ್ ಎನ್ ಉರೈಪ್ಪರ್=ಕುಲಶೇಖರಾಳ್ವಾರ್ ಅವತರಿಸಿದ ಕ್ಷೇತ್ರವೆನ್ನುತ್ತಾರೆ.

ತಿರುಮಳಿಶೈ ಆಳ್ವಾರ್, ನಮ್ಮಾಳ್ವಾರ್, ಪೆರಿಯಾಳ್ವಾರ್ ಅವರುಗಳ ಅವತಾರ ಸ್ಥಳಗಳು :—

ಮನ್ನು ತಿರುಮಳಿಶೈ ಮಾಡತ್ತಿರುಕ್ಕುರುಹೂರ್,
ಮಿನ್ನುಪುಗಳ್ ವಿಲ್ಲಿಪುತ್ತೂರ್ ಮೇದಿನಿಯಿಲ್,
ನನ್ನೆರಿಯೋರ್ ಏಯ್ನ್ದ ಭಕ್ತಿಸಾರನ್ ಎಳಿಲ್ ಮಾರನ್
ಪಟ್ಟರ್‌ಪಿರಾನ್, ವಂದುದಿತ್ತ ಊರ್‌ಗಳ್ ವಗೈ || ೩೨ ||

ಮೇದಿನಿಯಿಲ್=ಈ ಭೂಲೋಕದಲ್ಲಿ, ಮನ್ನು ತಿರುಮಳಿಶೈ=ಸತ್ಯೈಶ್ವರ್ಯದೊಡನೆ ಕೂಡಿದ ತಿರುಮಳಿಶೈ ಎನ್ನುವ ಕ್ಷೇತ್ರವೂ, ಮಾಡತ್ತಿರುಕ್ಕುರುಹೂರ್=ಉಪ್ಪರಿಗೆ ಮನೆಗಳಿಂದ ಕೂಡಿದ ಆಳ್ವಾರ್ ತಿರುನಗರಿಯೂ, ಮಿನ್ನುಪುಗಳ್=ಕೀರ್ತಿಯೊಡನೆ ಪ್ರಕಾಶಿಸುವ, ವಿಲ್ಲಿಪುತ್ತೂರ್=ಶ್ರೀವಿಲ್ಲಿಪುತ್ತೂರ್ ಎನ್ನುವ ಕ್ಷೇತ್ರವೂ, ನನ್ನೆರಿಯೋರ್ ಏಯ್ನ್ದ ಭಕ್ತಿಸಾರರ್=ಸನ್ಮಾರ್ಗನಿಷ್ಠರಾದವರು ಸೇವಿಸುವ ತಿರುಮಳಿಶೈ ಆಳ್ವಾರರೂ, ಎಳಿಲ್ ಮಾರನ್=ರಮಣೀಯರಾದ ನಮ್ಮಾಳ್ವಾರ್ ಅವರೂ, ಪಟ್ಟರ್‌ಪಿರಾನ್=ಪೆರಿಯಾಳ್ವಾರ್ ಅವರೂ ಈ ಮೂವರೂ ವಾಯ್ನ್ದ್ ಉದಿತ್ತ ಊರ್‌ಗಳ್‌ವಗೈ=ಈ ಲೋಕವನ್ನು ರಕ್ಷಿಸುವುದಕ್ಕೆ ತಕ್ಕಂತೆ ಅವತರಿಸಿದ ದಿವ್ಯಕ್ಷೇತ್ರಗಳಾಗಿವೆ.

ಆಂಡಾಳ್, ಮಧುರಕವಿಗಳು, ಶ್ರೀ ರಾಮಾನುಜರು ಅವತರಿಸಿದ ಸ್ಥಳಗಳು:—

ಶೀರಾರುಂ ವಿಲ್ಲಿಪುತ್ತೂರ್ ಶೆಲ್ವತ್ತಿರುಕ್ಕೋಳೂರ್,
ಏರಾರ್ ಪೆರುಂಬೂದೂರ್ ಎನ್ನುಮಿವೈ, ಪಾರಿಲ್
ಮದಿಯಾರುಂ ಆಂಡಾಳ್ ಮಧುರಕವಿಯಾಳ್ವಾರ್,
ಎತಿರಾಶರ್ ತೋನ್ರಿಯ ಊರ್ ಇಂಗು || ೩೩ ||

ಪಾರಿಲ್=ಈ ಲೋಕದಲ್ಲಿ, ಶ್ರೀಪಾರುಂ ವಿಲ್ಲಿಪುತ್ತೂರ್=ಶ್ರೀವಿಲ್ಲಿಪುತ್ತೂರು, ತೆನ್ನತ್ತಿರುಕ್ಕೋಳೂರ್=ಶ್ರೀವೈಷ್ಣವರು ಸೇರುವ ತಿರುಕ್ಕೋಳೂರು, ಏರಾರ್ ಪೆರುಂಬೂದೂರ್ ಎನ್ನುಮಿವೈ=ಶ್ರೀ ಪೆರುಂಬೂದೂರು ಎಂಬುದಾಗಿ ಹೇಳಲ್ಪಡುವ ಈ ಕ್ಷೇತ್ರಗಳು ಕ್ರಮವಾಗಿ, ಮದಿಯರುಂ ಆಂಡಾಳ್=ಜ್ಞಾನಪೂರ್ಣರಾದ ಆಂಡಾಳ್ ಅವರೂ, ಮಧುರಕವಿ ಆಳ್ವಾರ್ ಅವರೂ, ಯತಿರಾಜರೂ, ಇಂಗು ತೋನ್ರಿಯೂರ್=ಈ ಲೋಕದಲ್ಲಿ ಅವತರಿಸಿದ ದಿವ್ಯ ಕ್ಷೇತ್ರಗಳಾಗಿವೆ.

ದಿವ್ಯಪ್ರಬಂಧಗಳನ್ನು ರಚಿಸಿದವರ ವಿಷಯವಾಗಿ ತಿಳಿಸಬೇಕಾದ, ಮಾಸ, ನಕ್ಷತ್ರ, ಅವತಾರ ಸ್ಥಳಗಳು, ಇವುಗಳ ಕ್ರಮವನ್ನು ರಚಿಸಿ ಮುಗಿಸಿದರು. ತಿರುವರಂಗತ್ತಮುದನಾರ್ ಅವರು ರಚಿಸಿದ "ರಾಮಾನುಜನೂತ್ತಂದಾದಿ" ವಿಷಯವಾಗಿ ಯಾವುದನ್ನೂ ರಚಿಸಿಲ್ಲವಾದ್ದರಿಂದ ಆ ಪ್ರಬಂಧವು ನಾಲ್ಕು ಸಾವಿರದಲ್ಲಿ ಸೇರಿದ್ದೆಂದು ಆ ಕಾಲದಲ್ಲಿ ಅಂಗೀಕರಿಸಲಿಲ್ಲವೆಂದು ತಿಳಿದಿದ್ದರಿಂದಲೇ "ಅಪ್ಪಿಳ್ಳೈ" ಎನ್ನುವ ಆಚಾರ್ಯರು "ರಾಮಾನುಜನೂತ್ತಂದಾದಿ"ಯನ್ನು ಬಿಟ್ಟು ನಾಲ್ಕು ಸಾವಿರ ಪ್ರಬಂಧಗಳೆಂದು ಪರಿಗಣಿಸಿದರು. ಮಣವಾಳ ಮಾಮುನಿಗಳು, ತಾವೇ ರಾಮಾನುಜನೂತ್ತಂದಾದಿಯನ್ನು 4,000 ದಿವ್ಯಪ್ರಬಂಧಗಳೊಡನೆ ಸೇರಿಸಿ ಗೌರವಿಸಬೇಕೆಂದೂ, ಕಾರ್ತಿಗೈ ದೀಪೋತ್ಸವ (ಕಾರ್ತಿಕ ಮಾಸ ಕೃತ್ತಿಕಾ ನಕ್ಷತ್ರ) ಮುಗಿದನಂತರ, ಮಕರ ಮಾಸ ಹಸ್ತ ನಕ್ಷತ್ರದವರೆಗೂ, ದ್ರಾವಿಡ ವೇದಗಳಿಗೆ ಅನಧ್ಯಯನ ದಿವಸವನ್ನು ಆಚರಿಸುವಂತೆ, ಅನಧ್ಯಯನ ನಿಯಮವು ಈ ರಾಮಾನುಜನೂತ್ತಂದಾದಿಗೂ ಅಂಗೀಕರಿಸಲ್ಪಡತಕ್ಕದ್ದೆಂದೂ ನಿಯಮಿಸಿದರೆಂದು ದೊಡ್ಡವರಾದ ವಯೋವೃದ್ಧರೂ ಜ್ಞಾನವೃದ್ಧರೂ ಹೇಳಿರುವ ವಿಷಯವು ತಿಳಿದ ವಿಚಾರವಾಗಿದೆ.

ದಿವ್ಯಪ್ರಬಂಧಗಳಿಗೆ ವ್ಯಾಖ್ಯಾನವನ್ನು ರಚಿಸಿದ ಕ್ರಮವನ್ನು ತಿಳಿಸುವ ಪಾಸುರ :—

ಆಳ್ವಾರ್ಗಳೇತ್ತಂ ಅರುಳಿಚ್ಚೆಯಲ್ ಏತ್ತಂ,
ತಾಳ್ವಾದುಮಿನ್ರಿ ಯವೈದಾಂ ವಳರ್ತ್ತೋರ್, ಏಳ್.
ಪಾರುಂ ಉಯ್ಯ ಅವರ್ಗಳ್ ಶೆಯ್ದ ವಿಯಾಕ್ಕಿಯೈ
ಗಳುಳ್ಳದೆಲ್ಲಾಂ ವೈಯಂ ಮರಿಯಪ್ಪಗರ್ವೋಂ

ಪಾರಯನ್ನು || ೩೯ ||

ಆಳ್ವಾರ್‌ಗಳೇತ್ತಂ — ಆಳ್ವಾರುಗಳ ಮಹಿಮೆಯನ್ನು, ಅರುಳಿಚ್ಚೆಯಲ್ ಏತ್ತಂ — ಅವರುಗಳು ರಚಿಸಿದ ಪ್ರಬಂಧಗಳ ಮಹಿಮೆಯನ್ನು, ತಾಳ್ವಾದುಮಿಲ್ — ಸ್ವಲ್ಪವೂ ಅಗೌರವಪಡಿಸದೆ, ಕುರವರ್ — ಗುರುಗಳನ್ನು, ತಾಮೇತ್ತಂ — ಬೆಳಗಿಸಿದ ಪೂರ್ವಾಚಾರ್ಯರುಗಳನ್ನು, ಏಳ್‌ಪಾರುಂ ಉಯ್ಯ — ಈ ಲೋಕದಲ್ಲಿರುವವರು ಉಜ್ಜೀವಿಸುವಂತೆ, ಅವರ್‌ಗಳ್ ಸೆಯ್ದ — ಆ ಆಚಾರ್ಯರುಗಳು ರಚಿಸಿದ, ವಿಯಾಕ್ಕಿಯೈಗಳ್ ಉಳ್ಳದೆಲ್ಲಾಂ — ವ್ಯಾಖ್ಯಾನಗಳನ್ನೆಲ್ಲಾ, ವೈಯಂ ಅರಿಯ ವಾಯ್‌ನ್ದು ಪ್ಪಗರ್‌ವೋಂ — ಲೋಕವೆಲ್ಲಾ ತಿಳಿಯುವಂತೆ ಕ್ರಮವಾಗಿ ಹೇಳುತ್ತೇನೆ.

ಆಳ್ವಾರ್‌ಗಳೈಯುಂ ಅರುಳಿಚ್ಚೆಯಲ್‌ಗಳೈಯುಂ,
ತಾಳ್ವಾಗ ನಿನೈಪ್ಪವರ್‌ಗಳ್ ತಾಂ, ನರಗಿಲ್
ವೀಳ್ವಾರ್‌ಗಳೆನ್ನು ನಿನೈತ್ತು ನೆಂಜೇ, ಎಪ್ಪೋದುಂ
ನೀ ಅವರ್‌ಪಾಲ್, ಶೆನ್ರಣುಗಕ್ಕೂಶಿತ್ತಿರಿ ॥ ೩೯ ॥

ನೆಂಜೇ — ಓ ಮನಸ್ಸೇ, ಆಳ್ವಾರ್‌ಗಳೈಯುಂ — ಆಳ್ವಾರುಗಳನ್ನೂ, ಅರುಳಿಚ್ಚೆಯಲ್‌ಗಳೈಯುಂ — ಅವರುಗಳು ರಚಿಸಿದ ದಿವ್ಯಪ್ರಬಂಧಗಳನ್ನೂ, ತಾಳ್ವಾಗ ನಿನೈಪ್ಪವರ್ ತಾಂ — ನಿಕೃಷ್ಟವೆಂದು ತಿಳಿಯುವಂತಹವರು, ನರಗಿಲ್ ವೀಳ್ವಾರ್‌ಗಳೆನ್ರು — ನರಕದಲ್ಲಿ ಬಿದ್ದು ಪರಿತಪಿಸುತ್ತಾರೆಂದು ನಿಶ್ಚಯಿಸಿ, ಅವರ್ ಪಾಲ್ — ಆ ಪ್ರಕಾರದವರ ಸಾಮೀಪ್ಯದೊಡನೆ, ಶೆನ್ರಣುಗಕ್ಕೂಶಿತ್ತಿರಿ — ಹತ್ತಿರಕ್ಕೆ ಸೇರದೆ ಹಿಂತೆಗೆಯಬೇಕು.

ಹಿಂದಿನ ಪಾಶುರದಲ್ಲಿ ಮಾಡಿದ ಪ್ರತಿಜ್ಞಾಪ್ರಕಾರ ದಿವ್ಯಪ್ರಬಂಧಗಳ ವ್ಯಾಖ್ಯಾನಕ್ರಮವನ್ನು ತಿಳಿಸಬೇಕಾದ್ದು ನ್ಯಾಯವಾಗಿದ್ದರೂ, ಅದನ್ನು ಬಿಟ್ಟು ಈ ಪಾಶುರ ಮೊದಲುಗೊಂಡು ನಾಲ್ಕು ಪಾಶುರಗಳನ್ನು ಬೇರೆ ವಿಷಯವಾಗಿ ರಚಿಸಲು ಕಾರಣವೇನೆಂದರೆ, ಪ್ರಸಂಗವಾದದ್ದರಿಂದ ಹಿಂದಿನ ಪಾಶುರದಲ್ಲಿ ಆಳ್ವಾರುಗಳ ಗೌರವವೂ, ಅವರುಗಳು ರಚಿಸಿದ ಪ್ರಬಂಧಗಳ ಗೌರವವೂ, ಕಮ್ಮಿಯಾಗದಂತೆ ರಕ್ಷಿಸಿದ ಆಚಾರ್ಯರುಗಳ ಗುಣಗಳನ್ನು ಪ್ರಸ್ತಾಪಮಾಡುವುದು ನ್ಯಾಯವಾದ್ದರಿಂದಲೂ, ಮೇಲ್ಕಂಡ ಆಚಾರ್ಯರುಗಳ ಮನಸ್ಸು ನೋಯುವಂತೆ ಕೆಲವು ದ್ರವಿಡೋಪನಿಷದ್ಬಾಹ್ಯರೂ ಕುದೃಷ್ಟಿಗಳೂ, ಆಳ್ವಾರುಗಳನ್ನೂ, ಅವರ ಪ್ರಬಂಧಗಳನ್ನೂ, ದೂಷಿಸುತ್ತಿದ್ದುದರಿಂದ ಅವರ ಸಹವಾಸವೂ ತ್ಯಾಜ್ಯವೆಂದು ಈ ಪಾಶುರದಿಂದ ವ್ಯಕ್ತಪಡುತ್ತದೆ.

ಶ್ರೀಮನ್ನಾಥಮುನಿ ಮೊದಲಾದ ಆಚಾರ್ಯರುಗಳೇ ನಮಗೆ ಗತಿ.—

ತೆರುಳುತ್ತ ಆಳ್ವಾರ್‌ಗಳ್ ಶೀರ್ಮೈ ಅರಿವಾರಾರ್?
ಅರುಳಿಚ್ಚೆಯಲೈ ಅರಿವಾರಾರ್? ಅರುಳ್‌ಪೆತ್ತ ನಾದಮುನಿ
ಮುದಲಾನ ನಂದೇಶಿಕರೈಯಲ್ಲಾಲ್,
ಪೇದೈಮನಮೇ ಉಂಡೋ ಪೇಶು ॥ ೩೭ ॥

ಪೇದೈಮನಮೇ=ಜ್ಞಾನವಿಲ್ಲದ ಮನಸ್ಸೇ, ತೆರುಳುತ್ತ ಆಳ್ವಾರ್‌ಗಳ್ ಶೀರ್ಮೈ ಅರಿವಾರಾರ್=ಯಥಾರ್ಥ ಜ್ಞಾನಿಗಳಾದ ಆಳ್ವಾರುಗಳ ಮಹಿಮೆಯನ್ನು ತಿಳಿದವರು ಯಾರು? ಅರುಳಿಚ್ಚೆಯಲೈ=ಅವರು ಕೃಪೆಯಿಂದ ರಚಿಸಿದ ದಿವ್ಯಪ್ರಬಂಧಗಳನ್ನು, ಅರಿವಾರಾರ್=ಸರಿಯಾಗಿ ತಿಳಿದುಕೊಳ್ಳುವವರು ಯಾರು? ಅರುಳ್‌ಪೆತ್ತ ನಾದಮುನಿ ಮುದಲಾನ=ಆಳ್ವಾರ್ರ ಕೃಪೆಗೆ ಪಾತ್ರರಾದ ಶ್ರೀಮನ್ನಾಥಮುನಿಗಳೇ ಮೊದಲಾದ, ನಮ್‌ದೇಶಿಕರೈಯಲ್ಲಾಲ್=ನಮ್ಮ ಆಚಾರ್ಯರುಗಳು ಹೊರತು ಬೇರೆ ಯಾರಾದರೂ, ಉಂಡೋಪೇಶು=ಉಂಟೋ? ಹೇಳು.

ಹಿಂದಿನ ಪಾಶುರದಲ್ಲಿ ಸಹವಾಸ ಯೋಗ್ಯರಲ್ಲದವರನ್ನು ತ್ಯಜಿಸಿ, ಕೆಲವು ಪಾಪಿಗಳು ವೈಷ್ಣವರ ವೇಷದಿಂದ ಕೂಡಿದ್ದರೂ ಅವರುಗಳು ನಮ್ಮ ಪೂರ್ವಾಚಾರ್ಯರ ಪರಂಪರೆಗಳಲ್ಲಿ ಸೇರಿದವರಲ್ಲ ಎಂದು ಹೇಳಿರುವರು.

ಆಚಾರ್ಯ ಪರಂಪರೆಯಲ್ಲಿ ಶ್ರೀರಾಮಾನುಜಾಚಾರ್ಯರಿಗೆ ವಿಶೇಷ ಗೌರವವನ್ನು ಹೇಳುವ ಪಾಶುರ:—

ಓರಾಣ್ ವಳಿಯಾಯ್ ಉಪದೇಶಿತ್ತಾರ್
ಮುನ್ನೋರ್, ಏರಾರ್ ಎತಿರಾಶರಿನ್ನರುಳಾಲ್,
ಪಾರುಲಗಿಲ್ ಆಶೈಯುಡೈಯೋರ್ಕ್ಕೆಲ್ಲಾಂ, ಆರಿಯರ್‌ಗಾಳ್
ಕೂರುಮೆನ್ನು, ಪೇಶಿ ವರಂಬರುತ್ತಾರ್ ಪಿನ್ ॥ ೩೮ ॥

ಮುನ್ನೋರ್ ಓರ್ ಆಣ್ ವಳಿಯಾಯ್=ರಾಮಾನುಜಾಚಾರ್ಯರಿಗೆ ಮೊದಲು ಇದ್ದ ಆಚಾರ್ಯರುಗಳು ಒಬ್ಬೊಬ್ಬರಿಗೆ ಮಾತ್ರ, ಉಪದೇಶಿತ್ತಾರ್=ಅರ್ಥ ವಿಶೇಷಗಳನ್ನು ಉಪದೇಶ ಮಾಡುತ್ತಿದ್ದರು. ಏರಾರ್ ಎತಿರಾಶರ್=ಹಿಂದಿನ ಆಚಾರ್ಯರಾದನಂತರ ಸದ್ಗುಣಗಳೊಡನೆ ಕೂಡಿದ ಶ್ರೀರಾಮಾನುಜಾಚಾರ್ಯರು, ಇನ್ನರುಳಾಲ್=ತಮ್ಮ ಪರಿಪೂರ್ಣವಾದ ಕೃಪೆಯಿಂದ, ಆರಿಯರ್‌ಗಾಳ್=ಪೂಜ್ಯರಾದ ನೀವು, ಪಾರುಲಗಿಲ್=ಈ ಭೂಮಂಡಲದಲ್ಲಿ,

ಆಶೈಯುಡೈಯೋರ್ಕ್ಕು ಎಲ್ಲಾಂ ಕೂರುಂ ಎನ್ರು ಪೇಶಿ—ಅರ್ಥಗಳನ್ನು ಕೇಳಲು ಆಸಕ್ತಿಯುಳ್ಳ ಎಲ್ಲರಿಗೂ "ಉಪದೇಶಮಾಡಿರಿ" ಎಂದು ನಿಯಮಿಸಿ, ವರಂಬು ಅರುತ್ತಾರ್—ಹಿಂದಿನವರು ಇಟ್ಟುಕೊಂಡಿದ್ದ ಎಲ್ಲೆಕಟ್ಟನ್ನು ಹೋಗಲಾಡಿಸಿದರು.

ರಾಮಾನುಜಾಚಾರ್ಯರನ್ನು ವಿಶೇಷವಾಗಿ ಹೇಳಬೇಕೆನಿಸಿ, ಈ ಪಾಶುರ ದಲ್ಲೂ ಮುಂದಿನ ಪಾಶುರದಲ್ಲೂ ಹೇಳುತ್ತಾರೆ. ಶ್ರೀ ರಾಮಾನುಜರನ್ನು ಕುರಿತು ಆರ್ತಿಪ್ರಬಂಧದಲ್ಲಿ "ಪಾರಸುರ್ಕ್ಕೈಕೆಯ್ದು ತಮಿಳ್, ಮರೈವಳರ್ತ್ತೋನ್ ವಾಳಿಯೇ" ಎಂದು ಮಣವಾಳ ಮಾಮುನಿಗಳೇ ಹೇಳಿದ್ದಾರೆ. ಆದ್ದರಿಂದ ಆ ರಾಮಾನುಜರು ತಮಿಳ್ ವೇದವನ್ನು ಬೆಳೆಸಿದ ಕ್ರಮದಲ್ಲಿ ಮುಖ್ಯವಾದ ಒಂದು ಕ್ರಮವನ್ನು ಈ ಪಾಶುರದಲ್ಲಿ ಹೇಳುತ್ತಾರೆ. ಶ್ರೀಮನ್ನಾಥಮುನಿಗಳೇ ಮೊದಲಾದ ಪೂರ್ವಾಚಾರ್ಯರುಗಳು ದಿವ್ಯಪ್ರಬಂಧ ವ್ಯಾಖ್ಯಾನವನ್ನು ರಚಿಸಲು ಸಾಮರ್ಥ್ಯ ವುಳ್ಳವರಾಗಿದ್ದರೂ ಕೂಡ ಯಾರೂ ವ್ಯಾಖ್ಯಾನವನ್ನು ರಚಿಸಲಿಲ್ಲ. ಉಪದೇಶ ವನ್ನು ಮಾತ್ರ ಮಾಡಿದರು. ಆ ರೀತಿ ಉಪದೇಶ ಮಾಡಿದರೂ ಶ್ರೀವೈಷ್ಣವರನ್ನು ಗುಂಪಾಗಿ ಸೇರಿಸಿ ಉಪದೇಶ ಮಾಡಲಿಲ್ಲ. ಒಬ್ಬ ಆಚಾರ್ಯರು ಒಬ್ಬರಿಗೆ ಉಪದೇಶ ಮಾಡತಕ್ಕದ್ದೆಂದು ಈ ಕ್ರಮದಲ್ಲೇ ಬರುತ್ತಿತ್ತು. ಶ್ರೀರಾಮಾನುಜಾಚಾರ್ಯರ ಕಾಲದವರೆಗೂ ಇದೇ ರೀತಿ ನಡೆದು ಬಂದಿತು. ಈ ವಿಷಯದಲ್ಲಿ ಕೊರತೆಯನ್ನು ನೋಡಿದ ರಾಮಾನುಜಾಚಾರ್ಯರು ಈ ರೀತಿ ನಿರ್ಬಂಧ ಇರಕೂಡದೆಂದು, ಈ ನಿರ್ಬಂಧವನ್ನು ಹೋಗಲಾಡಿಸಿಯೇ ತೀರಬೇಕೆಂದು ಸಂಕಲ್ಪಿಸಿ ಈ ನಿರ್ಬಂಧದಿಂದ ನಮ್ಮ ಶ್ರೀವೈಷ್ಣವ ದರ್ಶನವೇ ಸಂಕೋಚ ಹೊಂದುತ್ತದೆಂದೂ, ಆ ಎಲ್ಲೆಕಟ್ಟನ್ನು ನೀಗಿಸಿದರು, ಎಂಬುದು ಈ ಪಾಶುರದಿಂದ ವ್ಯಕ್ತವಾಗುತ್ತದೆ.

ಪಿಳ್ಳೈಲೋಕಾಚಾರ್ಯರೇ ಮೊದಲಾದವರು, ಅನೇಕ ರಹಸ್ಯ ಗ್ರಂಥಗಳನ್ನು ರಚಿಸಿ, ಆಳ್ವಾರ್ ಶ್ರೀ ಸೂಕ್ತಿಗಳ ಅರ್ಥವನ್ನು ವೃದ್ಧಿಪಡಿಸಿದ್ದಕ್ಕೂ, ಶ್ರೀರಾಮಾನುಜಾಚಾರ್ಯರ ಆಜ್ಞೆಯೇ ಮೂಲಕಾರಣವೆಂದು ಪ್ರಕಟವಾಗುತ್ತದೆ. ಆಚಾರ್ಯರುಗಳನ್ನು ಎರಡು ವಿಧವಾಗಿ ವಿಭಾಗಿಸಿ, ಅನುವೃತ್ತಿ ಪ್ರಸನ್ನಾಚಾರ್ಯ ರೆಂದೂ, ಕೃಪಾಮಾತ್ರ ಪ್ರಸನ್ನಾಚಾರ್ಯರೆಂದೂ, ರಾಮಾನುಜಾಚಾರ್ಯ ರಿಗೆ ಪೂರ್ವದಲ್ಲಿದ್ದ ಆಚಾರ್ಯರುಗಳನ್ನು ಅನುವೃತ್ತಿ ಪ್ರಸನ್ನಾಚಾರ್ಯರೆಂದೂ, ರಾಮಾನುಜಾಚಾರ್ಯರನ್ನು "ಕೃಪಾಮಾತ್ರ ಪ್ರಸನ್ನಾಚಾರ್ಯ"ರೆಂದೂ ನಮ್ಮ ಆಚಾರ್ಯರುಗಳು ಉಪದೇಶಿಸುವುದಕ್ಕೆ ಕಾರಣವು ಈ ಪಾಶುರವೇ ಆಗಿದೆ.

"ಎಂಬೆರುಮಾನಾರ್ ದರ್ಶನಂ" ಎಂದು ಹೆಸರು ಬರಲು ಕಾರಣ: —

*ಎಂಬೆರುಮಾನಾರ್ ದರಿಶನಮೆನ್ರೇ ಇದುಕ್ಕು,
ನಂಬೆರುಮಾಳ್ ಪೇರಿಟ್ಟು ನಾಟ್ಟಿವೈತ್ತಾರ್, ಅಂಬುವಿಯೋರ್
ಇಂದತ್ತರಿಶನತ್ತೈ ಎಂಬೆರುಮಾನಾರ್ ವಳರ್ತ್ತ
ಅಂದಚ್ಚೆಯಲರಿಗೈಕ್ಕಾ ॥ ೩೮ ॥

ಇಂದತ್ತರಿಶನತ್ತೈ = ಈ ಶ್ರೀವೈಷ್ಣವ ಸಿದ್ಧಾಂತವನ್ನು. ಎಂಬೆರುಮಾನಾರ್ ವಳರ್ತ್ತ ಅಂದಚ್ಚೆಯಲ್ = ಶ್ರೀರಾಮಾನುಜಾಚಾರ್ಯರು ಬೆಳೆಸಿದರೆಂಬ ವೃತ್ತಾಂತವನ್ನು, ಅಂಬುವಿಯೋರ್ ಅರಿಗೈಕ್ಕಾ = ಈ ಭೂಮಂಡಲದಲ್ಲಿರುವವರೆಲ್ಲಾ ತಿಳಿದುಕೊಳ್ಳುವುದಕ್ಕಾಗಿಯೇ, ನಂಬೆರುಮಾಳ್ ಇದರ್ಕ್ಕು — ಶ್ರೀರಂಗನಾಥನು ಈ ಸಿದ್ಧಾಂತಕ್ಕೆ, "ಎಂಬೆರುಮಾನಾರ್ ದರಿಶನಮೆನ್ರೇ ಪೇರಿಟ್ಟು ನಾಟ್ಟಿವೈತ್ತಾರ್ = ಶ್ರೀರಾಮಾನುಜ ದರ್ಶನ"ವೆಂದೇ ಹೆಸರಿಟ್ಟು ಸ್ಥಾಪಿಸಿದನು.

ಹಿಂದಿನ ಪಾಶುರದಲ್ಲಿ ಶ್ರೀ ರಾಮಾನುಜಾಚಾರ್ಯರ ಹೃದಯ ವೈಶಾಲ್ಯವನ್ನು ಪ್ರಕಟಿಸಿದ ಪ್ರಸಂಗದಲ್ಲಿ, ಶ್ರೀರಾಮಾನುಜಾಚಾರ್ಯರ ಹೆಸರನ್ನು ಸಿದ್ಧಿಸಿಯೇ ನಮ್ಮ ಶ್ರೀವೈಷ್ಣವ ಸಿದ್ಧಾಂತವನ್ನು ಪ್ರಕಟಪಡಿಸುವೇನೆಂದೇ ಈ ಪಾಶುರವನ್ನು ರಚಿಸಿರುತ್ತಾರೆ. ಕಲಿಯುಗದಲ್ಲಿ ಅವತರಿಸಿದ ನಮ್ಮಾಳ್ವಾರ್ ಕಾಲಕ್ಕೆ ಮೊದಲೇ ಅನಾದಿಯಾಗಿ ಅನುಸರಿಸಿ ಬರುವ ಈ ದರ್ಶನವನ್ನು ರಾಮಾನುಜ ದರ್ಶನವೆಂದು ಏತಕ್ಕೆ ಹೇಳಬೇಕು? ಈ ಸಿದ್ಧಾಂತವು ರಾಮಾನುಜರಿಂದ ಹೊಸದಾಗಿ ಏರ್ಪಡಿಸಲ್ಪಟ್ಟಿತೇ ಎಂದು ಸಂದೇಹಪಡುತ್ತಾರೆ. ಆ ಸಂದೇಹವು ಈ ಪಾಶುರದಿಂದ ಪರಿಹಾರವಾಗುತ್ತದೆ. ಶ್ರೀ ರಾಮಾನುಜ ದರ್ಶನವೆಂದು ಇದನ್ನು ಪ್ರಕಟಿಸಿದವರು ಶ್ರೀ ರಂಗನಾಥಸ್ವಾಮಿಯವರು. ಈ ರೀತಿ ನಿರೂಪಿಸಲು ಕಾರಣವೇನೆಂದರೆ ಈ ಸಿದ್ಧಾಂತವನ್ನು ರಾಮಾನುಜರು ನಾನಾ ಪ್ರಕಾರದಿಂದ ಬೆಳೆಸಿದರೆಂಬುವುದೇ ಕಾರಣವಾಗಿದೆ ಮತ್ತು ದಿವ್ಯಪ್ರಬಂಧಗಳನ್ನು ವೃದ್ಧಿಪಡಿಸಿದ್ದೇ ಮುಖ್ಯ ಕಾರಣವಾಗಿದೆ.

ತಿರುವಾಯ್ಮೊಳಿಗೆ ವ್ಯಾಖ್ಯಾನ ಮಾಡಿದವರು —

ಪಿಳ್ಳಾನ್ ನಂಜೀಯರ್ ಪೆರಿಯವಾಚ್ಚಾನ್ ಪಿಳ್ಳೈ,
ತೆಳ್ಳಾರ್ ವಡಕ್ಕು ತ್ತಿರುವೀದಿ ಪ್ಪಿಳ್ಳೈ,
ಮಣವಾಳ ಯೋಗಿ ತಿರುವಾಯ್ಮೊಳಿಯೈ ಕ್ಕಾತ್ತ,
ಗುಣವಾಳರೆನ್ರು ನೆಂಜೇ ಕೂರು ॥ ೩೯ ॥

ಪಿಳ್ಳಾನ್ = ತಿರುಕ್ಕುರುಹೈ ಪಿರಾನ್ ಪಿಳ್ಳಾನ್ ಎಂಬುವರು, ನಂಜೀಯರ್ ರವರು, ಪೆರಿಯ ಆಚ್ಚಾನ್‌ಪಿಳ್ಳೈ = ಪೆರಿಯ ಆಚ್ಚಾನ್ ಪಿಳ್ಳೈರವರು, ತೆಳ್ಳಾರ್ ವಡಕ್ಕುತ್ತಿರುವೀದಿಪಿಳ್ಳೈ = ತಿಳಿಯಾದ ಜ್ಞಾನವುಳ್ಳ ವಡಕ್ಕುತಿರುವೀದಿಪಿಳ್ಳೈ ಅವರು. ಮಣವಾಳಯೋಗಿ = ವಾದಿಕೇಸರಿ ಅಳಗಿಯ ಮಣವಾಳಜೀಯರವರು, ತಿರುವಾಯ್‌ಮೊಳಿಯೈ = ನಮ್ಮಾಳ್ವಾರವರು ರಚಿಸಿದ ತಿರುವಾಯ್‌ಮೊಳಿಯನ್ನು, ಕಾತ್ತ = ವ್ಯಾಖ್ಯಾನವನ್ನು ರಚಿಸಿ ರಕ್ಷಿಸಿದ, ಗುಣವಾಳರೆನ್ನು = ಮಹಾ ಗುಣಶಾಲಿಗಳೆಂದು, ನೆಂಜೇ ಕೂಱು = ಮನಸ್ಸೇ ಇವರುಗಳ ಮಹಿಮೆಯನ್ನು ಹೇಳು.

ವ್ಯಾಖ್ಯಾನ ಮಾಡಿದವರನ್ನು ಶ್ಲಾಘಿಸುವ ಪಾಶುರ—

ಮುಂಬುರಸೇ ಪಿಳ್ಳಾನ್ ಮುದಲಾನೋರ್ ಶ್ಶೈದರುಳುಂ,
ಅಂದವಿಯಾಕ್ಕಿಯೈಗಳನ್ಱಾಗಿಲ್, ಅಂದೋ ತಿರುವಾಯ್
ಮೊಳಿಪ್ಪೊರುಳೈ ತ್ತೇರ್ನ್ದುರೈಕ್ಕವಲ್ಲ ಕುರುವಾರ್,
ಇಕ್ಕಾಲಂ ನೆಂಜೇ ಕೂಱು ॥ ೪೦ ॥

ನೆಂಜೇ = ಮನಸ್ಸೇ, ಮುಂಬುರಸೇ = ಮೊದಲೇ, ಪಿಳ್ಳಾನ್ ಮುದಲಾನೋರ್ ಶ್ಶೈದರುಳುಂ = ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್ ಮೊದಲಾದ ಆಚಾರ್ಯರು ರಚಿಸಿದ, ಅಂದವಿಯಾಕ್ಕಿಯೈಗಳ್ = ಆ ರೀತಿಯಾದ ವ್ಯಾಖ್ಯಾನಗಳು, ಅನ್ಱಾಗಿಲ್ = ಅವತರಿಸದೇ ಇದ್ದರೆ, ಇಕ್ಕಾಲಂ = ಈ ಕಾಲದಲ್ಲಿ, ತಿರುವಾಯ್‌ಮೊಳಿಪ್ಪೊರುಳೈ = ತಿರುವಾಯ್‌ಮೊಳಿಯ ಅರ್ಥಗಳನ್ನು, ತೇರ್ನ್ದು = ಪರಿಶೀಲಿಸಿ, ಉರೈಕ್ಕವಲ್ಲ = ವಿಶದವಾಗಿ ಹೇಳುವಂತಹ, ಕುರುವಾರ್ = ಗುರುಗಳು ಯಾರು? ಕೂಱು = ಹೇಳು. ಅಂದೋ = ಏನು ಆಶ್ಚರ್ಯ?

ಆಱಾಯಿರಪ್ಪಡಿ ವ್ಯಾಖ್ಯಾನಾವತಾರ—

ತೆಳ್ಳಾರುಂ ಜ್ಞಾನತ್ತಿರುಕ್ಕುರುಹೈಪ್ಪಿರಾನ್,
ಪಿಳ್ಳಾನ್ ಯತಿರಾಶರ್ ಪೇರರುಳಾಲ್,
ಉಳ್ಳಾರುಂ ಅನ್ಬುಡನೇ ಮಾಱನ್ ಮಱೈಪ್ಪೊರುಳೈ
ಅನ್ಱುರೈತ್ತದು, ಇನ್ಬಮಿಗುಂ ಆಱಾಯಿರಂ ॥ ೪೧ ॥

ತೆಳ್ಳಾರುಂ ಜ್ಞಾನ = ತಿಳಿಯಾದ ಜ್ಞಾನವುಳ್ಳ, ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್ = ಪಿಳ್ಳಾನ್ ಎನ್ನುವ ಆಚಾರ್ಯರು, ಯತಿರಾಶರ್ = ರಾಮಾನುಜರ,

ಪೇರರುಳಾಲ್—ಪರಮ ಕೃಪೆಯಿಂದ, ಉಳ್ಳಾರುಂ ಅನ್ಬುಡನೇ—ಹಾರ್ದವಾದ ಪ್ರೀತಿಯೊಡನೆ, ಅನ್ರು—ಆ ಕಾಲದಲ್ಲಿ, ಮಾರನ್ಮರ್ಶ್ಪೊರುಳ್ಳೈ—ತಿರುವಾಯ್ ಮೊಳಿಯ ಅರ್ಥವನ್ನು, ಉರೈತ್ತದು—ರಚಿಸಿದ ವ್ಯಾಖ್ಯಾನವು. ಇನ್ಬಮಿಗುಂ ಆರಾಯಿರಂ—ರಸಭರಿತವಾದ ಆರಾಯಿರಪ್ಪಡಿ ಎನ್ನುವಂತಹ ವ್ಯಾಖ್ಯಾನವಾಗಿದೆ. ಮೂವತ್ತೆರಡು ಅಕ್ಷರಗಳಿಗೆ ಒಂದು ಗ್ರಂಥವೆಂತಲೂ, ಆ ಪ್ರಕಾರವಾದ ಆರುಸಾವಿರ ಗ್ರಂಥಗಳೊಡನೆ ಕೂಡಿದ ವ್ಯಾಖ್ಯಾನಕ್ಕೆ ಆರಾಯಿರಪ್ಪಡಿ ಎಂದೂ ಹೆಸರು.

ಒಂಭತ್ತು ಆಯಿರಪ್ಪಡಿ—

ತಂಶೀರ್ ಜ್ಞಾನಿಯರ್ಗಳ್ ತಾಮ್ ಪುಗಳುಂ ವೇದಾಂತಿ,
ನಂಜೀಯರ್ ತಾಮ್ ಭಟ್ಟರ್ ನಲ್ಲರುಳಾಲ್,
ಎಂಜಾದ ಅರ್ಥಮುಡನ್ ಮಾರನ್ ಮರ್ಶ್ಪೊರುಳೈ
ಆಯ್ನ್ದುರೈತ್ತದು, ಏರೊನ್ಬದಿನಾಯಿರಂ ॥ ೪೨ ॥

ತಂಶೀರ್=ತಮ್ಮ ಶ್ರೇಷ್ಠವಾದ ಗುಣಗಳನ್ನು, ಜ್ಞಾನಿಯರ್ಗಳ್ ತಾಮ್ ಪುಗಳುಂ=ಜ್ಞಾನಿಗಳು ಹೊಗಳುವಂತಹ, ವೇದಾಂತಿ=ವೇದಾಂತಿ ಎಂದು ಪ್ರಸಿದ್ಧರಾದ, ನಂಜೀಯರ್ತಾಮ್—ನಂಜೀಯರೆಂಬ ಆಚಾರ್ಯರು, ಭಟ್ಟರ್ ನಲ್ಲರುಳಾಲ್=ಭಟ್ಟರ ಪರಮಾನುಗ್ರಹದಿಂದ, ಎಂಜಾದ ಅರ್ಥಮುಡನ್—ಯಾವ ಕೊರತೆಯೂ ಇಲ್ಲದಂತಹ, ಪ್ರೀತಿಯೊಡನೆ, ಮಾರನ್ಮರ್ಶ್ಪೊರುಳೈ=ತಿರುವಾಯ್ಮೊಳಿಯ ಅರ್ಥವನ್ನು, ಆಯ್ನ್ದು—ಆರಿಸಿ, ಉರೈತ್ತದು, ರಚಿಸಿದ್ದು, ಏರ್ಒನ್ಬದಿನಾಯಿರಂ=ರಮಣೀಯವಾದ ಒಂಭತ್ತುಸಾವಿರ ಗ್ರಂಥ.

ಇಪ್ಪತ್ತನಾಲ್ಕುಸಾವಿರ ಗ್ರಂಥಗಳ ವಿವರ—

ನಂಬಿಳ್ಳೈ ತಮ್ಮುಡೈಯ ನಲ್ಲರುಳಾಲ್ ಏವಿಯಿಡ,
ಪಿನ್ಪೆರಿಯವಾಚ್ಚಾನ್‌ಪಿಳ್ಳೈ ಅದನಾಲ್,
ಇನ್ಬಾವರುಪತ್ತಿ ಮಾರನ್ಮರ್ಶ್ಪೊರುಳೈ ಚೊನ್ನದು,
ಇರುಪತ್ತು ನಾಲಾಯಿರಂ ॥ ೪೩ ॥

ನಂಬಿಳ್ಳೈ=ನಂಬಿಳ್ಳೈ ಎಂಬುವ ಆಚಾರ್ಯರು, ತಮ್ಮುಡೈಯ ನಲ್ಲರುಳಾಲ್—ತಮ್ಮ ಪರಮಾನುಗ್ರಹದಿಂದ, ಏವಿಯಿಡ=ಪ್ರೋತ್ಸಾಹಿಸಲು, ಪಿನ್ನದನಾಲ್—ಅನಂತರ ಅವರ ನಿಯಮನದಂತೆ, ಪೆರಿಯ ವಾಚ್ಚಾನ್‌ಪಿಳ್ಳೈ=ಪೆರಿಯ ವಾಚ್ಚಾನ್‌ಪಿಳ್ಳೈ ಎನ್ನುವ ಆಚಾರ್ಯರು, ಇನ್ಬಾವರುಪತ್ತಿಮಾರ್=ಆನಂದ

ರೂಪವಾಗಿ ಪ್ರವಹಿಸಿ ಬಂದ ಭಕ್ತಿಯುಳ್ಳ ನಮ್ಮಾಳ್ವಾರ್ ರಚಿಸಿದ, ಮರೈ—ದ್ರಾವಿಡವೇದವಾದ ತಿರುವಾಯ್ಮೊಳಿಗೆ, ಪೊರುಳ್—ಅರ್ಥಗಳನ್ನು, ಶೊನ್ನದು—ರಚಿಸಿದ ವ್ಯಾಖ್ಯಾನವು. ಇರುಪತ್ತಿನಾಲಾಯಿರಂ—ಇಪ್ಪತ್ತುನಾಲ್ಕುಸಾವಿರ ಗ್ರಂಥವುಳ್ಳ ವ್ಯಾಖ್ಯಾನವಾಗಿದೆ.

ಆಚಾರ್ಯರುಗಳು ವ್ಯಾಖ್ಯಾನಗಳನ್ನು ಬರೆಯುವುದಕ್ಕೆ ಅನೇಕ ಕಾರಣಗಳುಂಟು. ಮುಂದಕ್ಕೆ ಹುಟ್ಟುವಂತಹ ಜನಗಳಿಗೆ ಉಜ್ಜೀವನಕ್ಕಾಗಿಯೂ ಕೆಲವರು ರಚಿಸಿದ್ದಾರೆ. ಮತ್ತೆ ಕೆಲವರು ತಮ್ಮ ಆಚಾರ್ಯರು ಉಪನ್ಯಾಸಮಾಡಿದ ಅರ್ಥವಿಶೇಷಗಳು ಮಳೆಗಾಲದ ನದಿಗಳಂತೆ ಆ ಕಾಲದಲ್ಲಿ ಕೇಳಿದವರಿಗೆ ಮಾತ್ರ ಉಪಯೋಗವಾಗಿಯೂ ಮುಂದೆ ಜನಿಸುವವರಿಗೆ ಕೇಳುವ ಪುಣ್ಯವಿಲ್ಲದಂತೆ ಆಗುವುದರಿಂದ ಮುಂದೆ ಜನಿಸುವವರೂ ಕೇಳಿ ಸಂತೋಷಿಸುವಂತೆ ಕೆಲವರು ರಚಿಸಿದರು. ಮತ್ತೆ ಕೆಲವರು ತಮ್ಮ ಆಚಾರ್ಯರು ಈ ವ್ಯಾಖ್ಯಾನವನ್ನು ಬರೆದು ಇಡಬೇಕೆಂದು ಆಜ್ಞೆ ಮಾಡಿದ್ದರಿಂದ ಕೆಲವರು ಬರೆದಿದ್ದಾರೆ. ಈ ಪ್ರಕಾರದಲ್ಲಿ ಪೆರಿಯವಾಚ್ಚಾನ್ ಪಿಳ್ಳೆಗಳು ಬರೆದಿರುವುದು, ಸ್ವಾಚಾರ್ಯರಾದ ನಂಪಿಳ್ಳೆಗಳು ನಿಯಮಿಸಿದ್ದರಿಂದ ಎನ್ನುವ ವಿಷಯವು ಈ ಪಾಶುರದಿಂದಲೇ ವ್ಯಕ್ತವಾಗುತ್ತದೆ.

ಈಡು ಮೂವತ್ತಾರುಸಾವಿರ ಗ್ರಂಥದ ಅವತಾರ ಕ್ರಮ:—

"ತೆಳ್ಳಿಯದಾ ನಂಪಿಳ್ಳೈ ಶೆಪ್ಪು ನೆರಿತನ್ನೈ,
ವಳ್ಳಲ್ ವಡಕ್ಕುತ್ತಿರುವೀದಿಪ್ಪಿಳ್ಳೈ,
ಇಂದ ನಾಡರಿಯ ಮಾರನ್ ಮರೈಪ್ಪೊರುಳೈ ನನ್ಗುರೈತ್ತದು,
ಈಡುಮುಪ್ಪತ್ತಾರಾಯಿರಂ || ೪೪ ||

ನಂಪಿಳ್ಳೈ—ನಂಪಿಳ್ಳೆ ಎನ್ನುವ ಆಚಾರ್ಯರು, ತೆಳ್ಳಿಯದಾ ಶೆಪ್ಪು—ತೆಳ್ಳಗೆ ರಚಿಸಿದ, ನೆರಿದನ್ನೈ—ಶ್ರೀ ಸೂಕ್ತಿಕ್ರಮವನ್ನು ಅನುಸರಿಸಿ, ವಳ್ಳಲ್—ಉದಾರರಾದ, ವಡಕ್ಕುತ್ತಿರುವೀದಿಪ್ಪಿಳ್ಳೈ—ವಡಕ್ಕುತ್ತಿರುವೀದಿಪ್ಪಿಳ್ಳೆ ಎನ್ನುವ ಆಚಾರ್ಯರು, ಮಾರನ್ ಮರೈಪ್ಪೊರುಳೈ—ತಿರುವಾಯ್ಮೊಳಿಯ ಅರ್ಥವನ್ನು, ಇಂದನಾಡರಿಯ—ಈ ಲೋಕದಲ್ಲಿರುವವರೆಲ್ಲರೂ ತಿಳಿದುಕೊಳ್ಳುವಂತೆ, ನನ್ಗುರೈತ್ತದು—ರಮಣೀಯವಾಗಿ ರಚಿಸಿದ ವ್ಯಾಖ್ಯಾನವು, ಈಡುಮುಪ್ಪತ್ತಾರಾಯಿರಂ—ಮೂವತ್ತಾರುಸಾವಿರ ಗ್ರಂಥ ಉಳ್ಳದ್ದಾಗಿದೆ.

ನಂಪಿಳ್ಳೆಗಳ ಉಪನ್ಯಾಸವನ್ನು ಹಗಲು ಕೇಳಿದ್ದನ್ನು ರಾತ್ರಿಯ ಕಾಲದಲ್ಲಿ ಪುಸ್ತಕರೂಪದಲ್ಲಿ ಬರೆದು ಇಟ್ಟವರು ವಡಕ್ಕುತ್ತಿರುವೀದಿಪ್ಪಿಳ್ಳೆ ಅವರು. ಇವರು ಪೆರಿಯವಾಚ್ಚಾನ್‌ಪಿಳ್ಳೆಯಂತೆ ನಂಪಿಳ್ಳೆಗಳ ಅಪ್ಪಣೆ ಪ್ರಕಾರ ಬರೆದವರಲ್ಲ. ಆದ

ಕಾರಣದಿಂದಲೇ ಈ ವ್ಯಾಖ್ಯಾನವನ್ನು ನಂಬಿಳ್ಳೈಗಳು ವಡಕ್ಕುತ್ತಿರುವೀದಿಪ್ಪಿಳ್ಳೈಗಳಿಂದ ತೆಗೆದುಕೊಂಡು ರಹಸ್ಯವಾಗಿ ಒಳಗೆ ಭದ್ರವಾಗಿಟ್ಟರು. ನಂತರ ಶ್ರೀರಂಗನಾಥನ ಅಪ್ಪಣೆಯ ಪ್ರಕಾರ ಪ್ರಚಾರಕ್ಕೆ ಅನುಗ್ರಹಿಸಿದರು. ಇಂತಹ ಮಹಿಮೆಯುಳ್ಳ ಆಚಾರ್ಯರು ದಾಸಭೂತರುಗಳಿಗೆ ಅಮೃತದೋಪಾದಿಯಲ್ಲಿರುವ ಮೂವತ್ತಾರಾಯಿರಪ್ಪಡಿಯನ್ನು ರಚಿಸಿದ್ದು ಮಾತ್ರವಲ್ಲದೆ, ಪ್ರಾಣಭೂತರಾಗಿರುವ ಚಂದ್ರಸೂರ್ಯರಂತೆ, ಲೋಕಾಚಾರ್ಯರೆಂದೂ, ಅಳಗಿಯ ಮಣವಾಳಪ್ಪೆರುಮಾಳ್ ನಾಯನಾರ್ ಎಂದೂ ಪ್ರಸಿದ್ಧರಾದ ಎರಡು ಮಕ್ಕಳನ್ನೂ ಅನುಗ್ರಹಿಸಿ ಉಪಕರಿಸಿದ ಕಾರಣ, ಉದಾರರಾದ ವಡಕ್ಕುತ್ತಿರುವೀದಿಪ್ಪಿಳ್ಳೈ ಎಂದು ಹೆಸರಾಯಿತು.

ಪನ್ನೀರಾಯಿರಪ್ಪಡಿ, ಹನ್ನೆರಡುಸಾವಿರ ಗ್ರಂಥದ ಅವತಾರ—

ಅನ್ಪೋಡು ಅೞಗಿಯ ಮಣವಾಳಚ್ಚೀಯರ್,
ಪಿನ್ಬೋರುಂ ಕತ್ತರಿಂದು ಪೇಶುಕೈಕ್ಕಾ,
ತಂಪೆರಿಯ ಪೋದಮುಡನ್ ಮಾರನ್ಮರೈ
ಯಿನ್ಪೊರುಳ್ಚೊನ್ನದು, ಏದಮಿಲ್ ಪನ್ನಿರಾಯಿರಂ ॥ ೪೫ ॥

ಅೞಗಿಯ ಮಣವಾಳಚ್ಚೀಯರ್—ವಾದಿಕೇಸರೀ ಅಳಗಿಯ ಮಣವಾಳಜೀಯರು, ಪಿನ್ಬೋರುಂ—ಮುಂದೆ ಹುಟ್ಟುವವರೂ, ಕತ್ತರಿಂದು—ಅರಿಂದು ಪೇಶುಗೈಕ್ಕಾ—ಜತೆಯೊಡನೆ ಅಭ್ಯಾಸಮಾಡಿ, ಇತರರಿಗೂ ಅಭ್ಯಾಸ ಮಾಡಿಸುವುದಕ್ಕೋಸ್ಕರ, ತಂಪೆರಿಯಪೋದಮುಡನ್—ತಮ್ಮ ಮಹತ್ತರವಾದ ಜ್ಞಾನದಿಂದ, ಮಾರನ್ಮರೈಯಿನ್ ಪೊರುಳೈಚ್ಚೊನ್ನದು—ತಿರುವಾಯ್ಮೊಳಿಗೆ ಪ್ರತಿಪದಾರ್ಥವನ್ನು ರಚಿಸಿದ್ದು, ಏದಮಿಲ್—ಸ್ವಲ್ಪವೂ ದೋಷವಿಲ್ಲದ, ಪನ್ನೀರಾಯಿರಂ—ಹನ್ನೆರಡು ಸಾವಿರ ಗ್ರಂಥವುಳ್ಳ ಗ್ರಂಥವು. ವಾದಿಕೇಸರಿ ಅಳಗಿಯ ಮಣವಾಳಜೀಯರ್ ಸ್ವಾಮಿಗಳು ನಂಜೀಯರ್ ಅವರ ಶಿಷ್ಯಪರಂಪರೆಯಲ್ಲಿ ಮುಳುಗಿ ಅರ್ಥಗಳನ್ನೆಲ್ಲಾ ಶ್ರವಣಮಾಡಿ ಇದ್ದರೂ, ಕೆಲವು ಕಡೆಗಳಲ್ಲಿ ಪೂರ್ವಾಚಾರ್ಯರುಗಳ ವ್ಯಾಖ್ಯಾನಮಾರ್ಗಕ್ಕೆ ಬೇರೆಯಾಗಿ ಬರೆದಿರುವುದೂ ಉಂಟು. ತಿರುವಾಯ್ಮೊಳಿ.ಯಂತೆಯೇ ತಿರುವಿರುತ್ತಕ್ಕೂ ಇವರು ಒಂದು ಚಿಕ್ಕದಾದ ವ್ಯಾಖ್ಯಾನವನ್ನು ರಚಿಸಿದ್ದಾರೆ ಈ ಎರಡು ಗ್ರಂಥಗಳ ವ್ಯಾಖ್ಯಾನದಲ್ಲಿ ಸ್ವತಂತ್ರವಾಗಿ ಕೆಲವು ಅರ್ಥಗಳನ್ನು ಬರೆದಿರುವುದೇ ಕಾರಣವಾಗಿ "ತಂಪೆರಿಯಪೋದಂ" ಸ್ವತಂತ್ರವಾಗಿ ಬೋಧಿಸುವರೆಂದು ಸೂಚಿಸಿದ್ದಾರೆ.

ಕಡೆಯಲ್ಲಿ ಬರುವ "ಮುನ್ನೋರ್ ಮೊಳಿಂದ ಮುರೈತಪ್ಪಾಮಲ್ ಕೇಟ್ಟು" ಎನ್ನುವ ಪಾಶುರದಲ್ಲಿ ಮಣವಾಳ ಮಾಮುನಿಗಳ ಅಭಿಪ್ರಾಯವು ಸ್ವಲ್ಪ ಕುಂದಿ;

ಈ ಆಚಾರ್ಯರು ಪದಾರ್ಥವನ್ನು ರಚಿಸಿದ್ದುದರಿಂದ ಈ ರೀತಿಯಾಗಿ ಹೇಳ ಬೇಕಾಯಿತು.

ಈ ವಾದಿಕೇಸರಿಗಳೂ ಮಹಾಪುರುಷರಾದ್ದರಿಂದ, ಇವರ ವಿಷಯದಲ್ಲಿ ಒಂದು ದೋಷವನ್ನೂ ಹೇಳುವಂತೆ ಇರಕೂಡದೆಂಬ ಅಭಿಪ್ರಾಯವು ಮಣವಾಳ ಮಾಮುನಿಗಳಿಗೆ ಇದ್ದುದರಿಂದ "ಪದವುರೈ" ಎಂಬುದಾಗಿ ಪಾಶುರದಲ್ಲಿ ರಚಿಸಿದ್ದಾರೆ.

ಪೆರಿಯವಾಚ್ಚಾನ್ ಪಿಳ್ಳೈಗಳಿಗೆ ಅಸಾಧಾರಣವಾದ ಮಹಿಮೆಯನ್ನು ತಿಳಿಸುವ ಪಾಶುರ:—

ಪೆರಿಯವಾಚ್ಚಾನ್ ಪಿಳ್ಳೈ ಪಿನ್ಬುಳ್ಳವೈಕ್ಕುಂ,
ತೆರಿಯವಿಯಾಖ್ಯೈಗಳ್ ಶೆಯ್‌ವಾಲ್,
ಅರಿಯ ಅರುಳಿಚ್ಚೆಯಲ್ ಪೊರುಳೈ ಆರಿಯರ್
ಗಟ್ಕು ಇಪ್ಪೋದು, ಅರುಳಿಚ್ಚೆಯಲಾಯ್‌ತ್ತರಿಂದು || ೪೬ ||

ಪೆರಿಯವಾಚ್ಚಾನ್ ಪಿಳ್ಳೈ = ಪೆರಿಯವಾಚ್ಚಾನ್ ಪಿಳ್ಳೈ ಎನ್ನುವ ಆಚಾರ್ಯರು, ಪಿನ್ಬುಳ್ಳವೈಕ್ಕುಂ = ತಿರುವಾಯ್ಮೊಳಿಯೊರತು ಉಳಿದ ದಿವ್ಯಪ್ರಬಂಧಗಳಿಗೆ, ತೆರಿಯ = ತಿಳಿಯುವಂತೆ, ವಿಯಾಖ್ಯೈಗಳ್ ಶೆಯ್‌ವಾಲ್ = ವ್ಯಾಖ್ಯಾನಗಳನ್ನು ರಚಿಸಿದ್ದುದರಿಂದ, ಅರಿಯ ಅರುಳಿಚ್ಚೆಯಲ್ ಪೊರುಳೈ = ದುರ್ಲಭವಾದ ದಿವ್ಯ ಪ್ರಬಂಧಗಳ ಅರ್ಥವನ್ನು, ಇಪ್ಪೋದು = ಈ ಕಾಲದಲ್ಲಿ, ಆರಿಯರ್‌ಗಟ್ಕು = ಆಚಾರ್ಯರುಗಳಿಗೆ, ಅರಿಂದು ಅರುಳಿಚ್ಚೆಯಲ್ ಆಯ್‌ತ್ತು = ತಿಳಿದು ಪಾಠ ಪ್ರವಚನ ಮಾಡುವುದಕ್ಕೆ ಅನುಕೂಲವಾಯಿತು.

ಇವರು ಐದು ಪಾಶುರಗಳಿಂದ ತಿರುವಾಯ್ಮೊಳಿಗೆ ಮಾತ್ರ ಅವತರಿಸಿದ ವ್ಯಾಖ್ಯಾನಗಳನ್ನು ಪ್ರಕಾಶಪಡಿಸಿದರು ನಾಲ್ಕುಸಾವಿರಕ್ಕೂ ವ್ಯಾಖ್ಯಾನವನ್ನು ರಚಿಸಿದವರು ಪೆರಿಯವಾಚ್ಚಾನ್ ಪಿಳ್ಳೈ. ಆದ್ದರಿಂದ ಅವರು ಮಾಡಿದ ಮಹೋಪಕಾರವನ್ನು ಈ ಪಾಶುರದಲ್ಲಿ ಹೇಳುತ್ತಾರೆ.

ಇವರು ನಾಲ್ಕುಸಾವಿರ ಪ್ರಬಂಧಗಳಿಗೂ ವ್ಯಾಖ್ಯಾನಗಳನ್ನು ರಚಿಸದೇ ಇದ್ದರೆ ದಿವ್ಯಪ್ರಬಂಧಗಳ ದಿವ್ಯಾರ್ಥವನ್ನು ತಿಳಿದು ಪ್ರವಚನ ಮಾಡುವುದಕ್ಕೆ ಆಗುತ್ತಿರಲಿಲ್ಲ. ಈ ಮಹಾಚಾರ್ಯರು ಬಹಳ ಕೃಪೆಯಿಂದ ರಚಿಸಿದ್ದರಿಂದಲೇ ಪೆರಿಯವಾಚ್ಚಾನ್ ಪಿಳ್ಳೈಗಳಿಗೆ ಈಚೆಗೆ ಅವತರಿಸಿದವರು ಆಚಾರ್ಯಪೀಠವನ್ನು ಸೇರಿ, ದಿವ್ಯಪ್ರಬಂಧಗಳ ಅರ್ಥಗಳನ್ನು ಪ್ರವಚನಮಾಡಲು ಸೌಕರ್ಯವಾಯಿತೆಂದು ಸತ್ಯವಾಗಿಯೂ ಹೇಳಬಹುದು.

ಪೆರಿಯವಾಚ್ಚಾನ್ ಪಿಳ್ಳೈಗಳು; ಪೆರಿಯಾಳ್ವಾರ್ ತಿರುಮೊಳಿ ರಚಿಸಿದ ವ್ಯಾಖ್ಯಾನವು ಲುಪ್ತವಾದರೂ, ಉಳಿದ ಪ್ರಬಂಧಗಳ ವ್ಯಾಖ್ಯಾನಗಳೇ ನಮಗೆ ರಕ್ಷಕವಾಗಿರುತ್ತವೆಯಾದ್ದರಿಂದ ಈ ರೀತಿ ಮಣವಾಳ ಮಾಮುನಿಗಳು ರಚಿಸಿದರು.

ಕೆಲವು ಪ್ರಬಂಧಗಳಿಗೆ ವ್ಯಾಖ್ಯಾನ ಮಾಡಿದವರುಗಳನ್ನು ತಿಳಿಸುವ ಪಾಶುರ :—

ನಂಜೀಯರ್ ಶೆಯ್ದ ವಿಯಾಕ್ಕಿಯೈಗಳ್—ನಾಲಿರಂಡುಕ್ಕು,
ಎಂಜಾಮೈ ಯಾವೈಕ್ಕುಂ ಇಲ್ಲೈಯೇ,
ತಂಶೀರಾಲ್ ವೈಯಗುರುವಿನ್ ತಂಬಿ ಮನ್ನು
ಮಣವಾಳಮುನಿ, ಶೆಯ್ಯುಮವೈ ತಾಮುಂ ಶಿಲ ॥ ೪೨ ॥

ನಂಜೀಯರ್ ಶೆಯ್ದ=ನಂಜೀಯರು ರಚಿಸಿದ, ವಿಯಾಕ್ಕಿಯೈಗಳ್=ವ್ಯಾಖ್ಯಾನಗಳು; ನಾಲಿರಂಡುಕ್ಕು=ಕೆಲವು ಪ್ರಬಂಧಗಳಿಗೇ ಮಾತ್ರ, ಎಂಜಾಮೈ ಯಾವೈಕ್ಕುಂ ಇಲ್ಲೈಯೇ?=ಒಂದನ್ನೂ ಬಿಡದೇ ಎಲ್ಲಾ ಪ್ರಬಂಧಗಳಿಗೂ ಇಲ್ಲವಷ್ಟೆ? ವೈಯಗುರುವಿನ್ ತಂಬಿ=ಶ್ರೀ ಪಿಳ್ಳೈಲೋಕಾಚಾರ್ಯರ ತಮ್ಮಂದಿರಾದ ಅಳಗಿಯ ಮಣವಾಳಪ್ಪೆರುಮಾಳ್ ನಾಯನಾರರೂ, ಮನ್ನುಮಣವಾಳ ಮುನಿ=ಅಳಗಿಯ ಮಣವಾಳಜೀಯರೂ, ತಂಶೀರಾಲ್—ತಮ್ಮ ಕೃಪೆಯಿಂದ, ಶೆಯ್ಯುಮವೈ ತಾಮುಂ ಶಿಲ=ರಚಿಸಿದ ವ್ಯಾಖ್ಯಾನಗಳು ಕೆಲವುಗಳಿಗೆ ಮಾತ್ರ ಇವೆ.

ತಿರುವಾಯ್ಮೊಳಿಯನ್ನು ಬಿಟ್ಟು ಉಳಿದ ಪ್ರಬಂಧಗಳಿಗೆಲ್ಲಾ ಪೂರ್ಣವಾಗಿ ವ್ಯಾಖ್ಯಾನವನ್ನು ರಚಿಸಿದವರು ಪೆರಿಯವಾಚ್ಚಾನ್ ಪಿಳ್ಳೈ ಎಂಬುದಾಗಿ ಹಿಂದಿನ ಪಾಶುರದಲ್ಲಿ ಹೇಳಿದ ಸಂದರ್ಭದಲ್ಲಿ ಕೆಲವು ದಿವ್ಯಪ್ರಬಂಧಗಳಿಗೆ ವ್ಯಾಖ್ಯಾನವನ್ನು ರಚಿಸಿದ ಆಚಾರ್ಯರುಗಳನ್ನು ತಿಳಿಸುವ ಉದ್ದೇಶದಿಂದ ಈ ಪಾಶುರವು ಅವತರಿಸಿತು. "ನಾಲಿರಂಡುಕ್ಕು" ಎನ್ನುವುದರಿಂದ ಕೆಲವು ಪ್ರಬಂಧಗಳಿಗೆ ಮಾತ್ರ ಎನ್ನುವ ಅರ್ಥವನ್ನು ಸೂಚಿಸಲು ಪ್ರಯೋಗಿಸಲ್ಪಟ್ಟಿದೆ. ನಂಜೀಯರು ರಚಿಸಿದ ವ್ಯಾಖ್ಯಾನಗಳು ತಿರುಪ್ಪಾವೈಗೂ, ಕಣ್ಣಿನುಣ್ ಶಿರುತ್ತಾಂಬಿಗೂ ರಚಿಸಿದ್ದಾಗಿ ತಿಳಿಯುತ್ತದೆಂದು ಪಿಳ್ಳೈಲೋಕಂಜೀಯರ್ ಹೇಳಿದ್ದಾರೆ. ಶ್ರೀ ಪಿಳ್ಳೈ ಲೋಕಾಚಾರ್ಯರ ಸಹೋದರರು, "ಆಚಾರ್ಯ ಹೃದಯ"ವನ್ನು ರಚಿಸಿದ ಅಳಗಿಯ ಮಣವಾಳಪ್ಪೆರುಮಾಳ್ ನಾಯನಾರ್—ತಿರುಪ್ಪಾವೈಗೂ, ಅಮಲನಾದಿಪಿರಾನ್ ಪ್ರಬಂಧಕ್ಕೂ, ಕಣ್ಣಿನುಣ್ ಶಿರುತ್ತಾಂಬಿಗೂ ವ್ಯಾಖ್ಯಾನವನ್ನು ರಚಿಸಿದ್ದಾಗಿ ತಿಳಿಸಿದ್ದಾರೆ.

"ಮನ್ನು ಮಣವಾಳಮುನಿ" ಎನ್ನುವ ಪದವು—ವಾದಿಕೇಸರಿ ಮಣವಾಳ ಜೀಯರು—ಮೂರು ಸಾವಿರ ಪ್ರಬಂಧಗಳಲ್ಲಿ—ತಿರುವಿರುತ್ತ ಒಂದಕ್ಕೇನೇ ಪ್ರತಿ ಪದಾರ್ಥವನ್ನೂ ರಚಿಸಿದ್ದಾಗಿ ತಿಳಿದುಬರುತ್ತದೆ.

ಒಟ್ಟುಸಾರ:—ಈ ಪಾಶುರದಲ್ಲಿ ತಿಳಿಸಿರುವ ಮೂರು ಆಚಾರ್ಯರುಗಳು—ಮೂರು ಸಾವಿರದಲ್ಲಿ ಕೆಲವು ಪ್ರಬಂಧಗಳಿಗೆ ವ್ಯಾಖ್ಯಾನವನ್ನು ರಚಿಸಿರುವರೆಂದು ತಿಳಿಯಿತು. ಪೆರಿಯಾಳ್ವಾರ್ ತಿರುಮೊಳಿಗೆ ತಿರುವಾಯ್‌ಮೊಳಿಪ್ಪಿಳ್ಳೆಯೊಂದು ವ್ಯಾಖ್ಯಾನವನ್ನೂ ರಚಿಸಿರುವರೆಂದು ತಿಳಿಯಿತು.

ಈಡು ಮುಪ್ಪತ್ತಾರುಸಾವಿರ ಪ್ರಬಂಧದ ಪ್ರಚಾರಕ್ರಮ—

ಶೀರಾರ್ ವಡಕ್ಕು ತ್ತಿರುವೀದಿ ಪ್ಪಿಳ್ಳೈ,
ಎಳುದೇರಾರ್ ತಮಿಳ್ ವೇದತ್ತೀಡುದನ್ನೈ,
ತಾರುಮೆನ ವಾಂಗಿಮುನ್ ನಮ್‌ಪಿಳ್ಳೈ ಈಯುಣ್ಣಿ
ಮಾಧವರ್‌ಕ್ಕು, ತ್ತಾಂ ಕೊಡುತ್ತಾರ್ ಪಿನ್ನದನ್ನೈತ್ತಾನ್ ॥ ೪೮ ॥

ಶೀರ್‌ಆರ್ = ಮಹಾ ಗುಣಶಾಲಿಗಳಾದ, ವಡಕ್ಕು ತ್ತಿರುವೀದಿ ಪ್ಪಿಳ್ಳೈ = ವಡಕ್ಕು ತ್ತಿರುವೀದಿ ಪ್ಪಿಳ್ಳೈ ಎನ್ನುವ ಆಚಾರ್ಯರು, ಎಳುದು = ಬರೆದಿದ್ದ, ಏರಾರ್ ತಮಿಳ್ ವೇದತ್ತು ಈಡುದನ್ನೈ = ಶ್ಲಾಘ್ಯವಾದ ತಿರುವಾಯ್‌ಮೊಳಿ ವ್ಯಾಖ್ಯಾನವಾದ ಈಡನ್ನು, ಮುನ್ = ಆ ಕಾಲದಲ್ಲಿ, ನಮ್‌ಪಿಳ್ಳೈ = ನಮ್‌ಪಿಳ್ಳೈಗಳು—ತಾರುಮೆನವಾಂಗಿ = "ಇದನ್ನು ನಮಗೆ ಕೊಡಿರಿ" ಎಂದು ಅವರಿಂದ ತೆಗೆದುಕೊಂಡು, ಪಿನ್ = ಶ್ರೀರಂಗನಾಥನ ಅಪ್ಪಣೆಯಾದಮೇಲೆ, ಅದನ್ನೈ = ಆ ಈಡೆನ್ನುವ ಶ್ರೀಕೋಶವನ್ನು — ಈಯುಣ್ಣಿಮಾಧವರ್ಕ್ = ಈಯುಣ್ಣಿ ಮಾಧವಪ್ಪೆರುಮಾಳ್ ಎಂಬ ಆಚಾರ್ಯರಿಗೆ, ತಾಂ ಕೊಡುತ್ತಾರ್ = ಅವರ ಕೈಯಲ್ಲಿ ಕೊಟ್ಟರು.

ತಿರುವಾಯ್‌ಮೊಳಿ ಪ್ರಬಂಧಕ್ಕೆ ಐದು ವ್ಯಾಖ್ಯಾನಗಳು ಅವತರಿಸಿದ್ದುದನ್ನು ಹಿಂದೆ ಹೇಳಿದರು. ಆ ಐದು ವ್ಯಾಖ್ಯಾನಗಳಲ್ಲಿ 'ಈಡು' ಎನ್ನುವ ವ್ಯಾಖ್ಯಾನವು ಕಾಲಕ್ಷೇಪ ಪ್ರಚಾರದಲ್ಲಿ ಮುಖ್ಯವಾಗಿ ಬಂದಿರೋಣದರಿಂದ, ಈ ವ್ಯಾಖ್ಯಾನವು ಪರಂಪರೆಯಾಗಿ ಬಂದದ್ದನ್ನು ತಿಳಿಸುವ ಉದ್ದೇಶದಿಂದ, ಮಣವಾಳ ಮಾಮುನಿಗಳು ಎರಡು ಪಾಶುರದಿಂದ ಪ್ರಕಾಶಪಡಿಸುತ್ತಾರೆ.

ನಮ್‌ಪಿಳ್ಳೈಗಳ ನಿಯಮದ ಪ್ರಕಾರ ಪೆರಿಯ ವಾಚ್ಚಾನ್ ಪಿಳ್ಳೈಗಳು ರಚಿಸಿದ ಇಪ್ಪತ್ತುನಾಲ್ಕುಸಾವಿರ ಗ್ರಂಥವು ಇದ್ದರೂ — ನಮ್‌ಪಿಳ್ಳೈಗಳು

ಮತ್ತೊಮ್ಮೆ ನಂಪಿಳ್ಳೆ ತಿರುವಾಯ್ಮೊಳಿಯ ಅರ್ಥವನ್ನು ಉಪನ್ಯಾಸ ಮಾಡಿದ ಕಾಲದಲ್ಲಿ ಅದನ್ನು ಶ್ರವಣಮಾಡಿ, ವಡಕ್ಕುತ್ತಿರುವೀದಿಪ್ಪಿಳ್ಳೈ ಬರೆದು, ಈಡು ಮೂವತ್ತಾರುಸಾವಿರ ಗ್ರಂಥಗಳನ್ನಾಗಿ ಮುಗಿಸಿ, ನಂಪಿಳ್ಳೈಗಳ ಸನ್ನಿಧಿಯಲ್ಲಿ ಸಮರ್ಪಿಸಿದರು. ಅದನ್ನು ನಂಪಿಳ್ಳೈಗಳು ನೋಡಿ ಆನೆಗೆ ಅಲಂಕಾರ ಮಾಡಿದಂತೆಯೇ ಕಾಣುತ್ತದೆಂದು ರಮಣೀಯವಾಗಿದೆಯಾದರೂ ನನ್ನ ಅಭಿಪ್ರಾಯವಿಲ್ಲದೆ ಬರೆದಿರಿ—'ಇರಲಿ' ಎಂದು ಹೇಳಿ, ಆ ಪುಸ್ತಕವನ್ನು ಒಳಗಡೆ ಇಟ್ಟರು.

"ನಂಪಿಳ್ಳೈಗಳು ಶ್ರೀರಂಗನಾಥನ ಅಪ್ಪಣೆ ಇಲ್ಲದೆ ಈ ಶ್ರೀಕೋಶವನ್ನು ಕೊಡುವುದಿಲ್ಲ" ಎಂದು ತಿಳಿದು, ಈಯುಣ್ಣಿ ಮಾಧವಪ್ಪೆರುಮಾಳ್ ಎನ್ನುವವರು ಈ 'ಈಡು' ವ್ಯಾಖ್ಯಾನವೇ ಲೋಕದಲ್ಲಿ ಪ್ರಚಾರಕ್ಕೆ ಬರಬೇಕೆಂದು ಆಶೆಯುಳ್ಳವರಾಗಿ, ಅದಕ್ಕೆ ಅನುಕೂಲವಾಗಿ ಭಗವಂತನಿಂದ ಆಜ್ಞೆ ಮಾಡಿಸಬೇಕೆಂದು ಆಶೆಪಟ್ಟು ಅನೇಕ ಸಲ ಶ್ರೀರಂಗನಾಥನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿದರು.

ಶ್ರೀರಂಗನಾಥನೂ ಮನಸ್ಸಂತೋಷದಿಂದ ದಯಮಾಡಿ, ನಂಪಿಳ್ಳೈಗಳಿಗೆ ಅಪ್ಪಣೆ ಮಾಡಲು, ನಂತರ—ಆ ಶ್ರೀಕೋಶವನ್ನು ಈಯುಣ್ಣಿ ಮಾಧವಪ್ಪೆರುಮಾಳ್‌ರವರಿಗೆ ಕೊಟ್ಟರು.

ಆಙ್ಗವರ್ಪಾಲ್ ಪೆತ್ತ ಶಿರಿಯಾೞ್ವಾನಪ್ಪಿಳ್ಳೈ,
ತಾಮ್ ಕೊಡುತ್ತಾರ್ ತಮ್ಮಗನಾರ್ ತಂ ಕೈಯಿಲ್,
ಪಾಙ್ಗುಡನೇ ನಾಲೂರ್ ಪ್ಪಿಳ್ಳೈಕ್ಕು ಅವರ್ ತಾಮ್
ನಲ್ಲಮಗನಾರ್ಕ್ಕು ಅವರ್ ತಾಮ್,
ನೇಶತ್ತೋರ್ಕ್ಕು ಈನ್ದಾರ್ ಅವರೇಮಿಕ್ಕು || ೪೯ ||

ಆಙ್ಗು—ಆ ರೀತಿಯಾಗಿ, ಅವರ್ಪಾಲ್ ಪೆತ್ತ—ಆ ನಂಬಿಳ್ಳೈಗಳವರಿಂದ ಪೊಂದಿದವರಾದ, ಶಿರಿಯಾೞ್ವಾನಪ್ಪಿಳ್ಳೈ—ಶಿರಿಯಾೞ್ವಾನಪ್ಪಿಳ್ಳೈ ಎನ್ನುವ ಆಚಾರ್ಯರು (ಈಯುಣ್ಣಿ ಮಾಧವರು, ತಂಮಗನಾರ್ ತಂಕೈಯಿಲ್—ತಮ್ಮ ಮಕ್ಕಳಾದ ಪದ್ಮನಾಭ ಪ್ಪೆರುಮಾಳ್‌ರವರ ಕೈಯಲ್ಲಿ ಕೊಡುತ್ತಾರ್) (ಆ ಈಡನ್ನು ಕೊಟ್ಟರು). ಅವರ್‌ತಾಮ್—ಆ ಪದ್ಮನಾಭ ಪ್ಪೆರುಮಾಳ್, ಪಾಙ್ಗುಡನೇ—ಮನಸ್ಸಿನಲ್ಲಿ ಬಹಳ ದಯೆಯುಳ್ಳವರಾಗಿ, ನಾಲೂರ್‌ಪಿಳ್ಳೈಕ್ಕು ಕೊಡುತ್ತಾರ್—ನಾಲೂರ್ ಪ್ಪಿಳ್ಳೈ ಎಂಬ ಆಚಾರ್ಯರಿಗೆ ಕೊಟ್ಟರು. ಅವರ್‌ತಾಮ್—ಆ ನಾಲೂರ್ ಪಿಳ್ಳೈಗಳೂ, ನಲ್ಲಮಗನಾರ್ಕ್ಕು—ತಮ್ಮ ಮಕ್ಕಳಾದ, ನಾಲೂರಾಚ್ಚಾನ್ ಪಿಳ್ಳೈಗಳವರಲ್ಲಿ ಕೊಟ್ಟರು. ಅವರೇ—ಆ ನಾಲೂರಾಚ್ಚಾನ್

ಪಿಳ್ಳೈಗಳೀಯರ್ಕು—ಅರ್ಥವಾಗಿ, ಪಾಲೋಡುಮ್ ಈನ್ದಾರ್—ಮುಂದೆ ಮುಂದೆ ಶಿಷ್ಯ ಪರಂಪರೆಗೆ ಕೊಟ್ಟರು.

ಹಿಂದಿನ ಪಾಶುರದಲ್ಲಿ ಹೇಳಿದ "ಈಯುಣ್ಣಿ ಮಾಧವ ಪ್ಪೆರುಮಾಳ್" ಎಂಬುವರು, ತಿರುಮಾಳ್ವಾನ್ ಪಿಳ್ಳೈಯವರಲ್ಲಿ ಕೊಟ್ಟರು. ಆದರೆ ಪಿಳ್ಳೈ ಲೋಕಂ ಜೀಯರು ರಚಿಸಿದ ವ್ಯಾಖ್ಯಾನದಲ್ಲಿ ನಂಪಿಳ್ಳೈಗಳ ಅನುಗ್ರಹದಿಂದ, ತಿರುಮಾಳ್ವಾನ್ ಪಿಳ್ಳೈ ಎಂಬುದಾಗಿ ಹೆಸರುಳ್ಳ ಈಯುಣ್ಣಿ ಮಾಧವ ಪ್ಪೆರುಮಾಳ್‌ರವರಿಗೆ, ಪ್ರಾಪ್ತವಾದ 'ಈಡು ಎಂಬ ಪುಸ್ತಕವು' ಎಂಬುದಾಗಿ ಹೇಳಿರುವುದರಿಂದ "ಈಯುಣ್ಣಿ ಮಾಧವಪ್ಪೆರುಮಾಳಿಗೆ, ಶಿರಿಯಾಳ್ವಾನ್‌ಪಿಳ್ಳೈ" ಎಂದು ಹೆಸರು ಇದ್ದುದಾಗಿಯೂ ಹೇಳಲ್ಪಟ್ಟಿದೆ. ಆದ್ದರಿಂದಲೇ ಅದನ್ನು ಅನುಸರಿಸಿ, ತಿರುವರುಳ್‌ಮಾಲ್, ಶೇನ್ಯಮೊದಲಿ, ಶಠಗೋಪನ್ ಇತ್ಯಾದಿಯಾದ ಈಡಿನ ತನಿಯನ್‌ಗಳಲ್ಲಿ "ಇರುಕ್ಕಣ್ಣಾರ್ ಅಪ್ಪುಡೈಯ ನಮ್ಪಿಳ್ಳೈ ಇವರ್ ತಳಿತ್ತಾರ್ ಪರ್‌ಸ್ಸ ಮಾಧವರ್, ಪದ್ಮನಾಭರ್" ಎಂಬುದಾಗಿ ಇರುವುದು ಕಾಣುತ್ತದೆ. "ವನ್ದೇ ಮಾಧವ ಪದ್ಮನಾಭ ಸುಮನಃ ಕೋಲೇಶ ದೇವಾಧಿಪಾನ್" ಎನ್ನುವ ಸಂಸ್ಕೃತ ತನಿಯನ್ ಸಹ ಇರುತ್ತದೆ.

ಇನ್ನು ಮುಂದೆ ಶ್ರೀ ವಚನಭೂಷಣದ ಮಹಿಮೆ:—

*** ನಮ್ಪೆರುಮಾಳ್, ನಮ್ಮಾಳ್ವಾರ್, ನಂಜೀಯರ್,**
ನಮ್ಪಿಳ್ಳೈ ಎನ್ಬರ್, ಅವರವರ್ ತಂ ಏತ್ತತ್ತಾಲ್,
ಅನ್ಪುಡೈಯೋರ್ ಶಾತ್ತು ತಿರುನಾಮಂಗಳ್ ತಾನ್ ಎನ್ರು
ನನ್ನೆಂಜೇ, ಏತ್ತು ಅದನೈ ಶೊಲ್ಲಿನೀ ಇನ್ರು || ೫೦ ||

ನಂಪೆರುಮಾಳ್ ಎಂಬುದಾಗಿಯೂ, ನಮ್ಮಾಳ್ವಾರ್ ಎಂಬುದಾಗಿಯೂ, ನಂಜೀಯರ್ ಎಂಬುದಾಗಿಯೂ, ನಂಪಿಳ್ಳೈ ಎಂಬುದಾಗಿಯೂ ಇರುವ ಹೆಸರುಗಳಲ್ಲಿ "ನಂ" ಎಂಬ ಪದದೊಡನೆ ಸೇರಿಸಿ ಹೇಳುವುದಕ್ಕೆ ಕಾರಣ ಅವರವರ್ ತಂ ಏತ್ತತ್ತಾಲ್ ಅವರವರ ಹಿರಿಮೆಯನ್ನರಿತವರು, ಅನ್ಪುಡೈಯೋರ್ ಶಾತ್ತು—ಅವರುಗಳ ವಿಷಯದಲ್ಲಿ ಪ್ರೀತಿಯುಳ್ಳ ಮಹನೀಯರು ಇಟ್ಟಿರುವ ತಿರುನಾಮಂಗಳ್ ತಾನೆನ್ರು—ಶ್ಲಾಘ್ಯವಾದ ನಾಮಗಳೆಂಬುದಾಗಿ, ನಲ್‌ನೆಂಜೇ—ಒಳ್ಳೆ ಮನಸ್ಸೇ, ಇನ್ರು—ಈಗ, ಅದನೈ ಶೊಲ್ಲಿ—ಆ ಶ್ಲಾಘ್ಯತೆಯನ್ನು ಹೇಳಿ ಸ್ತೋತ್ರ ಮಾಡು.

ಹಿಂದೆ ಆಳ್ವಾರುಗಳು ರಚಿಸಿದ ಆ ಪ್ರಬಂಧಗಳ ವ್ಯಾಖ್ಯಾನಗಳನ್ನು ರಕ್ಷಿಸಿದ ಆಚಾರ್ಯರುಗಳನ್ನು ಶ್ಲಾಘಿಸಿ, ಆ ವ್ಯಾಖ್ಯಾನಗಳಲ್ಲಿ ಮುಖ್ಯವಾದ

'ಈಡು' ವ್ಯಾಖ್ಯಾನವು ಪರಂಪರೆಯಾಗಿ ಬಂದಿರುವ ಕ್ರಮವನ್ನು ವಿವರವಾಗಿ ತಿಳಿಸಿದರು. ಇನ್ನು ಮುಂದೆ ದಿವ್ಯ ಪ್ರಬಂಧಗಳಿಗೆ ರಕ್ಷಕವಾಗಿ ಪಿಳ್ಳೈಲೋಕಾಚಾರ್ಯರು ರಚಿಸಿದ ಶ್ರೀ ವಚನಭೂಷಣ ದಿವ್ಯಶಾಸ್ತ್ರದ ಮಹಿಮೆಯನ್ನು ವಿವರಿಸುತ್ತಾರೆ. ಅದು ಐವತ್ತುಮೂರನೆ ಪಾಶುರ ಮೊದಲ್ಗೊಂಡು ಹೇಳಲ್ಪಡುತ್ತದೆ. ಆ ಆಚಾರ್ಯರಿಗೆ ಲೋಕಾಚಾರ್ಯರೆಂದು ಹೆಸರು ಬಂದ ಕ್ರಮವನ್ನು ಹೇಳಬೇಕಾಯ್ತು. ಮೊದಲನೆ ನಂಬಿಳ್ಳೈಗಳಿಗೆ ಲೋಕಾಚಾರ್ಯರೆಂಬ ನಾಮವು ಇತ್ತು. ಆ ಹೆಸರನ್ನು ಈ ಪಿಳ್ಳೈ ಲೋಕಾಚಾರ್ಯರಿಗೆ ಇಟ್ಟರು, ಎಂದು ಹೇಳಬೇಕಾಯ್ತು. ಆ ವಿಷಯವು 51–52ನೇ ಪಾಶುರಗಳಲ್ಲಿ ಹೇಳಲ್ಪಡುತ್ತದೆ. ಆ ಪ್ರಸಂಗದಲ್ಲಿ ನಂಬಿಳ್ಳೈ ಎನ್ನುವ ಹೆಸರಿಗೂ ಕಾರಣವನ್ನು ಹೇಳಬೇಕಾಗಿ ಬಂದ ಕಾರಣ ಅವಶ್ಯಕವಾಗಿ ಈ ಪಾಶುರವು ಅವತರಿಸಿದೆ. ನಂಬಿಳ್ಳೈಗಳನ್ನು ಕುರಿತು ಹೇಳುವಾಗಲೇ "ನಂ" ಎಂಬ ಉಪಪದವನ್ನು ಹೊಂದಿದವರಾದ ನಂಪೆರುಮಾಳ್, ನಮ್ಮಾಳ್ವಾರ್, ನಂಜೀಯರ್‌ಗಳು ಜ್ಞಾಪಕಕ್ಕೆ ಬಂದದ್ದರಿಂದ ಎಲ್ಲರನ್ನೂ ಸೇರಿಸಿ ಒಂದು ಕಡೆ ಹೇಳುತ್ತಾರೆ. "ನಂ" ಎಂಬ ವಿಶೇಷಣವನ್ನು ಸೇರಿಸಿ ಹೇಳಲು ಕಾರಣ ಪ್ರೀತಿ ವಿಶೇಷವಾದ್ದರಿಂದ, ಆ ಪ್ರೇಮದಿಂದಲೇ ಒಂದೊಂದು ಕಾಲ ವಿಶೇಷದಲ್ಲಿ ಬುದ್ಧಿಷ್ಟ ಮಹಾತ್ಮರಿಂದ "ನಂಪೆರುಮಾಳ್" ಮೊದಲಾದ ಹೆಸರುಗಳು ಪ್ರಚಾರದಲ್ಲಿ ಬಂದವು. ಶ್ರೀರಂಗನಾಥನಿಗೆ "ನಂಪೆರುಮಾಳ್" ಎನ್ನುವ ಹೆಸರು, ಒಂದು ಕಾಲ ವಿಶೇಷದಲ್ಲಿ ಅರ್ಚಿಯರ್ ಸ್ವಾಮಿಗಳಿಂದ ಇಡಲ್ಪಟ್ಟಿತು. ಶಠಗೋಪರಿಗೆ ನಮ್ಮಾಳ್ವಾರ್ ಎನ್ನುವ ಹೆಸರು ಶ್ರೀರಂಗನಾಥರಿಂದ ಇಡಲ್ಪಟ್ಟಿದ್ದು. ವೇದಾಂತ ಮುನಿಯವರಿಗೆ ನಂಜೀಯರ್ ಎನ್ನುವ ಹೆಸರನ್ನು ಶ್ರೀ ಪರಾಶರಭಟ್ಟರು ಇಟ್ಟರು. ತಿರುಕ್ಕಲಿಕನ್ರಿದಾಸರಿಗೆ ನಂಬಿಳ್ಳೈ ಎನ್ನುವ ಹೆಸರನ್ನು ನಂಜೀಯರ್ ಇಟ್ಟಿದ್ದರು. ಇವುಗಳ ವಿವರಣೆಯನ್ನು ಸಂಪ್ರದಾಯಕ್ರಮದಲ್ಲಿ ತಿಳಿಯಬೇಕು. ಈ ರೀತಿಯಾಗಿ ಹಿಂದಿನ ಆಚಾರ್ಯರುಗಳು ಇವರುಗಳ ಮಹಿಮೆಯನ್ನು ಕಂಡು, ಅದಕ್ಕೆ ಅನುಗುಣವಾಗಿ ಇಟ್ಟಿರುವ ಹೆಸರುಗಳನ್ನು "ಮನಸ್ಸೇ, ನೀನು ಸಂತೋಷದಿಂದ ಅನುಸಂಧಾನಮಾಡಿ ಉಜ್ಜೀವಿಸು" ಎಂದು ಮನಸ್ಸಿಗೆ ಉಪದೇಶ ಮಾಡಿದರು.

ನಂಬಿಳ್ಳೈಗಳಿಗೆ ಲೋಕಾಚಾರ್ಯರೆನ್ನುವ ಹೆಸರು ಬಂದ ಕ್ರಮ :

ತುನ್ನು ಪುಗಳ್. ಕಂದಾಡೈ ತೋಳಪ್ಪರ್ ತಮ್ಮುಗಪ್ಪಾಲ್,
ಎನ್ನ ಉಲಗಾರಿಯನೋ ಎನ್ರುರೈಕ್ಕ,
ಪಿನ್ನೈ ಉಲಗಾರಿಯನೆನ್ನುಂ ಪೇರ್ ನಂಬಿಳ್ಳೈಕ್ಕು ಓಂಗಿ,
ವಿಲಗಾಮಲ್ ನಿನ್ರದು ಎನ್ರುಂ ಮೇಲ್ || ೫೧ ||

ತುನ್ನು ಪುಹಳ್ = ವಿಶೇಷವಾದ ಕೀರ್ತಿಯುಳ್ಳ. ಕಂದಾಡೈ = ಕಂದಾಡೈ ವಂಶದಲ್ಲಿ ಅವತರಿಸಿದ, ತೋಳಪ್ಪರ್ = ತೋಳಪ್ಪರೆನ್ನುವರು, ಉವಪ್ಪಾಲ್ = ತಮ್ಮ ಸಂತೋಷದಿಂದ, ಎನ್ನ ಉಲಹಾರಿಯನೋ ಎನ್ನುಕೈಕ್ಕ = ನೀವು ಏನು ಲೋಕಾಚಾರ್ಯರೋ! ಎಂದು ಸಂತೋಷದಿಂದ ಹೇಳಲು, ಅನ್ನೈ = ಆ ದಿವಸದಿಂದ, ಉಲಹಾರಿಯನ್ ಎನ್ನುಂಪೇರ್ = ಲೋಕಾಚಾರ್ಯರೆಂಬ ಹೆಸರು ನಂಬಿಳ್ಳೈಕ್ಕು ಓಂಗಿ = ನಂಬಿಳ್ಳೈ ಅವರಿಗೆ ಪ್ರಸಿದ್ಧವಾಗಿ, ಮೇಲನ್ನುಂ = ಮುಂದಕ್ಕೆಲ್ಲಾ, ವಿಲಗಾಮಲ್ = ಚಲಿಸದೆ, ನಿನ್ನದು = ಸ್ಥಿರವಾಗಿ ನಿಂತಿತು.

ಮುದಲಿಯಾಂಡಾನ್ ಸ್ವಾಮಿಯವರ ವಂಶದಲ್ಲಿ ಅವತರಿಸಿದ ಆಚಾರ್ಯ ಪುರುಷರೆಂದು ಕೀರ್ತಿಪಡೆದ, ಕಂದಾಡೈ ತೋಳಪ್ಪರ್ ಎನ್ನುವಂತಹ ಸ್ವಾಮಿಗಳು ನಂಬಿಳ್ಳೈಗಳ ಕಾಲದಲ್ಲಿ ಶ್ರೀರಂಗದಲ್ಲಿ ಒಂದು ಬೀದಿಯಲ್ಲಿ ಇರುತ್ತಿದ್ದರು. ಅವರೂ ವಿದ್ವಾಂಸರಾಗಿಯೇ ಇದ್ದರೂ, ಉಳಿದ ಆ ಊರಿನ ಜನಗಳೆಲ್ಲಾ ನಂಬಿಳ್ಳೈಗಳ ತಿರುವಡಿಯನ್ನೇ ಆಶ್ರಯಿಸಿ ಅರ್ಥಗಳನ್ನು ಕೇಳಿದರೇ ಹೊರತು ತೋಳಪ್ಪರನ್ನು ಯಾರೂ ಆಶ್ರಯಿಸಲಿಲ್ಲ. ಆದಕಾರಣ ಅವರಿಗೆ ನಂಬಿಳ್ಳೈಗಳ ವಿಷಯದಲ್ಲಿ ಅಸೂಯೆ ಉಂಟಾಗಿ ನಂಬಿಳ್ಳೈಗಳನ್ನು ದೂಷಿಸುತ್ತಲೇ ಇದ್ದರು. ಆ ತೋಳಪ್ಪರು ಈ ರೀತಿಯಲ್ಲಿ ಇರುವಲ್ಲಿ ಒಂದು ದಿವಸ ಅವರಿಗೆ ಅನುತಾಪ ಉಂಟಾಗಿ ನಂಬಿಳ್ಳೈಗಳ ಬಳಿಗೆ ಬಂದು ಅಪರಾಧ ಕ್ಷಮಾಪಣವನ್ನು ಮಾಡಿಕೊಳ್ಳಬೇಕೆಂದು ಆಶೆ ಉಂಟಾಗಿ ಅವರೂ ಇವರಲ್ಲಿ ಬರಬೇಕೆಂದು, ಹೊರಡಲು ಸಿದ್ಧರಾಗಿರುವ ಸಮಯದಲ್ಲಿ "ಅಯ್ಯೋ, ಶ್ರೇಷ್ಠವಾದ ವಂಶದಲ್ಲಿ ಅವತರಿಸಿದ ಈ ತೋಳಪ್ಪರವರ ಮನಸ್ಸು ನೋಯುವಂತೆ ನಾವು ಹುಟ್ಟಿದೆವಲ್ಲಾ" ಎಂದು ಅವರಲ್ಲಿಗೆ ಹೋಗಿ ಕ್ಷಮಾಪಣೆಯನ್ನು ಬೇಡೋಣವೆಂದು ನಂಬಿಳ್ಳೈಗಳು ಆ ಸಮಯದಲ್ಲಿಯೇ ಆ ತೋಳಪ್ಪರ ಮನೆಯ ಬಾಗಿಲಿನಲ್ಲಿ ಬಂದು ನಿಂತರು. ತೋಳಪ್ಪರೂ ಬಾಗಿಲಲ್ಲಿ ಬರಲು ತೋಳಪ್ಪರಿಗೆ ನಂಬಿಳ್ಳೈಗಳು ಸಾಷ್ಟಾಂಗ ಪ್ರಣಾಮಮಾಡಿ ಕ್ಷಮಾಪಣೆಯನ್ನು ಬೇಡಲು, "ಇದೇನಿದು?" ಆಶ್ಚರ್ಯವಾದ ಗುಣ! ಎಂದು ಸಂತೋಷಿಸಿದ ತೋಳಪ್ಪರವರು ನಂಬಿಳ್ಳೈಗಳನ್ನು ನೋಡಿ ನೀವೇನು "ಲೋಕಾಚಾರ್ಯ"ರಲ್ಲವೇ ಎಂದು ಸಂತೋಷದಲ್ಲಿ ಮುಗ್ಧರಾಗಿ ಹೇಳಿದ್ದರಿಂದ ತದಾರಭ್ಯ ನಂಬಿಳ್ಳೈಗಳಿಗೆ "ಲೋಕಾಚಾರ್ಯ"ರೆಂಬ ಪ್ರಸಿದ್ಧಿ ಉಂಟಾಯಿತು.

ವಡಕ್ಕುತ್ತಿರುವೀದಿಪ್ಪಿಳ್ಳೈಗಳು, ತಮ್ಮ ಮಕ್ಕಳಿಗೆ ತಮ್ಮ ಗುರುಗಳ ಹೆಸರನ್ನೇ ನಾಮಕರಣ ಮಾಡಿದ ವಿಷಯ :

ಪಿನ್ನೈ ವಡಕ್ಕು ತ್ತಿರುವೀದಿಪ್ಪಿಳ್ಳೈ,
ಅನ್ಬಾಲ್ ಅನ್ನ ತಿರುನಾಮತ್ತೈ ಆದರಿತ್ತು,
ಮನ್ನು ಪುಹೞ್. ಮೈಂದರ್ಕ್ಕುಚ್ಚಾತ್ತುಹೈಯಾಲ್ ವನ್ದು
ಪರಂದದು, ಎಙ್ಗುಂ ಅನ್ದತ್ತಿರುನಾಮಂ ಇಂಗು ॥ ೪೬ ॥

ಪಿನ್ನೈ—ಹಿಂದೆ ಒಂದಾನೊಂದು ಕಾಲದಲ್ಲಿ, ವಡಕ್ಕುತ್ತಿರುವೀದಿಪ್ಪಿಳ್ಳೈ— ನಂಬಿಳ್ಳೈಗಳ ಶಿಷ್ಯರಾದ ವಡಕ್ಕುತ್ತಿರುವೀದಿಪಿಳ್ಳೈ ಎನ್ನುವವರು, ಅನ್ಬಾಲ್— ಆಚಾರ್ಯರಲ್ಲಿರುವ ಭಕ್ತಿ ವಿಶೇಷದಿಂದ, ಅನ್ನತಿರುನಾಮತ್ತೈ—ಆ ಲೋಕಾಚಾರ್ಯ ರೆಂಬ ಹೆಸರನ್ನು, ಮನ್ನುಪುಹೞ್ಮೈಂದರ್ಕ್ಕು—ಯಶಸ್ವಿಯಾದ ತಮ್ಮ ಮಗನಿಗೆ, ಆದರಿತ್ತು ಚಾತ್ತುಹೈಯಾಲ್—ಆಶೆಪಟ್ಟು ನಾಮಕರಣ ಮಾಡಿದ್ದರಿಂದ, ಇಂಗುಂ— ಈ ಲೋಕದಲ್ಲಿ ಅನ್ದತ್ತಿರುನಾಮಂ—ಲೋಕಾಚಾರ್ಯರೆಂಬ ಈ ನಾಮವು, ಎಂಗುಂ ವಂದು ಪರಂದದು—ಎಲ್ಲೆಲ್ಲಿಯೂ ಅವರ ಹೆಸರಾಗಿ ಹರಡಿತು.

ವಡಕ್ಕುತ್ತಿರುವೀಧಿಪಿಳ್ಳೈಗಳು ನಂಬಿಳ್ಳೈಗಳ ಬಳಿ ಕಾಲಕ್ಷೇಪ ಮಾಡಿ ಕೊಂಡಿರಲು, ಆಚಾರ್ಯಾನುಗ್ರಹದಿಂದ ಒಬ್ಬ ಕುಮಾರರು ಅವತರಿಸಲು, ಅವರಿಗೆ ಲೋಕಾಚಾರ್ಯರೆಂದು ನಾಮಕರಣ ಮಾಡಿದ್ದರಿಂದ "ಲೋಕಾಚಾರ್ಯ" ರೆಂಬ ಹೆಸರು ಪ್ರಸಿದ್ಧವಾಯಿತು.

ಈ ಪಾಶುರದಿಂದ ಮೊದಲು ಎರಡು ಪಾಶುರಗಳು ಶ್ರೀ ವಚನಭೂಷಣದ ಮಹಿಮೆಯನ್ನು ತಿಳಿಸುತ್ತವೆ.

*** ಅನ್ನಪುಹೞ್ ಮುಡುಂಬೈ ಅಣ್ಣಲ್. ಉಲಹಾಶಿರಿಯನ್,**
ಇನ್ನರುಳಾಲ್ ಶೆಯ್ದಕಲೈ ಯಾವೈಯಿಲುಂ, ಉನ್ನಿಲ್
ತಿಹೞ್. ವಚನಭೂಷಣತ್ತಿನ್ ಶೀರ್ಮೈಕ್ಕು ಒನ್ರುಕ್ಕಿಲ್ಲೈ,
ಪುಹೞಲ್ಲ ಇವ್ವಾರ್ತ್ತೈ ಮೆಯ್ ಇಪ್ಪೋದು ॥ ೪೭ ॥

ಅನ್ನಪುಹೞ್—ಆ ರೀತಿಯಾದ ಕೀರ್ತಿಯುಳ್ಳವರಾಗಿ, ಮುಡುಂಬೈ ಅಣ್ಣಲ್—ಮುಡುಂಬೈ ಎಂಬ ನಗರಕ್ಕೆ ನಿರ್ವಾಹಕರಾದ, ಉಲಹಾಶಿರಿಯನ್—ಸ್ವಾಮಿ ಪಿಳ್ಳೈ ಲೋಕಾಚಾರ್ಯರು, ಇನ್ನರುಳಾಲ್ಶೆಯ್ದ—ಬಹಳ ಕೃಪೆಯಿಂದ ರಚಿಸಿದ, ಕಲೈಯಾವೈಯಿಲುಂ—ಎಲ್ಲಾ ರಹಸ್ಯ ಗ್ರಂಥಗಳ ಮಧ್ಯದಲ್ಲಿ, ಉನ್ನಿಲ್—ಪರಿಶೀಲಿಸಿದ್ದರಲ್ಲಿ, ತಿಹೞ್—ವಿಶೇಷವಾಗಿ ಪ್ರಕಾಶಿಸುವ, ವಚನಭೂಷಣತ್ತಿನ್ ಶೀರ್ಮೈಕ್ಕು—ಶ್ರೀ ವಚನಭೂಷಣಕ್ಕೆ ಇರುವ ಮಹಿಮೆಯು, ಒನ್ರುಕ್ಕಿಲ್ಲೈ ಮತ್ತೆ

ಯಾವುದಕ್ಕೂ ಇಲ್ಲ, ಇಪ್ಪೊೞುದು ಇವ್ವಾರ್ತ್ತೈ — ಈಗ ಹೇಳುವ ಈ ಮಾತು ಮಿಹೈ ಅಲ್ಲ — ಅತಿಶಯವಾದ ಮಾತಲ್ಲ. ಮೆಯ್ — ಸತ್ಯವಾದ ಮಾತು (ಎಂದರ್ಥ).

ಶ್ರೀವಚನಭೂಷಣವೆಂಬ ಹೆಸರು ಬಂದ ಕ್ರಮ :

ಮುನ್ನಂ ಕುರವೋರ್ ಮೊೞಿಂದ ವಚನಂಗಳ್ ತನ್ನೈ
ಮಿಹಕ್ಕೊಂಡು ಕಱ್ಱೋರ್ ತಮ್ಮುಯಿರ್ಕ್ಕುಂ, ಮಿನ್ನಣಿಯಾ
ಚ್ಚೇರ ಚ್ಚಮೈತ್ತವರೇ, ಶೀರ್ ವಚನಭೂಷಣಮೆನ್
ಪೇರ್, ಇಕ್ಕಲೈಕ್ಕಿಟ್ಟಾರ್ ಪಿನ್ || ೫೩ ||

ಮುನ್ನಂ ಕುರವೋರ್ — ಪೂರ್ವಾಚಾರ್ಯರುಗಳು, ಮೊೞಿಂದ ವಚನಂಗಳ್ ತನ್ನೈ — ಶ್ರೀ ಸೂಕ್ತಿಗಳನ್ನು, ಮಿಹಕ್ಕೊಂಡು — ವಿಶೇಷವಾಗಿ ಹೇಳಿ, ಕಱ್ಱೋರ್, ವಿದ್ಯೆಯಲ್ಲಿ ವಿಶೇಷ ಮಹಿಮೆಯನ್ನು ಹೊಂದಿರುವ, ತಮ್ಮುಯಿರ್ಕ್ಕುಂ — ಆತ್ಮಗಳಿಗೆ. ಮಿನ್ನಣಿಯಾ — ಶ್ಲಾಘ್ಯವಾದ ಅಲಂಕಾರವಾಗಿ, ಶೇರಚ್ಚಮೈತ್ತವರೇ — ಸೇರಿಸಿ ರಚಿಸಿದ ಆ ಆಚಾರ್ಯರೇ, ಪಿನ್ — ನಂತರ, ಇಕ್ಕಲೈಕ್ಕು — ಈ ಗ್ರಂಥಕ್ಕೆ, ಶೀರ್ ವಚನಭೂಷಣ ಮೆನ್ನುಂ ಪೇರ್ — ಶ್ರೀ ವಚನಭೂಷಣವೆಂಬ ಹೆಸರನ್ನು, ಇಟ್ಟಾರ್ — ಇರಿಸಿದರು (ನಾಮಕರಣ ಮಾಡಿದರು). ಮಣವಾಳ ಮಾಮುನಿಗಳು ತಾವೇ ಶ್ರೀ ವಚನಭೂಷಣದ ಅವತಾರಿಕೆಯಲ್ಲಿ ಹೀಗೆ ಹೇಳಿದ್ದಾರೆ:— ರತ್ನದಿಂದ ಮಾಡಿದ ಆಭರಣಕ್ಕೆ ರತ್ನಭೂಷಣವೆಂದು ಹೆಸರಿರುವಂತೆ, ಪೂರ್ವಾಚಾರ್ಯರುಗಳ ಶ್ರೀ ಸೂಕ್ತಿಯಿಂದ ತುಂಬಿದ್ದಾಗಿಯೂ ಇರುವ ಇವುಗಳನ್ನು ಕಂಠಪಾಠಮಾಡಿ ಅನುಸಂಧಾನ ಮಾಡುವವರಿಗೆ ಆಭರಣದಂತೆ ಈ ಗ್ರಂಥವು ಪ್ರಕಾಶಿಸೋಣವಾದರಿಂದಲೂ ಇದಕ್ಕೆ "ವಚನಭೂಷಣ"ವೆಂದು ಹೆಸರಾಯಿತು.

ಆರ್ ವಚನಭೂಷಣತ್ತಿನ್ ಆೞ್ - ಪೊರುಳೆಲ್ಲಾಂ
ಅಱಿವಾರ್? ಆರದು ಶೊನ್ನೇರಿಲ್ ಅನುಟ್ಟಿಪ್ಪಾರ್?
ಓರೊರುವರ್ ಉಣ್ಡಾಹಿಲ್ ಅತ್ತನೈಕಾಣ್ ಉಳ್ಳಮೇ
ಎಲ್ಲಾರ್ಕ್ಕುಂ ಅಣ್ಡಾದದನ್ಱೋ ಅದು || ೫೪ ||

ವಚನಭೂಷಣತ್ತಿನ್ — ಶ್ರೀ ವಚನಭೂಷಣದ, ಆೞ್ ಪೊರುಳೆಲ್ಲಾಂ — ಗಂಭೀರವಾದ — ಅರ್ಥಗಳನ್ನೆಲ್ಲಾ, ಅಱಿವಾರ್ ಆರ್ — ತಿಳಿಯುವಂತಹವರು ಯಾರು? (ಯಾರೂ ಇಲ್ಲವೆಂದರ್ಥ). ಅದು ಶೊನ್ನೇರಿಲ್ — ಆ ಶ್ರೀ ವಚನ ಭೂಷಣದಲ್ಲಿ ಹೇಳಿರುವ ಎಲ್ಲೆಕಟ್ಟನ್ನು, ಅನುಟ್ಟಿಪ್ಪಾರ್ ಆರ್ — ಅನುಷ್ಠಾನದಲ್ಲಿ

ತರುವವರು ಯಾರು? ಓರೊರುವನ್ ಉಂಡಾಹಿಲ್... ಯಾರಾದರೂ ಒಬ್ಬರು ಕೇಳ್ಗಡೆಯಾದರೆ ಆಗಬಹುದೇ ಹೊರತು, ಅದು ಎಲ್ಲಾರ್ಕ್ಕುಂ—ಅದು ಎಲ್ಲರಿಗೂ ಸಾಧ್ಯವಿಲ್ಲ. ಅಸ್ಸಾದಸಮ್ಮೋ—ಅದನ್ನು ಒಬ್ಬರಿಗೂ ತಿಳಿಯುವುದಕ್ಕಾಗಲೀ, ಅನುಷ್ಠಿಸುವುದಕ್ಕಾಗಲೀ ಆಗಲಾರದಲ್ಲವೇ?

ಶ್ರೀ ವಚನಭೂಷಣವೆನ್ನುವಂತಹ ಮಹತ್ತರವಾದ ವಿಶೇಷಾಂಶಶಾಸ್ತ್ರವನ್ನು ಸೂತ್ರರೂಪವಾಗಿ ರಚಿಸಿರುವುದರಿಂದ ಅದರ ಅರ್ಥವನ್ನು ತಿಳಿಯುವುದು ಕಷ್ಟ. ವ್ಯಾಖ್ಯಾನಗಳನ್ನು ಮುಂದಿಟ್ಟುಕೊಂಡು ಒಂದುವೇಳೆ ತಿಳಿದುಕೊಂಡರೂ, ಆ ರೀತಿಯಲ್ಲಿ ಅನುಷ್ಠಾನದಲ್ಲಿ ತರುವುದು ಇನ್ನೂ ಕಷ್ಟಸಾಧ್ಯ. ಈ ರೀತಿಯಾದ ಕಷ್ಟಸಾಧ್ಯ ಶಾಸ್ತ್ರವನ್ನು ಆಚಾರ್ಯರು ರಚಿಸಬಹುದೋ ಎಂದರೆ ಸರ್ವಥಾ ಜನಗಳಿಲ್ಲ ಎಂದರ್ಥವಲ್ಲ. ಗೀತೆಯಲ್ಲಿ "ಮನುಷ್ಯಾಣಾಂ ಸಹಸ್ರೇಷು ಕಶ್ಚಿತ್ ಯತತಿ ಸಿದ್ಧಯೇ। ಯತತಾಮಪಿ ಸಿದ್ಧಾನಾಂ ಕಶ್ಚಿತ್ ಮಾಂ ವೇತ್ತಿ ತತ್ತ್ವತಃ" ಎಂದು ಹೇಳಿರುವಂತೆ ಆ ಶಾಸ್ತ್ರದ ಅರ್ಥವಿಶೇಷ ಆ ರೀತಿಯಲ್ಲಿದೆ ಎನ್ನುವ ವಿಷಯವು ಹೇಳಲ್ಪಟ್ಟಿದೆ. ಅನುಷ್ಠಿಸಲು ಆಗದೇ ಇರುವ ವಿಷಯವೇನೆಂದರೆ— ನಮಗೆ ಯಾರಾದರೂ ದ್ರೋಹ ಮಾಡಿದರೆ ಅವರ ವಿಷಯದಲ್ಲಿ ಸಹನೆಯೂ, ಪ್ರೀತಿಯೂ, ನಗುಮುಖದೊಡನೆ ಮಾತನಾಡುವುದೂ, ಬಹಳ ಉಪಕಾರ ಮಾಡಿದರೆಂಬ ಭಾವನೆಯೂ ಇರಬೇಕೆಂಬುದಾಗಿ ಹೇಳಿರುವುದರಿಂದಲೂ, ಮದುವೆ ಮಾಡಿಕೊಂಡು ಹೆಂಡತಿಯೊಡನೆ ಸುಖಾನುಭವವನ್ನು ಮಾಡುವುದು ಪರದಾರ ಪರಿಗ್ರಹದಂತೆ ನರಕಾವಹವಲ್ಲವಿದ್ದರೂ, ವೇದಾಂತ ವಿರುದ್ಧವಾಗಿರುವುದು ಶಿಷ್ಯರು ಹಾಗೆ ಸಂಸಾರಿಯಾಗಿರುವುದನ್ನು ಒಪ್ಪುವುದಿಲ್ಲವಾದ್ದರಿಂದ ಸಂಸಾರಿಯಾಗಿರಕೂಡದೆಂಬ ವಿಷಯವು ಶ್ರೀ ವಚನಭೂಷಣದಲ್ಲಿ ಹೇಳಲ್ಪಟ್ಟಿರುತ್ತದೆ. ಅದ್ದರಿಂದ ಈ ಅನುಷ್ಠಾನವನ್ನು ಆಚರಣೆಯಲ್ಲಿ ತರುವವರುಂಟೇ?

ಇಂತಹ ವಿಷಯಗಳಂತೆ, ಅನೇಕ ವಿಷಯಗಳಿರುವುದರಿಂದ, ಅದಕ್ಕೆ ಅಧಿಕಾರಿಗಳು ವಿರಳ.

ಶ್ರೀ ವಚನಭೂಷಣದ ಅರ್ಥವನ್ನು ತಿಳಿದು ಆ ರೀತಿ ನಡೆಯಬೇಕೆಂಬ ಆಸೆ ಇದ್ದರೇನೇ ಅದು ಉಜ್ಜೀವನಹೇತು.

ಉಯ್ಯನಿನೈವುಡೈಯೀರ್ ಉಂಗಳುಕ್ಕುಚ್ಚೊಲ್ಲುಗಿನ್ರೇನ್
ವೈಯಗುರುಮುನ್ನಂ ವಾಯ್ ಮೊಳಿಂದ
ಶೆಯ್ಯಕಲೈಯಾಂ ವಚನಭೂಷಣತ್ತಿನ್ ಆಳ್ ಪೊರುಳೈ
ಕತ್ತದನುಕ್ಕಂ ನಿಟ್ಟೈಯುಡನ್ ನಿಲ್ಲುಮಿನ್ನು ॥ ೫೬ ॥

ಉಯ್ಯ—ಉಜ್ಜೀವಿಸಬೇಕೆಂದು. ನಿನೈವುಡೈಯೀರ್—ಮನಸ್ಸುಳ್ಳವರೇ. ಉಂಗಳುಕ್ಕು—ನಿಮ್ಮಗಳಿಗೆ, ಶೊಲ್ಲುಹಿನ್ರೇನ್=ಹೇಳುತ್ತೇನೆ. ವೈಯಗುರು—ಲೋಕಾಚಾರ್ಯರು, ಮುನ್ನಂ—ಹಿಂದಿನ ಕಾಲದಲ್ಲಿ, ವಾಯ್‌ಮೊಳಿಂದ—ರಚಿಸಿದ, ಶೆಯ್ಯಕಲೈಯಾಂ=ಸುಂದರವಾದ ಕೃತಿಯಾದ, ವಚನಭೂಷಣತ್ತಿನ್—ಶ್ರೀವಚನಭೂಷಣದ ಆಳ್‌ಪೊರುಳೈ—ಗಂಭೀರವಾದ ಅರ್ಥವನ್ನು, ಕತ್ತು—ಗುರುಗಳ ಬಳಿ ಕಲಿತು. ಅದನುಕ್ಕೇತ್ತ ನಿಲೈಯಿಲ್=ಅದಕ್ಕೆ ತಕ್ಕ (ಆ ಜ್ಞಾನಕ್ಕೆ ಅನುಗುಣವಾದ) ನಿಷ್ಠೆಯಲ್ಲಿ (ರೀತಿಯಲ್ಲಿ), ಆರಿಂದು ನಿಲ್ಲುಂ—ಅವರ ಗೌರವವನ್ನರಿತು ನಿಲ್ಲಿರಿ. ಆಚಾರ್ಯಾಭಿಮಾನನಿಷ್ಠರಾದರೆ ನೀವು ಉಜ್ಜೀವಿಸುವಿರಿ ಎಂದು ತಾತ್ಪರ್ಯ.

ಶ್ರೀವಚನಭೂಷಣವನ್ನು ಅಭ್ಯಾಸ ಮಾಡದವರಲ್ಲಿ ಕ್ಲೇಶ ಪಡೋಣ—

ದೇಶಿಕರ್ ಪಾಲ್ ಕೇಟ್ಟ ಶೆಳುಂ ಪೊರುಳೈ,
ಚಿನ್ದೈದನ್ನಿಲ್ ಮಾಶರವೇ ಊನ್ರ ಮನನಮ್ ಶೈದು,
ಆಶರಿಕ್ಕ ವಲ್ಲಾರ್‌ಗಳ್ ತಾಮ್ ವಚನಭೂಷಣತ್ತಿನ್
ವಾನ್ ಪೊರುಳೈ, ಕಲ್ಲಾದದೆನ್ನೋ ಕವರ್ನ್ದು ॥ ೫೬ ॥

ದೇಶಿಕರ್ ಪಾಲ್‌ಕೇಟ್ಟ—ಆಚಾರ್ಯರ ಬಳಿ ಕೇಳಿದ, ಶೆಳುಂಪೊರುಳೈ=ಶ್ಲಾಘ್ಯವಾದ ಅರ್ಥವನ್ನು, ಚಿಂದೈತನ್ನಿಲ್=ಹೃದಯದಲ್ಲಿ ಮಾಶರವೇ=ಸಂಶಯವಿಲ್ಲದೆ, ಊನ್ರ—ನೆಟ್ಟು, ಮನನಂಶೈದು—ಚಿಂತನೆಮಾಡಿ, ಆಶರಿಕ್ಕವಲ್ಲಾರ್‌ಗಳ್ ತಾಮ್=ಅನುಷ್ಠಿಸಬಲ್ಲ ಅಧಿಕಾರಿಗಳು, ವಚನಭೂಷಣತ್ತಿನ್—ವಚನಭೂಷಣದ, ವಾನ್‌ಪೊರುಳೈ=ದಿವ್ಯಾರ್ಥಗಳನ್ನು, ಕವರ್ನ್ದು=ಪ್ರೀತಿಯೊಡನೆ, ಕಲ್ಲಾದದೆನ್ನೋ=ಅಭ್ಯಾಸಮಾಡದಿರುತ್ತಾರಲ್ಲಾ, ಅಯ್ಯೋ! ಇದಕ್ಕೆ ಕಾರಣವೇನು?

ಶ್ರೀವಚನಭೂಷಣದ ವ್ಯಾಖ್ಯಾನವನ್ನು ಅಭ್ಯಾಸ ಮಾಡುವುದು ಸೂಕ್ತವಾಗಿದೆ—

ಶಚ್ಚಂಪಿರದಾಯಂ ತಾಮುಡೈಯೋರ್ ಕೇಟ್ಟಕ್ಕಾಲ್,
ಮೆಚ್ಚುಂ ವಿಯಾಕ್ಕಿಯೈತಾನ್ ಉಣ್ಡಾಗಿಲ್
ನಚ್ಚಿ ಅದಿಕರಿಯುಂ ನೀರ್ ವಚನಭೂಷಣತ್ತುಕ್ಕತ್ತ
ಮತಿಯುಡೈಯೀರ್, ಮತ್ತಿಯತ್ತರಾಯ್ ॥ ೫೭ ॥

ವಚನಭೂಷಣತ್ತುಕ್ಕು ಅತ್ತ ಮದಿಯುಡೈಯೀರ್ — ಶ್ರೀ ವಚನಭೂಷಣದಲ್ಲಿ ಸ್ಥಿರವಾದ ಬುದ್ಧಿಯುಳ್ಳವರೇ, ಸಚ್ಚಂಪ್ರದಾಯಂ ಉಡೈಯೋರ್‌ತಾಮ್ = ಸತ್ಸಂಪ್ರದಾಯದ ದಾರಿಯಲ್ಲಿ ನಡೆಯುವ ಮಹನೀಯರುಗಳು, ಕೇಟ್ಟಕ್ಕಾಲ್ = ಕೇಳಿದ್ದೇ ಆದರೆ; ಮೆಚ್ಚುಮ್ — ಶ್ಲಾಘಿಸುವಂಥಾ, ವಿಯಾಕ್ಕಿಯೈಗಳ್ — ವ್ಯಾಖ್ಯಾನಗಳು, ಉಂಡಾಗಿಲ್ = ಎಷ್ಟು ಅವತರಿಸಿದರೂ, ನಚ್ಚಿ = ಆಸೆಯಿಂದ, ನೀರ್ ಮತ್ಸರಮುತ್ತರಾದರ್ — ನೀವು ಮಧ್ಯಸ್ಥರುಗಳಾಗಿ, ಅಧಿಕರಿಯುಂ = ಅಭ್ಯಸಿಸಿರಿ

ಶ್ಲಾಘ್ಯ ಗ್ರಂಥ ಒಂದು ಅವತರಿಸಿದರೆ, ಆ ಗ್ರಂಥಕ್ಕೆ ಅನೇಕರು ವ್ಯಾಖ್ಯಾನವನ್ನು ರಚಿಸಲು ಆಸೆಪಡುವುದು ಲೋಕಸ್ವಭಾವವಾಗಿದೆ. ಆದಕಾರಣದಿಂದಲೇ, ಶ್ರೀ ವಚನಭೂಷಣ ದಿವ್ಯಶಾಸ್ತ್ರಕ್ಕೆ ಅನೇಕ ವ್ಯಾಖ್ಯಾನಗಳನ್ನೂ ಮಾಡಬಹುದು, ಅವುಗಳನ್ನೆಲ್ಲಾ ಅಭ್ಯಾಸಮಾಡಬೇಕು. ಆದರೆ ಅವು ಸತ್ಸಂಪ್ರದಾಯಸಾರವನ್ನು ತಿಳಿದಿರುವವರು ಒಪ್ಪಿಕೊಳ್ಳುವಂತೆ ಇರಬೇಕು. ಆ ರೀತಿಯಾದ ವ್ಯಾಖ್ಯಾನಗಳು ಎಷ್ಟು ಅವತರಿಸಿದರೂ, ಅವುಗಳನ್ನೆಲ್ಲವನ್ನೂ, ಅಸೂಯೆ ಇಲ್ಲದೆ ಅಭ್ಯಾಸ ಮಾಡಬೇಕೆಂದು ನಮ್ಮಂಥಾವರುಗಳನ್ನು ನೋಡಿ ಹೇಳಿದ ವಿಷಯವಾಗಿದೆ.

ಶ್ರೀ ವಚನಭೂಷಣದ ವಿಶೇಷವಾದ ರುಚಿಯನ್ನು ತಿಳಿಸುವ ಪದ್ಯವು:

ಶೀರ್ ವಚನಭೂಷಣತ್ತಿನ್ ಶೆಮ್ಪೊರುಳೈ,
ಶಿನ್ದೈದನ್ನಾಲ್ ತೇರಿಲುಮಾಮ್ ವಾಯ್
ಕೊಂಡು ಶೆಪ್ಪಿಲುಮಾಮ್, ಆರಿಯರ್‌ಗಾಳ್!
ಎನ್ದನಕ್ಕು ನಾಳುಂ ಇನಿದಾಗಾ ನಿನ್ರದು ಐಯೋ,
ಉನ್ದಮಕ್ಕು ಎಪ್ಪಡಿಯೋ ಉಳದಾಮ್ || ೫೯ ||

ಆರಿಯರ್‌ಗಾಳ್ — ಓ ಮಹನೀಯರುಗಳೇ, ಶೀರ್ ವಚನಭೂಷಣತ್ತಿನ್ — ಶ್ರೀ ವಚನಭೂಷಣದ, ಶೆಂಪೊರುಳೈ — ರಮಣೀಯವಾದ ಅರ್ಥವನ್ನು, ಶಿನ್ದೈ ತನ್ನಾಲ್ ತೇರಿಲುಮಾಮ್. ಮನಸ್ಸಿನಲ್ಲಿ ವಿಚಾರಮಾಡಿ, ಅರ್ಥವನ್ನು ಅರಿತು ನೋಡುವುದೇ ಆಗಲಿ, ವಾಯ್‌ಕೊಂಡು ಶೆಪ್ಪಿಲುಮಾಮ್. ಬಾಯಿಯಿಂದ ಹೇಳುವುದೇ ಆಗಲಿ, ಎನ್ ತನಕ್ಕು — ನನಗೆ ಕೂಡ, ನಾಳುಂ ಇನಿದಾಗಾ ನಿನ್ರದು = ಪ್ರತಿಕ್ಷಣದಲ್ಲೂ ರುಚಿಯಾಗುತ್ತಿದೆ. ಐಯ್ಯೋ! ಏನು ಆನಂದ! ಉನ್ದಮಕ್ಕು ಎಪ್ಪಡಿಯೋ ಉಳದಾಂ = ನಿಮ್ಮಗಳಿಗೆ ಯಾವ ರೀತಿಯಾದ ಆನಂದವಾಗುತ್ತದೆಯೋ

ಮಣವಾಳ ಮಹಾಮುನಿಗಳು ತಮ್ಮ ನೈಚ್ಯಾನುಸಂಧಾನದಿಂದ ಹೇಳುತ್ತಾರೆ:— ಅಲ್ಪಜ್ಞಾನವಾದ ನನಗೇನೇ ಶ್ರೀ ವಚನಭೂಷಣದ ಭೋಗ್ಯತೆಯನ್ನು

ಇಷ್ಟೆಂದು ಹೇಳಲು ಆಗುವುದಿಲ್ಲವಲ್ಲಾ! ಮಹಾಪ್ರಾಜ್ಞರಾದವರು ಇವರ ರುಚಿಯಲ್ಲಿ ಯಾವ ರೀತಿ ಮುಳುಗಿರುವರೋ! ಎಂದು ಆಶ್ಚರ್ಯಪಡುತ್ತಾರೆ.

ತನ್ ಗುರುವಿನ್ ತಾಳಿಣೈಗಳ್ ತನ್ನಿಲ್ ಅನ್ಬೊನ್ರಿಲ್ಲಾದಾರ್,
ಅನ್ಬುತನ್ಪಾಲ್ ಶೆಯ್ದಾಲುಂ ಅಂಬುಯೈಕ್ಕೋನ್,
ಇನ್ಬಮಿಗು ವಿಣ್ಣಾಡು ತಾನಳಿಕ್ಕ ವೇಂಡಿಯಿರಾನ್,
ಆದಲಾಲ್, ನಣ್ಣಾರ್ ಅವರ್ಗಳ್ ತಿರುನಾಡು ॥ ೬೦ ॥

ಅಂಬುಯೈಕ್ಕೋನ್ — ಶ್ರೀದೇವಿಯ ವಲ್ಲಭನಾದ ಭಗವಂತನು, ತನ್ ಗುರುವಿನ್ ತಾಳಿಣೈಗಳ್ ತನ್ನಿಲನ್ಬೊನ್ರಿಲ್ಲಾದಾರ್ — ಸ್ವಾಚಾರ್ಯರ ಪಾದಾರವಿಂದಗಳಲ್ಲಿ ಸ್ವಲ್ಪವೂ ಭಕ್ತಿ ಇಲ್ಲದವರುಗಳು. ತನ್ಪಾಲನ್ಬು ಶೆಯ್ದಾಲುಮ್ — ತನ್ನ ವಿಷಯದಲ್ಲಿ ಎಷ್ಟು ಭಕ್ತಿ ಮಾಡಿದರೂ, ತಾನ್ — ಅವನು ಆ ಆಚಾರ್ಯನನ್ನೇ ಪರದೈವವೆಂದು ಭಾವಿಸದೇ ಇರುವವರಿಗೆ, ಇನ್ಬಮಿಗು ವಿಣ್ಣಾಡು ಅಳಿಕ್ಕ ವೇಣ್ಡಿಯಿರಾನ್ — ಆನಂದಮಯವಾದ ಶ್ರೀ ವೈಕುಂಠವನ್ನು ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಆದಲಾಲ್ — ಆದುದರಿಂದ, ಅವರ್ಗಳ್ — ಅವರುಗಳು, ತಿರುನಾಡು — ಶ್ರೀ ವೈಕುಂಠವನ್ನು, ನಣ್ಣಾರ್ಗಳ್ — ಸೇರುವುದಿಲ್ಲ.

ಶ್ರೀ ವಚನಭೂಷಣದಲ್ಲಿ ಹೇಳುವ ಮುಖ್ಯವಾದ ವಿಷಯವನ್ನು ಪ್ರಕಾಶಿಸಬೇಕೆಂದು ಈ ಪಾಶುರದಿಂದ ಆರಂಭಮಾಡುತ್ತಾರೆ. ಸ್ವತಂತ್ರನಾದ ಭಗವಂತನನ್ನು ಆಶ್ರಯಿಸುವುದು, ಕೈಯನ್ನು ಹಿಡಿದುಕೊಂಡು, ತನ್ನ ಇಷ್ಟಾರ್ಥವನ್ನು ಅಪೇಕ್ಷಿಸುವಂತೆ. ಆದುದರಿಂದ ಇಷ್ಟಾರ್ಥ ಫಲಿಸಿದರೂ ಫಲಿಸಬಹುದು; ಫಲಿಸದೇ ಇದ್ದರೂ ಇರಬಹುದು. ಆಚಾರ್ಯನನ್ನು ಆಶ್ರಯಿಸಿದರೆ, ಭಗವಂತನ ತಿರುವಡಿಗಳನ್ನು ಆಶ್ರಯಿಸಿ ಪ್ರಾರ್ಥಿಸಿದಂತೆ ಆಗುತ್ತದೆ. ಆದ್ದರಿಂದ ಇಷ್ಟಾರ್ಥವು ಫಲಿಸಿಯೇ ಫಲಿಸುತ್ತದೆ. ಆಚಾರ್ಯಾಭಿಮಾನವೇ ನಮಗೆ ಅವಶ್ಯವೆಂಬ ವಿಷಯವು ನಿಶ್ಚಯಿಸಲ್ಪಟ್ಟಿದೆ.

***ಜ್ಞಾನಂ ಅನುಟ್ಟಾನಮಿವೈ ನನ್ರಾಗವೇ ಉಡೈಯನಾನ**
ಗುರುವೈ ಅಡೈನ್ದಕ್ಕಾಲ್, ಮಾನಿಲತ್ತೀರ್
ತೇನಾರ್ ಕಮಲ ತ್ತಿರುಮಾಮಗಳ್ ಕೊಳುನನ್,
ತಾನೇವೈಗುಂದಮ್ ತರುಮ್ ॥ ೬೧ ॥

ಮಾನಿಲತ್ತೀರ್ — ಮಹಾಪೃಥಿವಿಯಲ್ಲಿರುವವರೇ, ಜ್ಞಾನಂ ಅನುಷ್ಠಾನ ಮಿವೈ ನನ್ನಾಗವೇ ಉಡೈಯನಾನ — ಜ್ಞಾನವೇನು, ಅದನ್ನು ಆಚರಿಸುವುದೇನು, ಈ ಎರಡು ಭಾಗಗಳನ್ನು ಚೆನ್ನಾಗಿ ಪಡೆದಿರುವ, ಕುರುವೈ — ಗುರುವನ್ನು, ಅಡೈನ್ದಕ್ಕಾಲ್ — ಆಶ್ರಯಿಸಿದರೆ (ಈ ರೀತಿಯಾದ ಸದ್ಗುರುಗಳನ್ನು ಆಶ್ರಯಿಸಿದ್ದರಿಂದ ಈ ಶಿಷ್ಯನಿಗೆ) ತೇನ್ ಆರ್ ಕಮಲತ್ ತಿರುಮಾಮಗಳ್ ಕೊಳುನನ್ — ಜೇನು ತುಂಬಿರುವ ಕಮಲದ ಹೂವಿನಲ್ಲಿ ಅವತರಿಸಿದ ಶ್ರೀ ಮಹಾಲಕ್ಷ್ಮಿಗೆ ಪತಿಯಾದ ಶ್ರೀ ಭಗವಂತನು, ತಾನೇ — ತಾನಾಗಿಯೇ ಸಂತೋಷಪಟ್ಟು, ವೈಗುನ್ದಮ್ — ವೈಕುಂಠವನ್ನು, ತರುಮ್ — ಕೊಡುತ್ತಾನೆ.

ಆಳ್ವಾರ್ಗಳು ತಮ್ಮ ದಿವ್ಯ ಪ್ರಬಂಧಗಳಲ್ಲಿ "ಪಾಡುಗೆಳೋ, ಪಟ್ಟಿನ್" ಎಂಬುದಾಗಿಯೂ, "ಅಂಜಿರೈಯ ಮಡನಾರಾಯ್" ಎಂದೂ ಅನೇಕ ಕಡೆಗಳಲ್ಲಿ ಹೇಳಿದ್ದಾರೆ. ಕಾರಣವೇನೆಂದರೆ, ಆಚಾರ್ಯ ಸ್ಥಾನಗಳಲ್ಲಿ ಪಕ್ಷಿಗಳನ್ನು ಭಾವನೆ ಮಾಡಿ, ಎರಡು ರೆಕ್ಕೆಗಳನ್ನು ಜ್ಞಾನಕರ್ಮಗಳನ್ನಾಗಿ ಭಾವಿಸಿ ಜ್ಞಾನಾನುಷ್ಠಾನವಿರುವ ಗುರುಗಳನ್ನು ಆಶ್ರಯಿಸಿದರೇನೇ ವೈಕುಂಠ ಲೋಕ ಪ್ರಾಪ್ತಿಯೂ, ಎರಡರಲ್ಲಿ ಒಂದು ಇಲ್ಲದಿದ್ದರೂ, ಅಂಥಾ ಆಚಾರ್ಯ ಸಂಬಂಧವು ಪ್ರಯೋಜನವಾಗುವುದಿಲ್ಲವೆಂದು, ಆಳ್ವಾರುಗಳ ಅಭಿಪ್ರಾಯವಾದ್ದರಿಂದಲೇನೇ ಪಕ್ಷಿಗಳನ್ನು ಆಚಾರ್ಯರೆಂದು ಭಾವಿಸಿದ್ದಾರೆ. ಶ್ರೀ ಭಗವಂತನು ಮೋಕ್ಷವನ್ನು ಕೊಡುವುದಕ್ಕೆ ಶ್ರೀ ದೇವಿಯ ಪುರುಷಕಾರವು ಬೇಕಾಗಿದ್ದರೂ, ಸದಾಚಾರ್ಯ ಸಂಬಂಧವಿದ್ದರೆ, ತಾಯಿಯಾದ ಶ್ರೀ ದೇವಿಯ ಪುರುಷಕಾರವೂ, ಅವಶ್ಯವಿಲ್ಲವೆಂಬ ಅಭಿಪ್ರಾಯದಿಂದಲೇ "ತಾನೇ ವೈಗುನ್ದಂ ತರುಮ್" ಎಂದು ಹೇಳಿದ್ದಾರೆ.

ಉಯ್ಯ ನಿನೈವುಣ್ಡಾಗಿಲ್ ಉಂಗಳ್ ಗುರುಕ್ಕಳ್
ತಮ್ ಪದತ್ತೇ ವೈಯುಮ್ ಅನ್ಬುದನ್ನೈ ಇಂದ
ಮಾನಿಲತ್ತೀರ್, ಮೆಯ್ಯುರೈಕ್ಕೇನ್ ಪೈಯರವಿಲ್ ಮಾಯನ್
ಪರಮಪದಂ ಉಂಗಳುಕ್ಕಾಂ, ಕೈಯಿಲಂಗು ನೆಲ್ಲಿಕ್ಕನಿ ॥ ೬೨ ॥

ಇನ್ದ ಮಾನಿಲತ್ತೀರ್ — ಈ ಭೂಮಿಯಲ್ಲಿರುವ ಜನಗಳೇ, ಉಯ್ಯನಿನೈವು ಉಂಡಾಗಿಲ್ — ಉಜ್ಜೀವಿಸಬೇಕೆಂಬ ಆಸೆ ಇದ್ದರೆ, ಅನ್ಬುತನ್ನೈ — ಭಕ್ತಿಯನ್ನು, ಉಂಗುರುಕ್ಕಳ್ ತಂಪದತ್ತು — ನಿಮ್ಮ ಆಚಾರ್ಯರುಗಳ ಸಿರಿಯಡಿಗಳಲ್ಲಿ, ವೈಯುಂ — ಸಮರ್ಪಿಸಿರಿ, ಅದರಿಂದುಂಟಾಗುವ ಫಲವನ್ನು, ಮೆಯ್ಯುರೈಕ್ಕೇನ್ ಕೇಳ್ಮಿನ್ — ಸತ್ಯವಾಗಿ ಹೇಳುತ್ತೇನೆ ಕೇಳಿರಿ. ಪೈಯರವಿಲ್ ಮಾಯನ್ ಪರಮಪದಮ್ — ಶೇಷಶಾಯಿಯಾದ ಭಗವಂತನ ಸ್ಥಾನವಾದ ಪರಮಪದವು,

ಉಂಗಳುಕ್ಕು=ನಿಮ್ಮಗಳಿಗೆ, ಕೈಯಿಲಂಗು ನೆಲ್ಲಿಕ್ಕನಿಅಂ—ಕೈಯ್ಯಲ್ಲಿರುವ ನೆಲ್ಲಿಕಾಯಿಯಂತೆ ಬಹಳ ಸುಲಭಸಾಧ್ಯವಾಗುವ್ವದು. ಅಂದರೆ, ಮೋಕ್ಷದಲ್ಲಿ ಅನುಭವಿಸುವ ಸುಖವೆಂದರೆ ಭಗವಂತನ ಸ್ವರೂಪ ರೂಪಗುಣ ವಿಭವ ಐಶ್ವರ್ಯ ವನ್ನೆಲ್ಲಾ ಈ ಭೂಲೋಕದಲ್ಲಿದ್ದೇ ಅನುಭವಿಸಬಹುದು.

ಆಚಾರಿಯನ್ ಶೆಯ್‍ದ ಉಪಕಾರಮಾನವದು
ತೂಯ್‍ದಾಹ ನೆಂಜುತನ್ನಿಲ್ ತೋನ್ರುಮೇಲ್,
ದೇಶಾನ್ತರತ್ತಿಲ್ ಇರುಕ್ಕ ಮನಮ್ ತಾನ್ ಪೊರುನ್ದ
ಮಾಟ್ಟಾದು, ಇರುತ್ತಲಿನಿ ಏದರಿಯೋಂ ಯಾಮ್ || ೬೩ ||

ಆಚಾರಿಯನ್‍ಶೆಯ್‍ದ—ಆಚಾರ್ಯರು ಮಾಡಿರುವ, ಉಪಕಾರಮಾನ ವದು=ಮಹೋಪಕಾರವು, ತೂಯ್‍ದ್ ಆಹ=ಪರಿಶುದ್ಧವಾಗಿ (ಚೆನ್ನಾಗಿ)=ನೆಂಜುತನ್ನಿಲ್ ತೋನ್ರುಂ ಏಲ್=ಮನಸ್ಸಿನಲ್ಲಿ ತೋರಿದ್ದೇ ಆದರೆ, ದೇಶಾನ್ತ ರತ್ತಿಲ್ ಇರುಕ್ಕ=ಆ ಆಚಾರ್ಯನನ್ನು ಬಿಟ್ಟು ಬೇರೆ ದೇಶದಲ್ಲಿ ವಾಸಮಾಡಲು, ಮನಂತಾನ್ ಪೊರುನ್ದ ಮಾಟ್ಟಾದು—ಆಶೆಯೇ ಉಂಟಾಗಲಾರದು. ಇನಿ=ಹೀಗಿದ್ದಮೇಲೆ, ಇರುತ್ತಲ್=ಆಚಾರ್ಯನನ್ನು ಬಿಟ್ಟು ಇರುವುದಕ್ಕೆ, ಏದು ದಾಂ ಅರಿಯೋಮ್—ಕಾರಣವನ್ನು ನಾವು ತಿಳಿಯಲಾರೆವು.

ಕಬ್ಬಿಣವನ್ನು ಚಿನ್ನವನ್ನಾಗಿ ಮಾಡುವಂತೆ, ಆಚಾರ್ಯರು ತನಗೆ ಮಾಡಿದ ಮಹೋಪಕಾರವು ಶಿಷ್ಯನ ಹೃದಯದಲ್ಲಿ ಸ್ಪಷ್ಟವಾಗಿ ತೋರಿದ್ದೇ ಆದರೆ, ವಾಸ ಮಾಡುವ ಸ್ಥಳವು ಆಚಾರ್ಯರ ಸನ್ನಿಧಿಯೇ ಎಂದು ಒಂದು ಕ್ಷಣವೂ ಬಿಡದೇ ಇರತಕ್ಕದ್ದು ನ್ಯಾಯವಾಗಿದೆ. ಬಿಟ್ಟಿರುವುದಕ್ಕೆ ಅವರ ಪ್ರಬಲವಾದ ಪಾಪವೇ ಕಾರಣವಾಗಿದೆ.

ತನ್ನಾರಿಯನುಕ್ಕುತ್ತಾನ್ ಅಡಿಮೈ ಶೆಯ್‍ವದು,
ಅವನ್ ಇನ್ನಾಡುದನ್ನಿಲ್ ಇರುಕ್ಕುಂನಾಳ್,
ಅನ್ನೇರ್ ಅರಿಂದುಂ ಅದಿಲಾಶೈಯಿನ್ರಿ ಆಚಾರಿಯನೈ
ಪ್ಪಿರಿಂದಿರುಪ್ಪಾರ್ ಮನಮೇ ಪೇಶು || ೬೪ ||

ತನ್ನಾರಿಯನುಕ್ಕು=ತನ್ನ ಆಚಾರ್ಯನಿಗೆ, ತಾನ್ ಅಡಿಮೈ ಶೆಯ್‍ವದು=ಶಿಷ್ಯನಾದ ತಾನು ಆಚಾರ್ಯನಿಗೆ ಮಾಡಬೇಕಾದ ಸೇವೆಯು, ಅವನ್ ಇನ್ನಾಡು ದನ್ನಿಲ್ ಇರುಕ್ಕುಂನಾಳ್=ಆ ಆಚಾರ್ಯರು ಈ ಲೋಕದಲ್ಲಿರುವವರೆಗೂ,

ಅನ್ನೇರ್ ಅರಿಂದು—ಆ ಮಾರ್ಗವನ್ನು ತಿಳಿದೂ, ಅದಿಲ್ ಆಶೈ ಇನ್ರಿ—ಆ ಆಚಾರ್ಯರ ಕೈಂಕರ್ಯದಲ್ಲಿ ಆಸೆಯಿಲ್ಲದೆ, ಆಚಾರಿಯನೈಪ್ಪಿರಿಂದು ಇರುಪ್ಪಾರ್ ಆರ್—ಆಚಾರ್ಯನನ್ನು ಬಿಟ್ಟು ಬೇರೆ ಕಡೆ ವಾಸಮಾಡುವವರು ಯಾರು? ಮನಮೇ ಪೇಶು—ಮನಸ್ಸೇ ನೀನು ಹೇಳು. ಆ ಆಚಾರ್ಯನಲ್ಲಿ ಅರ್ಥವನ್ನು ಕೇಳುವವರಿಗೂ ಸೇವೆಯನ್ನು ಮಾಡಬೇಕು. ಅರ್ಥವನ್ನು ಕೇಳಿ ಮುಗಿದ ಮೇಲೆ, ಬೇರೆ ಎಲ್ಲಿಯಾದರೂ ಬಾಳೋಣವೆಂದು ನೆನೆಯುವುದು ತಕ್ಕದಲ್ಲ. ಆಚಾರ್ಯರು ಈ ಲೋಕದಲ್ಲಿರುವವರೆಗೂ, ಪ್ರತಿದಿವಸವೂ ಅವರ ಸೇವೆಯನ್ನು ಮಾಡಿಯೇ ಬಾಳಬೇಕೆಂಬ ಶಾಸ್ತ್ರಾರ್ಥವು ಇದರಿಂದ ವ್ಯಕ್ತವಾಯಿತು.

ಆಚಾರಿಯನ್ ಶಿಚ್ಚನಾರುಯಿರೈಪ್ ಪೇಣುಮವನ್,
ತೇಶಾರುಂ ಶಿಚ್ಚನವನ್ ಶೀರ್‌ವಡಿವೈ, ಆಶೈಯುಡನ್
ನೋಕ್ಕುಮವನೆನ್ನುಂ ನುಣ್ಣರಿವೈಕ್ ಕೇಟ್ಟು ವೈತ್ತುಂ,
ಆರ್ಕ್ಕುಂ ಅನ್ನೇರ್ ನಿರ್ಕೈ ಅರಿದಾಂ || ೬೫ ||

ಆಚಾರಿಯನ್—ಆಚಾರ್ಯರು, ಶಿಚ್ಚನ್ ಆರುಯಿರೈಪ್ ಪೇಣುಮವನ್—ಶಿಷ್ಯನ ಆತ್ಮಸ್ವರೂಪವನ್ನು ನೋಡತಕ್ಕವನು. ತೇಶು ಆರುಂ ಶಿಚ್ಚನವನ್—ಸ್ವರೂಪ ಯಾಥಾತ್ಮ್ಯಜ್ಞಾನವೆಂಬ ತೇಜಸ್ಸಿನಿಂದ ತುಂಬಿರುವ ಶಿಷ್ಯನೋ ಎಂದರೆ, ಅವನ್ ಶೀರ್ ವಡಿವೈ—ಆ ಆಚಾರ್ಯರ ದಿವ್ಯವಾದ ದೇಹವನ್ನು, ಆಶೈಯುಡನ್ ನೋಕ್ಕುಮವನ್—ಭಕ್ತಿಯಿಂದ ನೋಡಿಕೊಳ್ಳಬೇಕು. ಎನ್ನುಂ ನುಣ್ ಅರಿವೈ—ಎನ್ನುವಂತಹ ವಿಶೇಷಾರ್ಥವನ್ನು, ಕೇಟ್ಟು ವೈತ್ತುಂ—ಶ್ರೀವಚನಭೂಷಣಾದಿಗಳಿಂದ ಕೇಳಿದ್ದರೂ, ಅನ್ನೇರ್ ನಿರ್ಕೈ—ಈ ಅರ್ಥವನ್ನು ಆಚರಿಸುವುದು, ಆರ್ಕ್ಕುಂ ಅರಿದು ಆಂ—ಎಂತಹವರಿಗೂ ಕಷ್ಟಸಾಧ್ಯವಾದದ್ದೇ ಆಗಿರುತ್ತದೆ.

ಪಿನ್ಬಳಗರಾಂ ಪೆರುಮಾಳ್ ಜೀಯರ್
ಪೆರುಂದಿವತ್ತಿಲ್, ಅನ್ಬದುವು ಅತ್ತು ಮಿಕ್ಕ ಆಶೈಯಿನಾಲ್,
ನಂಬಿಳ್ಳೈಕ್ಕು ಆನ ಅಡಿಮೈಗಳ್ ಶೆಯ್ ಅನ್ನಿಲೈಯೈ
ನನ್ನೆಂಜೇ, ಊನಮರ ಎಪ್ಪೊಳುದುಂ ಓರ್ || ೬೬ ||

ಪಿನ್ಬಳಗರಾಂಪೆರುಮಾಳ್‌ಜೀಯರ್ ಎಂಬ ಆಚಾರ್ಯರು ಅವರು, ಪೆರುಂತಿವತ್ತಿಲುಂ—ಪರಮಪದವಾಸದಲ್ಲೂ, ಅನ್ಬು ಅದು ಅತ್ತು—ಆಸೆ ಇಲ್ಲದವರಾಗಿ, ಮಿಕ್ಕ ಆಶೈಯಿನಾಲ್—ಪರಮಭಕ್ತಿಯಿಂದ; ನಂಬಿಳ್ಳೈಕ್ಕಾನ

ಅಡಿಮೈಗಳ್ ಶೈ = ತಮ್ಮ ಆಚಾರ್ಯರಾದ ನಂಬಿಳ್ಳೈಗಳಿಗೆ ಅನುಕೂಲವಾದ ಸೇವೆಯನ್ನು ಮಾಡಿದ, ಅನ್ನಿಲೈಯೈ = ಆ ನಿಷ್ಠೆಯನ್ನು, ನನ್ನೆಂಜೇ — ಒಳ್ಳೆಯ ಮನಸ್ಸೇ! ಊನಂ ಅರ = ಸ್ವಲ್ಪವೂ ಲೋಪಮಾಡದೆ, ಪೂರ್ಣವಾಗಿ, ಎಪ್ಪೊಳುದುಂ ಕೊಳ್ — ಸರ್ವಕಾಲದಲ್ಲೂ ನೆನೆಯುತ್ತಿರು.

ನಂಬಿಳ್ಳೈಗಳನ್ನು ಗುರುಗಳನ್ನಾಗಿ ಆಶ್ರಯಿಸಿದ್ದವರು ಅನೇಕರಿದ್ದರೂ, ಪಿನ್ಬಳಗರಾಂ ಪೆರುಮಾಳ್ ಜೀಯರ್ ಅವರಿಗೆ ಇದ್ದ ಆಚಾರ್ಯ ವಿಶ್ವಾಸವು ವಾಙ್ಮನಗೋಚರವಾದದ್ದು. ನಂಬಿಳ್ಳೈಗಳಿಗೆ ನಿತ್ಯಕೈಂಕರ್ಯವನ್ನು ಮಾಡಬೇಕೆಂದೇ ಕೆಲವು ಔಷಧಗಳನ್ನು ಸೇವನೆಮಾಡಿ ತಮ್ಮ ಶರೀರವನ್ನು ಪೋಷಿಸುತ್ತಿದ್ದರೆಂದು ಇವರ ಚರಿತ್ರೆಯಿಂದ ತಿಳಿಯಬರುತ್ತದೆ. ಇವರಂತೆ ಸೇವೆ ಮಾಡದಿದ್ದರೂ, ಇವರ ಸ್ವಭಾವವನ್ನು ಧ್ಯಾನ ಮಾಡಿದರೂ ಅದೊಂದೇ ನಮ್ಮಗಳಿಗೆ ಉಜ್ಜೀವನ ಎಂಬುದಾಗಿ ಪ್ರಕಾಶಪಡಿಸಿದ್ದಾರೆ.

ಆಚಾರ್ಯರ್ಗಳನೈವರುಂ ಮುನ್ ಆಚರಿತ್ತ
ಆಚಾರತ್ತೈ ಅರಿಯಾದಾರ್,
ಪೇಶುಗಿನ್ರ ವಾರ್ತೈಗಳೈ ಕ್ಕೇಟ್ಟು ಮರುಳಾದೇ,
ಪೂರುವರ್ಗಳ್ ಶೀರ್ತ ನಿಲೈ ತನ್ನೈ ನೆಂಜೇ ಶೇರ್ || ೬೭ ||

ಆಚಾರ್ಯರ್ಗಳ್ ಅನೈವರುಂ ಮುನ್ ಆಚರಿತ್ತ = ಪೂರ್ವದಲ್ಲಿದ್ದ ಆಚಾರ್ಯರುಗಳೆಲ್ಲರೂ ನಡೆಸುತ್ತಿದ್ದ, ಆಚಾರತ್ತೈ = ಅನುಷ್ಠಾನವನ್ನು, ಅರಿಯಾದಾರ್ — ತಿಳಿಯದವರು, ಪೇಶುಗಿನ್ರ = ಮನಸ್ಸಿಗೆ ಬಂದಂತೆ ಹೇಳುವ, ವಾರ್ತೈಗಳೈ ಕ್ಕೇಟ್ಟು — ಮಾತುಗಳನ್ನು ಕೇಳಿ, ಮರುಳಾದೇ (ಮರುಳಾಗದೆ), ಮನಸ್ಸು ಆ ದಾರಿಗೆ ತಿರುಗದಂತೆ, ಪೂರುವರ್ಗಳ್ ಶೀರ್ತನಿಲೈ ತನ್ನೈ = ಹಿಂದಿನವರ ಶ್ರೇಷ್ಠವಾದ ದಾರಿಯನ್ನೇ, ನೆಂಜೇ ಶೇರ್ — ಮನಸ್ಸೇ ಅನುಸರಿಸು.

ಹೊಸದಾಗಿ ಕೆಲವರು ಸ್ವೇಚ್ಛವರಾಗಿ, ಹೊಸ ಹೊಸದಾದ ನಡತೆಗಳನ್ನು ವಿವರಿಸಿ, ಇದನ್ನು ನಡೆಸಬೇಕೆಂದು ಹೇಳಿ, ಬುದ್ಧಿಯನ್ನು ತಿರುಗಿಸಲು ಪ್ರಯತ್ನ ಪಡುತ್ತಾರೆ. ನಮ್ಮ ಪೂರ್ವಾಚಾರ್ಯರುಗಳ ಅನುಷ್ಠಾನ ಕ್ರಮಗಳನ್ನು ತಿಳಿಯದೇ ಇರುವ, ಅಂತಹವರ ಆ ಮಾತುಗಳಿಂದ ಬುದ್ಧಿ ಬದಲಾವಣೆಯಾಗದಂತೆ ಆಂಡಾಳ್ ಹೇಳಿದ ಕ್ರಮದಲ್ಲಿ "ಶೆಯ್ಯಾದನ ಶೆಯ್ಯೋಂ" "ಮೇಲೈಯಾರ್ ಶೆಯ್ವನಗಳ್" ಎನ್ನುವಂತೆ ಅನುಷ್ಠಿಸಬೇಕೆಂಬುದಾಗಿ ಉಪದೇಶಿಸಿದ್ದಾರೆ.

ನಾಸ್ತಿಕರುಂ ನಲ್ಕ್ರಿಯೆಯಿಂ ನನ್ನೇರಿಕೇಳ್ ಆಸ್ತಿಕರುಂ,
ಆಸ್ತಿಕನಾಸ್ತಿಕರು ಮಾಮಿವರ್ಕೆ, ಓರ್ವ್ವ ನೆಂಜೇ!
ಮುನ್ನವರುಂ ಪಿನ್ನವರುಂ ಮೂರ್ಖರೆನಿಪ್ಪರ್,
ನಡುವಣೊನ್ನವರ್ಕೆ ನಾಳುಂ ಕೂಡಿರ್ ॥ ೭೮ ॥

ನಾಸ್ತಿಕರುಂ—ನಾಸ್ತಿಕರೂ, ನಲ್ಕ್ರಿಯೆಯಿಂ ನನ್ನಿ ಕೇಳಾಸ್ತಿಕರುಂ—ಶ್ರೇಷ್ಠವಾದ ಶಾಸ್ತ್ರಾನುಸಾರವಾದ ಮಾರ್ಗದಲ್ಲಿರುವ ಆಸ್ತಿಕರುಗಳೂ, ಆಸ್ತಿಕನಾಸ್ತಿಕರುಂ—ಆಸ್ತಿಕ ನಾಸ್ತಿಕರುಗಳೂ, ಆಂ ಇವರ್ಕೆ=ಆಗಿರುವ ಈ ಮೂರು ಬಗೆಯವರನ್ನು, ಓರ್ವ್ವ—ಚೆನ್ನಾಗಿ ಪರಿಶೀಲಿಸು, ನೆಂಜೇ=ಮನಸ್ಸೇ, ಮುನ್ನವರುಂ ಪಿನ್ನವರುಂ=ಮೊದಲು ಹೇಳಿದ ನಾಸ್ತಿಕರೂ, ಕೊನೆಯಲ್ಲಿ ಹೇಳಿದ ಆಸ್ತಿಕನಾಸ್ತಿಕರೂ, ಮೂರ್ಖರೆನಿಪ್ಪರ್—ನರಕವಿಸುವುದಕ್ಕಾಗಿದ ಮೂರ್ಖರೆಂಬುದಾಗಿ ಅವರನ್ನು ತ್ಯಜಿಸು. ನಡುವಣೊನ್ನವರ್ಕೆ—ಮಧ್ಯದಲ್ಲಿ ಹೇಳಿದ ಆಸ್ತಿಕರುಗಳನ್ನು, ನಾಳುಂ ಕೂಡಿರ್—ದಿನಗಳೂ ಅನುಸರಿಸು.

ಒಳ್ಳೆಯವರ ಸಹವಾಸ—

ನಲ್ಲ ಪರಿಮಳಮುಳ್ಳ ಪೂರ್ಗೆ, ನಲ್ಲೆಯಿರುತ್ತುದರ್ಕೆ
ನಲ್ಲ ಮಣಮುಂಟಾಂ ಸಂಬಂಧದಿಂದೊಲ್, ನಲ್ಲಗುಣ
ಮುಳ್ಳರೊಳ್ ತಂಗೆರ್ದೊಡೆ ಕೂಡಿರುವರಪ್ಪರ್ಗೆ
ಗುಣಮುಮಪ್ಪುದೆಯಾಂ ಕೇಳ್ ಚಿತ್ತಕೊಂಡು ॥ ೭೯ ॥

ನಲ್ಲ ಪರಿಮಳಮುಳ್ಳ ಪೂರ್ಗೆ—ಒಳ್ಳೆಯ ವಾಸನೆಯುಳ್ಳ ಒಂದು ವಸ್ತುವಿನೊಡನೆ ಸೇರಿರುವ ಒಂದು ಪದಾರ್ಥಕ್ಕೆ, ನಲ್ಲಮಣಮುಂಟಾಂ—ಒಳ್ಳೆಯ ವಾಸನೆಯುಂಟಾಗುವಂತೆ, ಸಂಬಂಧದಿಂದೊಲ್—ಸೇರುವಿಕೆಯ ಬಲದಿಂದ ಒಳ್ಳೆಯ ವಾಸನೆಯುಂಟಾಗುವಂತೆ, ನಲ್ಲಗುಣ ಮುಳ್ಳರೊಳ್ ತಂಗಳವರ್—ಒಳ್ಳೆಯ ಗುಣಶಾಲಿಗಳೊಡನೆ, ಕೂಡಿರುವರಪ್ಪರ್ಗೆ—ಸಹವಾಸ ಮಾಡಿದವರಿಗೆ, ಚಿತ್ತಕೊಂಡು—ಆ ಸಂಬಂಧದ ಬಲದಿಂದ, ಅಪ್ಪುದೇಗುಣಂ ಅಂ—ಆ ಒಳ್ಳೆಯ ಗುಣವೇ ಉಂಟಾಗುತ್ತದೆ.

ಅಸತ್ಸಹವಾಸ ವರ್ಜನ—

ತೀಯಗನ್ಧಮುಳ್ಳದೊನ್ರೈಚ್ಚೇರ್ನ್ದಿರುಪ್ಪದೊನ್ರುಕ್ಕು
ತೀಯಗನ್ಧಮೇರುಂ ತಿರಮದುಪೋಲ್, ತೀಯಗುಣ
ಮಿಕ್ಕ್ಯೋರ್ ತಂಗಳುಡನ್ ಕೂಡಿಯಿರುಪ್ಪಾರ್ಕ್ಕು
ಗುಣಮದುವೇಯಾಂ ಶೆರಿವುಕೊಂಡು || ೭೦ ||

ತೀಯಗನ್ಧಮುಳ್ಳದೊನ್ರೈ = ಕೆಟ್ಟ ವಾಸನೆಯುಳ್ಳ ಒಂದು ವಸ್ತುವನ್ನು, ಶೇರ್ನ್ದಿರುಪ್ಪದೊನ್ರುಕ್ಕು = ಸೇರಿಕೊಂಡಿರುವ ಒಂದು ವಸ್ತುವಿಗೆ, ತೀಯಗನ್ಧ ಮೇರುಂ ತಿರಮದುಪೋಲ್ = ಕೆಟ್ಟ ವಾಸನೆಯೇ ಉಂಟಾಗುವಂತೆ, ತೀಯಗುಣ ಮಿಕ್ಕ್ಯೋರ್ ತಂಗಳುಡನ್ = ಕೆಟ್ಟ ಗುಣವುಳ್ಳ ಜನರೊಡನೆ, ಕೂಡಿ ಇರುಪ್ಪಾರ್ಕ್ಕು — ಕೂಡಿಯಿರುವವರಿಗೆ, ಶೆರಿವುಕೊಂಡು ಅದುವೇ ಗುಣಂ ಆಂ = ಆ ಸಂಬಂಧದಿಂದ ಆ ಕೆಟ್ಟ ಗುಣವೇ ಬರುತ್ತದೆ. ಆದಕಾರಣ ದುಷ್ಟ ಸಹವಾಸವನ್ನು ತ್ಯಜಿಸಬೇಕು.

*ಮುನ್ನೋರ್ ಮೊಳಿನ್ದ ಮುರೈತಪ್ಪಾಮಲ್ ಕೇಟ್ಟು
ಪಿನ್ನೋರ್ನ್ದು ತಾಮದನೈಪ್ಪೇಸಾದೇ, ತನ್ನೆಂಜಿಲ್
ತೋನ್ರಿನದೇ ಶೊಲ್ಲಿ ಇದು ಶುದ್ಧ ಉಪದೇಶವರ
ವಾರೆನ್ಬರ್ ಮೂರ್ಖರಾವಾರ್ || ೭೦ ||

ಮುನ್ನೋರ್ ಮೊಳಿನ್ದ = ಪೂರ್ವಾಚಾರ್ಯರು ಹೇಳಿದ್ದನ್ನು, ಮುರೈತಪ್ಪಾಮಲ್ ಕೇಟ್ಟು — ಕ್ರಮವಾಗಿ ರೂಪವನ್ನು ಬಿಡದೆ, ಸದಾಚಾರ್ಯರಲ್ಲಿ ಕೇಳಿ ತಿಳಿದುಕೊಂಡು, ಪಿನ್ ಓರ್ನ್ದು = ಅಮೇಲೆ ಆ ಅರ್ಥವನ್ನು ಚಿಂತನೆಮಾಡಿ, ತಾಮ್ ಅದನೈಪ್ಪೇಸಾದೇ — ತಾವುಗಳು ಆಚಾರ್ಯರಿಂದ ಉಪದೇಶ ಪ್ರಾಪ್ತವಾದ ರೀತಿಯಲ್ಲಿ ಹೇಳದೆ, ತನ್ನೆಂಜಿಲ್ = ತಮ್ಮ ಮನಸ್ಸಿನಲ್ಲಿ, ತೋನ್ರಿನದೇ ಶೊಲ್ಲಿ = ತಮಗೆ ತೋಚಿದಂತೆ ಅರ್ಥವನ್ನು ಹೇಳಿ, ಇದು = ಈ ಅರ್ಥವೇ, ಶುದ್ಧ ಉಪದೇಶ ವರವಾರ್ ಅತ್ತು ಎನ್ಬರ್ = ಇದೇ ಉಪದೇಶ ಪರಂಪರಾಪ್ರಾಪ್ತವಾಗಿ ಬಂದ ಸರಿಯಾದ ಅರ್ಥವೆಂದು ಹೇಳುವವರೇ, ಮೂರ್ಖರಾವಾರ್ — ಮೂರ್ಖರೆಂದು ಹೆಸರಾಗುವರು.

ವಾಚಾಮಗೋಚರವಾದ ಮಹಿಮೆಯುಳ್ಳ ಶ್ರೀ ವಚನಭೂಷಣ ದಿವ್ಯ ಶಾಸ್ತ್ರದಲ್ಲಿ ನಂಬಿಕೆ ಇರುವುದು ನ್ಯಾಯವಾಗಿದ್ದರೂ, ಆ ರೀತಿ ನಂಬಿಕೆ ಇಲ್ಲದ,

ಈ ಶಾಸ್ತ್ರಾರ್ಥಗಳನ್ನು ದೂಷಿಸುವಂತಹ ಕೆಲವರು ಇದ್ದರು. ಅವರುಗಳು ಪೂರ್ವಾಚಾರ್ಯರುಗಳ ಬಳಿ ಸಂಪ್ರದಾಯಾರ್ಥವನ್ನು ಕೇಳದವರಲ್ಲ. ಪೂರ್ವಾಚಾರ್ಯರ ಅರ್ಥವನ್ನು ಕೇಳಿ, ಹಾಗೆಯೇ "ಹೇಳಬೇಕು" ಎನ್ನುವರೂ ಅಲ್ಲ. ಮನಸ್ಸಿಗೆ ತೋಚಿದಂತೆ ಹೇಳುವರು. ಹಾಗೆ ಹೇಳುವುದು ಮಾತ್ರವಲ್ಲದೆ ಸದಾಚಾರ್ಯರಿಂದ ಕೇಳಿ ಹೇಳುವುದಾಗಿ ಅಸತ್ಯವನ್ನು ಹೇಳುತ್ತಾ ಲೋಕವನ್ನೇ ವಂಚಿಸುತ್ತಿದ್ದರು; ಅಲ್ಲದೆ ಸದಾಚಾರ್ಯರನ್ನು ದೂಷಿಸುವುದನ್ನೂ ಸಹ ಮಾಡುತ್ತಿದ್ದರು. ಆದುದರಿಂದ ಈ ಪಾಶುರವು ಅವತರಿಸಿತು.

ಉಪದೇಶದ ಮುಖ್ಯಾಂಶ—

"ಪೂರುವಾಚಾರಿಯರ್ಗಳ ಪೋದಂ ಅನುಟ್ಟಾನಂಗಳ್,
ಕೂರುವಾರ್ ವಾರ್ತ್ತೈಗಳೈ ಕೊಂಡು ನೀರ್ ತೇರಿ,
ಇರುಳ್ ತರುಮಾ ಜ್ಞಾಲತ್ತೇ ಇನ್ಬಮುಟ್ರು ವಾಳುಂ,
ತೆರುಳ್ ತರುಮಾ ದೇಶಿಕನೈ ಚ್ಚೇರ್ನ್ದು ॥ ೭೩ ॥

ಅನ್ನಧೀಯರುಗಳಿರಾ! ಪೂರ್ವಾಚಾರಿಯರ್ಗಳ್ = ಪೂರ್ವಾಚಾರ್ಯರುಗಳ ಪೋದಂ ಅನುಟ್ಟಾನಂಗಳ್ = ಜ್ಞಾನವನ್ನು ತದನುಗುಣವಾದ ಅನುಷ್ಠಾನವನ್ನೂ, ಕೂರ್ವಾರ್ = ವಿವರಿಸಿ ಹೇಳುವ ಮಹಾತ್ಮರುಗಳ, ವಾರ್ತ್ತೈಗಳೈಕ್ಕೊಂಡು ಶ್ರೀಸೂಕ್ತಿಗಳಿಂದ, ನೀರ್ ತೇರಿ = ನೀವುಗಳು ತಿಳಿವಾದ ಜ್ಞಾನವನ್ನು ಹೊಂದಿ, ತೆರುಳ್ತ್ತರುಂ = ಒಳ್ಳೆಯ ಜ್ಞಾನವನ್ನು ಉಪದೇಶಿಸುವ, ಮಾದೇಶಿಕನೈ = ಉತ್ಕೃಷ್ಟರಾದ ಆಚಾರ್ಯರನ್ನು, ಶೇರ್ನ್ದು = ಆಶ್ರಯಿಸಿ, ಇರುಳ್ ತರುಮಾ ಜ್ಞಾಲತ್ತೇ = ಅಜ್ಞಾನವನ್ನೇ ಕೊಡುವಂತಹ ಈ ಭೂಮಿಯಲ್ಲಿ, ಇನ್ಬಂ ಉಟ್ರು ವಾಳುಂ = ಆನಂದದಿಂದ ತುಂಬಿದವರಾಗಿ ಬಾಳಿರಿ.

ಹಿಂದಿನ ಪಾಶುರದಲ್ಲಿ ಹೇಳಿರುವಂತೆ ಮೂರ್ಖರ ಸಹವಾಸವನ್ನು ಬಿಟ್ಟು ನಮ್ಮ ಪೂರ್ವಾಚಾರ್ಯರುಗಳು ಉಪದೇಶಿಸಿದ ಅರ್ಥಗಳನ್ನೂ ಅನುಷ್ಠಾನಗಳನ್ನೂ ಹೇಳುವಂತಹ ಮಹನೀಯರುಗಳ ವಾಕ್ಯವನ್ನೇ ಅಧರಿಸಿ ನಿಧಿಯನ್ನಾಗಿಟ್ಟುಕೊಂಡು, ಮನಸ್ಸಿನಲ್ಲಿ ಕಲಗದೆ, ಸದಾಚಾರ್ಯರನ್ನು ಆಶ್ರಯಿಸಿ ಬಾಳಿದ್ದೇ ಆದರೆ ಅವರುಗಳಿಗೆ ಈ ಭೂಲೋಕವು ಅಜ್ಞಾನವನ್ನುಂಟುಮಾಡುವ ಲೋಕವಾಗಿ ತೋರದೆ ಈ ಲೋಕವೇ ಪರಮಪದವಾಗಿ ಬಾಳಬಹುದು.

ಫಲವನ್ನು ಹೇಳಿ ಮುಗಿಸುತ್ತಾರೆ—

ಇಂದ ಉಪದೇಶರತ್ತಿನ ಮಾಲೈತನ್ನೈ,
ಶಿಂದೈತನ್ನಿಲ್ ನಾಳುಂ ಶಿಂದಿಪ್ಪಾರ್, ಎನ್‌ದೈ
ಯತಿರಾಶರ್ ಇನ್ನರುಳುಕ್ಕು ಎನ್ರು ಇಲಕ್ಕಾಗಿ,
ಶದಿರಾಗ ವಾಳ್‌ನ್ದಿಡುವರ್ ತಾಮ್ ॥ ೭೩ ॥

ಇಂದ ಉಪದೇಶ ರತ್ತಿನ ಮಾಲೈ ತನ್ನೈ—ಉಪದೇಶ ರತ್ನಮಾಲೆ ಎಂಬ ಈ ಪ್ರಬಂಧವನ್ನು, ನಾಳುಂ—ಪ್ರತಿ ದಿವಸದಲ್ಲೂ, ಶಿಂದೈತನ್ನಿಲ್—ಹೃದಯದಲ್ಲಿ ಶಿಂದಿಪ್ಪಾರ್ ತಾಮ್—ಚಿಂತನೆ ಮಾಡುವವರುಗಳು, ಎಂದೈ ಯತಿರಾಶರ್ಕ—ನಮಗೆ ಸ್ವಾಮಿಗಳಾದ ಶ್ರೀ ರಾಮಾನುಜಾಚಾರ್ಯರ, ಇನ್ನರುಳುಕ್ಕು—ಪರಮ ಕೃಪೆಗೆ, ಎನ್ರುಂ ಇಲಕ್ಕಾಗಿ—ಯಾವಾಗಲೂ ಪಾತ್ರರಾಗಿ, ಶದಿರಾಗವಾಳ್‌ನ್ದಿಡುವರ್—ಯಾವ ಕೊರತೆಯೂ ಇಲ್ಲದೆ, ಚೆನ್ನಾಗಿ ಬಾಳುವವರಾಗುತ್ತಾರೆ.

ಶ್ರೀ ರಾಮಾನುಜಾಚಾರ್ಯರ ಮನಸ್ಸಿಗೆ ಇಂಬಾದ ವಿಷಯಗಳನ್ನೇ ಸೇರಿಸಿ ರಚಿಸಿದ ವಾಗ್ರೂಪವಾದ ಈ ಮಾಲೆಯನ್ನು ಹೃದಯದಲ್ಲೇ ಧರಿಸುವವರಿಗೆ, ಶ್ರೀ ರಾಮಾನುಜಾಚಾರ್ಯರ ಕೃಪೆಯೇ ಪುರುಷಾರ್ಥವೆಂದು ಮುಗಿಸಿದರು.

ಶ್ರೀ ರಾಮಾನುಜಾಚಾರ್ಯರು 74 ಸಿಂಹಾಸನಾಧಿಪತಿಗಳನ್ನು ನೇಮಕ ಮಾಡಿದವರಾದ್ದರಿಂದ, ಆ ಲೆಕ್ಕದಲ್ಲಿ 74 ಪಾಶುರಗಳನ್ನು ಮಾಡಿ ಮುಗಿಸಬೇಕೆಂದು ಸಂಕಲ್ಪಿಸಿದ್ದರಂತೆ. ಆ ಕಾಲದಲ್ಲೇ ಮಣವಾಳ ಮಾಮುನಿಗಳನ್ನು ದೈವವೆಂದೇ ಭಾವಿಸಿದ್ದ ಒಬ್ಬ ಮಹನೀಯರು "ಮನ್ನುಯಿರ್‌ಗಾಳ್ ಇಂಗೇ ಮಣವಾಳ ಮಾಮುನಿವನ್" ಎನ್ನುವ ಪಾಶುರವನ್ನು ರಚಿಸಿ ಈ ಪಾಶುರವನ್ನು ಉಪದೇಶ ರತ್ತಿನ ಮಾಲೆಯೊಡನೆ ಸೇರಿಸುವ ಅನುಸಂಧಾನ ಮಾಡಬೇಕೆಂದು ಪ್ರೀತಿಯೊಡನೆ ಶ್ರೀ ರಂಗನಾಥಸ್ವಾಮಿಯವರ ತಿರುವಡಿಗಳಲ್ಲಿ ಪ್ರಾರ್ಥಿಸಲು, ಆ ರೀತಿಯಲ್ಲೇ ರಂಗನಾಥಸ್ವಾಮಿಯವರ ನಿಯಮನವಾದ ಪ್ರಕಾರವು ಜ್ಞಾನವೃದ್ಧ ವಯೋವೃದ್ಧರುಗಳಿಂದ ತಿಳಿದ ವಿಷಯವಾಗಿದೆ. ಆದಕಾರಣದಿಂದಲೇ 73 ಪಾಶುರಗಳನ್ನೇ ಮಾಡಿ ಮುಗಿಸಿದರು. ಆ ಪಾಶುರವೇ ಮುಂದೆ ಹೇಳಲ್ಪಡುತ್ತದೆ.

ಎರುಂಬಿಯಪ್ಪಾ ಅವರು ಅನುಗ್ರಹಿಸಿದುದು—

ಮನ್ನುಯಿರ್‌ಗಾಳ್ ಇಂಗೇ ಮಣವಾಳ ಮಾಮುನಿವನ್,
ಪೊನ್ನಡಿಯಾಂ ಶೆಂಗಮಲಪ್ಪೋದುಗಳೈ,
ಉನ್ನಿಚ್ಚಿರತ್ತಾಲೇ ತೀಂಡಿಲ್ ಅಮಾನವನುಂ ನಮ್ಮೈ,
ಕರತ್ತಾಲೇ ತೀಣ್ಡಲ್ ಕಡನ್ ॥ ೭೪ ॥

ಮನ್ನು ಉಯಿರ್‌ಗಾಳ್ = ಮುಮುಕ್ಷುಗಳೇ, ಇಂಗೇ = ಈ ಭೂಮಿಯಲ್ಲಿ, ಮಣವಾಳ ಮಾಮುನಿವನ್ = ಮಣವಾಳ ಮಾಮುನಿಗಳ, ಪೊನ್ನಡಿಯಾಂ = ತಿರುವಡಿಗಳೆಂಬ, ಶೆಂಗಮಲಪ್ಪೋದುಗಳ್ = ಕೆಂದಾವರೆ ಹೂವುಗಳನ್ನು, ಉನ್ನಿ = ಇವುಗಳೇ ನಮಗೆ ರಕ್ಷಕವೆಂದು ನೆನೆದು, ಶಿರತ್ತಾಲೇ = ತಲೆಯಿಂದ, ತೀಂಡಿಲ್ = ಮುಟ್ಟಿದರೆ, ನಮ್ಮೈ = ಆ ರೀತಿ ಭಾಗ್ಯಶಾಲಿಗಳಾದ ನಮ್ಮನ್ನು, ಅಮಾನವನ್ = ಅಮಾನವನೆಂಬ ದಿವ್ಯಪುರುಷನು, ಕರತ್ತಾಲೇ ತನ್ನ ಕೈಗಳಿಂದ, ತೀಂಡಲ್ = ಮುಟ್ಟುವುದು ಕೂಡ್ತ್ ಕಡನ್ = ಅವನ ಕರ್ತವ್ಯವಾಗುವುದು (ಎಂದರೆ ಬ್ರಹ್ಮಪ್ರಾಪ್ತಿ ನಮಗೆ ಸಿದ್ಧ) ಎಂದು ಅರ್ಥ.

ಆಳ್ವಾರಾಚಾರ್ಯರುಗಳ ಮಹಿಮೆಯನ್ನು ಹೇಳುವುದಕ್ಕಾಗಿಯೇ ಅವತರಿಸಿದ ಈ ಪ್ರಬಂಧದಲ್ಲಿ, ಆಚಾರ್ಯ ಸಾರ್ವಭೌಮರಾದ ನಮ್ಮ ಮಣವಾಳ ಮಾಮುನಿಗಳ ಮಹಿಮೆಯನ್ನು ವಿಸ್ತರಿಸುವ ಪಾಶುರವು ಸೇರಿರುವುದೂ ಮುಖ್ಯವಾದ್ದರಿಂದಲೂ, ಆ ಪಾಶುರವು ಇದರಲ್ಲಿ ಇಲ್ಲದಿರುವುದು ಬಹಳ ಕೊರತೆಯಾದ್ದರಿಂದಲೂ ರಸವನ್ನು ಅರಿತ ಮಹನೀಯರು ಈ ಪಾಶುರವನ್ನು ಸೇರಿಸಿ ಈ ಪ್ರಬಂಧವನ್ನು ಪೂರ್ತಿ ಮಾಡಿದ್ದೂ ಬಹಳ ಶ್ಲಾಘ್ಯವಾದದ್ದು. ಈ ಲೋಕದಲ್ಲಿ ಸಂಸಾರ ಬಂಧನವನ್ನು ನೀಗಿ ಮೋಕ್ಷವನ್ನು ಹೊಂದುವ ಜೀವಾತ್ಮನಿಗೆ ಆ ಲೋಕದಲ್ಲಿ ಅಮಾನವ ಕರಸ್ಪರ್ಶವು ಉಂಟಾಗುವುದೆಂದೂ, ಆ ಅಮಾನವ ಕರಸ್ಪರ್ಶವೇ ನಿತ್ಯವಿಭೂತಿಯ ಐಶ್ವರ್ಯಕ್ಕೆ ಮೂಲವಾದ ಬೇರು ಎಂದೂ ಶಾಸ್ತ್ರಗಳು ಹೇಳುತ್ತವೆ. ಈ ಲೋಕದಲ್ಲಿ ಮಣವಾಳ ಮಾಮುನಿಗಳ ತಿರುವಡಿ ಸಂಬಂಧವನ್ನು ಹೊಂದಿದವರಿಗೆ ಈ ತಿರುವಡಿಗಳ ಸಂಬಂಧವೇ ಅಮಾನವ ಕರಸ್ಪರ್ಶಕ್ಕಿಂತಲೂ ಮೇಲಾದ್ದರಿಂದ ಅಲ್ಲಿನ ಆನಂದವೇ ಬೇಕಿಲ್ಲ. ಈ ಮಣವಾಳ ಮಾಮುನಿಗಳ ವೈಭವ ಬಹಳ ಶ್ಲಾಘ್ಯವಾದದ್ದು. ಆಚಾರ್ಯತ್ವವು ಇವರಿಗೇನೇ ಉಂಟಾದದ್ದು.

ಇತಿ ಉಪದೇಶ ರತ್ನಮಾಲಾ ವ್ಯಾಖ್ಯಾನವು ಸಂಪೂರ್ಣವಾಯಿತು.

ಆಳ್ವಾರ್, ಎಂಬೆರುಮಾನಾರ್, ಜೀಯರ್ ತಿರುವಡಿಗಳೇ ಶರಣಂ